ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜೂನ್ 22 ಭಾನುವಾರ 2025

ಸಂಪುಟ: 46 | ಸಂಚಿಕೆ: 66 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಅಕ್ರಮ ಗಣಿಗಾರಿಕೆ ತನಿಖೆ ನನೆಗುದಿಗೆ; ಸಚಿವರ ಬೇಸರ

- ಅಕ್ರಮ ಗಣಿಗಾರಿಕೆ ಪತ್ತೆ ಸಂಪುಟ ಉಪಸಮಿತಿ ಅಧ್ಯಕ್ಷರೂ ಆದ ಸಚಿವ ಎಚ್.ಕೆ.ಪಾಟೀಲ್ ಅಸಮಾಧಾನ
- ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ 7 ಪುಟಗಳ ಪತ್ರ; ಬೆಂಗಳೂರು to ಬಳ್ಳಾರಿ ಪಾದಯಾತ್ರೆ ಫಲವೇನಾಯ್ತು!
- ಸರ್ಕಾರದ ವೈಫಲ್ಯದ ವಿರುದ್ಧ ಕೃಷ್ಣ ಬೈರೇಗೌಡ, ಬಿ.ಆರ್.ಪಾಟೀಲ್ ಬಳಿಕ ಈಗ ಪಾಟೀಲ್ ಸರದಿ

ಬೆಂಗಳೂರು, ಜೂ. 21(ಕೆಎಂಶಿ)– ಅಕ್ರಮ ಗಣಿಗಾರಿಕೆ ವಿರುದ್ಧ ಪ್ರದೇಶ ಕಾಂಗ್ರೆಸ್ ಹೋರಾಟ ನಡೆಸಿ ಪ್ರಕರಣವನ್ನು ಸಿಬಿಐ(ತನಿಖೆ)ಗೆ ವಹಿಸುವಂತೆ ಮಾಡಿದರೂ, ಲಕ್ಷಾಂತರ ರೂ. ಅವ್ಯವಹಾರದ ತನಿಖೆಯಲ್ಲಿ ಯಾವುದೇ ಪ್ರಗತಿ ಆಗಿಲ್ಲ ಎಂದು ಅಕ್ರಮ ಗಣಿಗಾರಿಕೆ ಪತ್ತೆಗೆ ನೇಮಕವಾಗಿದ್ದ ಸಚಿವ ಸಂಪುಟ ಉಪಸಮಿತಿ ಅಧ್ಯಕ್ಷರಾಗಿದ್ದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ. ಪಾಟೀಲ್, ಮುಖ್ಯಮಂತ್ರಿ ಸಿದ್ದರಾಮಯ್ಯ ನಿಲುವಿಗೆ ಆಕ್ಷೇಪಿಸಿದ್ದಾರೆ.


ಸಿದ್ದರಾಮಯ್ಯ


ಹೆಚ್.ಕೆ.ಪಾಟೀಲ್

ಕಂದಾಯ ಸಚಿವ ಕೃಷ್ಣಬೈರೇಗೌಡ, ಮುಖ್ಯಮಂತ್ರಿ ಸಲಹೆಗಾರ, ಕಾಂಗ್ರೆಸ್‌ನ ಹಿರಿಯ ಶಾಸಕ ಬಿ.ಆರ್.ಪಾಟೀಲ್, ರಾಜ್ಯ ಆಡಳಿತದಲ್ಲಿನ ಭ್ರಷ್ಟಾಚಾರ, ವೈಫಲ್ಯದ ಬಗ್ಗೆ ಬಹಿರಂಗ ಹೇಳಿಕೆ ನೀಡಿದ ಬೆನ್ನಲ್ಲೇ ಪಾಟೀಲ್ ತಮ್ಮ ಸರ್ಕಾರದ ವಿರುದ್ಧ ಆಕ್ರೋಶಗೊಂಡಿದ್ದಾರೆ. ರಾಜಕಾರಣಿಗಳು ಹಾಗೂ ಆಡಳಿತಶಾಹಿ ನಡೆಸಿರುವ ಅಕ್ರಮ ಗಣಿಗಾರಿಕೆ ಬಗ್ಗೆ ಅನೇಕ ತನಿಖೆಗಳು ▶ 6ನೇ ಪುಟಕ್ಕೆ

> “ ಅಕ್ರಮ ಗಣಿಗಾರಿಕೆಯ ಹಣದ ಪ್ರಭಾವ ರಾಜ್ಯ ರಾಜಕೀಯದ ಮೇಲೆ ಭಾರೀ ದುಷ್ಪರಿಣಾಮ ಉಂಟು ಮಾಡಿದೆ. ಇದರಿಂದ ಬದುಕಿನ ಮೌಲ್ಯಗಳು, ರಾಜಕೀಯ ಶಿಸ್ತು, ಬದ್ಧತೆಗಳು, ಸೇವಾ ಪಥಗಳು ಎಲ್ಲದಕ್ಕೂ ಧಕ್ಕೆಯಾಗಿದೆ. ತನಿಖೆಗೆ ಒಳಪಟ್ಟವರು ಪೌರುಷದ ಮಾತುಗಳನ್ನು ಆಡುತ್ತಾರೆ, ಅಂತಹವರಿಗೆ ನಾವು ಬುದ್ಧಿ ಕಲಿಸಲು ಆಗುತ್ತಿಲ್ಲ.
> –ಹೆಚ್.ಕೆ.ಪಾಟೀಲ್, ಕಾನೂನು ಸಂಸದೀಯ ವ್ಯವಹಾರಗಳ ಸಚಿವ

ಲಂಚ ನೀಡಿದವರಿಗೆ ಮನೆಗಳ ಹಂಚಿಕೆ....

ನಾನು ಸತ್ಯ ಹೇಳಿದ್ದೇನೆ; ಬಿ.ಆರ್.ಪಾಟೀಲ್ ಆರೋಪ ಖಂಡಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್!

ಬೆಂಗಳೂರು, ಜೂ.21–ಲಂಚ ನೀಡಿದವರಿಗೆ ಮಾತ್ರ ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ ಎಂಬ ಆರೋಪ ನಿಜ. ನಾನು ಸತ್ಯವನ್ನೇ ಹೇಳಿದ್ದೇನೆ. ಎಂದು ಕಾಂಗ್ರೆಸ್‌ನ ಹಿರಿಯ ಶಾಸಕ ಬಿ.ಆರ್.ಪಾಟೀಲ್ ತಮ್ಮ ಹೇಳಿಕೆ ಸಮರ್ಥಿಸಿಕೊಂಡಿದ್ದಾರೆ. ಆದರೆ ಅವರ ಹೇಳಿಕೆಯನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಂಡಿಸಿದ್ದಾರೆ. ಅಂತಹ ಹೇಳಿಕೆಗಳನ್ನು ಒಪ್ಪಲು ಸಾಧ್ಯವಿಲ್ಲ ಎಂದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಆಳಂದ ಕ್ಷೇತ್ರದ ಕಾಂಗ್ರೆಸ್ ಶಾಸಕ ಪಾಟೀಲ್, ಬಹಿರಂಗವಾಗಿರುವ ಆಡಿಯೋದಲ್ಲಿರುವುದು ನನ್ನ ಧ್ವನಿ. ಸತ್ಯವನ್ನೇ ಮಾತನಾಡಿದ್ದೇನೆ. ನಾನು ಏನು ಮಾತನಾಡಬೇಕೋ ಅದನ್ನೇ ಹೇಳಿದ್ದೇನೆ, ಮುಖ್ಯಮಂತ್ರಿ ಏನು ಮಾಡುತ್ತಾರೋ ನನಗೆ ಗೊತ್ತಿಲ್ಲ. ಅವರು ನನಗೆ ಕರೆ ಮಾಡಿದರೆ ಅವರ ಬಳಿಗೆ ಹೋಗಿ ಮಾತನಾಡುತ್ತೇನೆ ಎಂದು ಹೇಳಿದರು.

ಈ ಸರ್ಕಾರದಲ್ಲಿ ಭ್ರಷ್ಟಾಚಾರ ಮುಂದುವರಿದಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಎಲ್ಲಾ ಸರ್ಕಾರಗಳ ಅವಧಿಯಲ್ಲಿ ಭ್ರಷ್ಟಾಚಾರ ನಡೆದಿದೆ. ಆದರೆ ನಾವು (ಕಾಂಗ್ರೆಸ್) ಜನಪರ ಆಡಳಿತದ ಭರವಸೆ ನೀಡಿ ಅಧಿಕಾರಕ್ಕೆ ಬಂದಿದ್ದು, ಅಂತಹವುಗಳು ನಡೆಯಬಾರದು ಎಂದರು.


ಬಿ.ಆರ್.ಪಾಟೀಲ್


ಡಿ.ಕೆ.ಶಿವಕುಮಾರ್

ಹಣ ಕೊಟ್ಟ ಮೇಲೆ ಮನೆ ಮಂಜೂರಾತಿ ನೀಡಲಾಗಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಶಾಸಕರು, ಎಲ್ಲ ಸಂದರ್ಭದಲ್ಲೂ ಅಲ್ಲ, ಐದಾರು ಪಂಚಾಯಿತಿಗಳಲ್ಲಿ ಹಣ ನೀಡಿ ಹಂಚಿಕೆ ಮಾಡಲಾಗಿದೆ. ನನ್ನ ಕ್ಷೇತ್ರದಲ್ಲಿ ಮನೆ ಮಂಜೂರು ಮಾಡುವಂತೆ ನಾಲ್ಕು ಬಾರಿ ಪತ್ರ ನೀಡಿದ್ದೆ ಏನೂ ಆಗಿಲ್ಲ, ಪಂಚಾಯಿತಿ ಅಧ್ಯಕ್ಷರು ಅದನ್ನು ಮಾಡಿದ್ದಾರೆ ಎಂದು ಹೇಳಿದರು.

ಸಿಎಂ ಸಿದ್ದರಾಮಯ್ಯ ನಮ್ಮ ನಾಯಕ ಎಂದ ಪಾಟೀಲ್, ಸಿಎಂ ಕರೆದರೆ ಅವರ ಬಳಿ ಹೋಗಿ ಮಾತನಾಡುತ್ತೇನೆ. ಏನಾಯಿತು ಎಂದು ಅವರಿಗೆ ಹೇಳುತ್ತೇನೆ ಎಂದರು. ಎಐಸಿಸಿ ಸ್ಪಷ್ಟನೆ ಕೇಳಿದ್ದರೆ ಏನು ಮಾಡ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಇಲ್ಲ ನಾನು ಎಐಸಿಸಿ ಮಟ್ಟಕ್ಕೆ ಬೆಳೆದಿಲ್ಲ. ಹಣಕ್ಕಾಗಿ ಮನೆ ▶ 6ನೇ ಪುಟಕ್ಕೆ

ಅಂತಿಮವಾಗದ ಸೀಟುಗಳ ಪಟ್ಟಿ: ಸಿಇಟಿ ಕೌನ್ಸಿಲಿಂಗ್ ಮತ್ತಷ್ಟು ವಿಳಂಬ

ಬೆಂಗಳೂರು: ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ–2025) ಫಲಿತಾಂಶ ಪ್ರಕಟವಾಗಿ ಒಂದು ತಿಂಗಳಾದರೂ ವಿವಿಧ ಕೋರ್ಸ್‌ಗಳಲ್ಲಿ ಲಭ್ಯವಿರುವ ಸೀಟುಗಳ ಪಟ್ಟಿ ಅಂತಿಮಗೊಂಡಿಲ್ಲ. ಹಾಗಾಗಿ, ಕೌನ್ಸಿಲಿಂಗ್ ಪ್ರಕ್ರಿಯೆ ಇನ್ನೂ ಒಂದು ವಾರ ವಿಳಂಬವಾಗಲಿದೆ. 2025–26ನೇ ಸಾಲಿನಲ್ಲಿ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶ ಬಯಸಿ 3.11 ಲಕ್ಷ ವಿದ್ಯಾರ್ಥಿಗಳು ಸಿಇಟಿ ಬರೆದಿದ್ದರು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೇ 24ರಂದು ಫಲಿತಾಂಶ ಪ್ರಕಟಿಸಿತ್ತು. ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ನಡೆದಿದ್ದ ರಾಷ್ಟ್ರೀಯ ಪ್ರವೇಶ ಮತ್ತು ಅರ್ಹತಾ ಪರೀಕ್ಷೆ (ನೀಟ್)–2025ರ ಫಲಿತಾಂಶವೂ ಇದೇ ಜೂ.14ರಂದು ಪ್ರಕಟವಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನೀಟ್ ಅಂಕಗಳ ಆಧಾರದಲ್ಲಿ ರಾಜ್ಯದಲ್ಲಿ ಲಭ್ಯವಿರುವ ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆ ಮಾಡುತ್ತದೆ. ಮೊದಲ ಸುತ್ತು ಮುಗಿಯುತ್ತಿದ್ದಂತೆ ಎಂಜಿನಿಯರಿಂಗ್ ಸೇರಿದಂತೆ ಇತರೆ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಆರಂಭಿಸುತ್ತದೆ. ಆದರೆ, ರಾಷ್ಟ್ರೀಯ ವೈದ್ಯಕೀಯ ಆಯೋಗ ಪ್ರವೇಶಕ್ಕೆ ಲಭ್ಯವಿರುವ ವೈದ್ಯಕೀಯ ಸೀಟುಗಳ ಪಟ್ಟಿ ಅಂತಿಮಗೊಳಿಸದ ಕಾರಣ ರಾಜ್ಯದಲ್ಲೂ ಸೀಟು ಹಂಚಿಕೆ ಪ್ರಕ್ರಿಯೆ ವಿಳಂಬವಾಗಿದೆ. ಸಿಇಟಿ ಮೂಲಕ ಹಂಚಿಕೆ ಆಗುವ ಸೀಟುಗಳಲ್ಲಿ ಪಶುವೈದ್ಯಕೀಯ, ಫಾರ್ಮಾ ಸೀಟು ▶ 6ನೇ ಪುಟಕ್ಕೆ

ನಾಪತ್ತೆಯಾಗಿದ್ದ ಮಾಜಿ ಯೋಧನ ಮೃತದೇಹ ಪತ್ತೆ

ಮಡಿಕೇರಿ,ಜೂ.21–ಚೆಟ್ಟಳ್ಳಿ ಕಂಡಕೆರೆ ನಿವಾಸಿ ಹಾಗೂ ಮಾಜಿ ಯೋಧ ಗಿರೀಶ್(46) ನಾಪತ್ತೆ ಪ್ರಕರಣ ದುರಂತ ಅಂತ್ಯ ಕಂಡಿದೆ. ಅವರ ಮೃತದೇಹ ಕಾವೇರಿ ನದಿಯಲ್ಲಿ ಪತ್ತೆಯಾಗಿದೆ.


ಗಿರೀಶ್

ಗಿರೀಶ್ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬ ಶಂಕೆಯೊಂದಿಗೆ ಅವರು ನಾಪತ್ತೆಯಾದ ದಿನದಿಂದಲೂ ಕುಶಾಲನಗರ ಪೊಲೀಸರು, ಅಗ್ನಿಶಾಮಕ ದಳ ಮತ್ತು ದುಬಾರೆ ರ್‍ಯಾಫ್ಟಿಂಗ್ ಸಿಬ್ಬಂದಿ ಎರಡು ರ್‍ಯಾಫ್ಟ್‌ಗಳನ್ನು ಬಳಸಿಕೊಂಡು ಶೋಧ ಕಾರ್ಯಾಚರಣೆ ನಡೆಸಿದ್ದರು. ನಿಸರ್ಗಧಾಮದ ಹಿಂದೆ ಕಾವೇರಿ ನದಿಯಲ್ಲಿ ಮೃತದೇಹವೊಂದು ತೇಲಿ ಬರುತ್ತಿರುವ ಬಗ್ಗೆ ರಕ್ಷಣಾ ತಂಡಕ್ಕೆ ಮಾಹಿತಿ ಲಭಿಸಿತ್ತು. ಒಂದು ಕೊಪ್ಪ ಸೇತುವೆ ಹಾಗೂ ಮತ್ತೊಂದು ತಂಡ ಕಾವೇರಿ ನಿಸರ್ಗಧಾಮದ ಬಳಿ ಶೋಧ ಕಾರ್ಯ ಕೈಗೊಂಡಿತ್ತು. ಈ ವೇಳೆ ಹೋಟೆಲ್ ಹಿಂದೆ ಕಾವೇರಿ ನದಿಯಲ್ಲಿ ಮೃತದೇಹ ಪತ್ತೆಯಾಗಿದ್ದು, ಪರಿಶೀಲಿಸಿದಾಗ ನಾಪತ್ತೆಯಾಗಿದ್ದ ಗಿರೀಶ್ ಅವರದ್ದು ಎಂಬುದನ್ನು ಅವರ ಕುಟುಂಬಸ್ಥರು ಖಚಿತಪಡಿಸಿದರು. ಬಳಿಕ ಮಹಜರು ನಡೆಸಿ ಮರಣೋತ್ತರ ಪರೀಕ್ಷೆಗಾಗಿ ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು. ಮೃತರು ಪತ್ನಿ, ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಮೃತ ಗಿರೀಶ್ ಕುಶಾಲನಗರದ ಪ್ರತಿಷ್ಠಿತ ಖಾಸಗಿ ಸಂಸ್ಥೆಯೊಂದರಲ್ಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಜೂ.18ರ ರಾತ್ರಿಯಿಂದ ಕಾಣೆಯಾಗಿದ್ದರು. ಈ ಸಂಬಂಧ ಅಲ್ಲಿನ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅವರ ಸ್ಕೂಟರ್ ಜೂ.19ರಂದು ಗುಡ್ಡೆಹೊಸೂರು ಬಳಿಯ ತೆಪ್ಪದ ಕಂಡಿ ಬಳಿ ಕಾವೇರಿ ತೀರದಲ್ಲಿ ಪತ್ತೆಯಾಗಿದ್ದ ಹಿನ್ನೆಲೆಯಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಕುಶಾಲನಗರ ಪಟ್ಟಣ ಠಾಣಾ ಪೊಲೀಸರು, ಅಗ್ನಿ ಶಾಮಕ ದಳದ ಸಿಬ್ಬಂದಿ ದುಬಾರೆಯ ರಿವರ್ ರ್‍ಯಾಫ್ಟರ್ ಸಿಬ್ಬಂದಿಯ ನೆರವಿನೊಂದಿಗೆ ಕಾವೇರಿ ನದಿಯಲ್ಲಿ ನಿರಂತರ ಶೋಧ ಕಾರ್ಯ ನಡೆಸುತ್ತಿದ್ದರು.

ಮೈಸೂರಲ್ಲಿ ಯೋಗ ಸಂಭ್ರಮ


ಮೈಸೂರು ಅರಮನೆ ಆವರಣದಲ್ಲಿ ಶನಿವಾರ ಅಂತರ ರಾಷ್ಟ್ರೀಯ ಯೋಗ ದಿನ ಆಚರಣೆ ಕಾರ್ಯಕ್ರಮದಲ್ಲಿ ಸಹಸ್ರಾರು ಯೋಗಪಟುಗಳು ಯೋಗ ಪ್ರದರ್ಶಿಸಿದರು.

ಮೈಸೂರು,ಜೂ. 21(ಎಂಟಿವೈ)– ಮೈಸೂರಿನ ಅರಮನೆ ಆವರಣದಲ್ಲಿ ಶನಿವಾರ 11ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಸಾವಿರಾರು ಯೋಗಪಟುಗಳು ಸಾಮೂಹಿಕ ಯೋಗ ಪ್ರದರ್ಶಿಸಿದರು.

ಸಹಸ್ರಾರು ಮಂದಿಯಿಂದ ಯೋಗ ಪ್ರದರ್ಶನ

ಜಿಲ್ಲಾಡಳಿತ, ಜಿಪಂ, ಆಯುಷ್ ಇಲಾಖೆ ವಿವಿಧ ಯೋಗ ಸಂಸ್ಥೆಗಳ ಸಹಯೋಗದಲ್ಲಿ ಅರಮನೆ ಆವರಣದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮಕ್ಕೆ ಮುಂಜಾನೆ 5 ಗಂಟೆಯಿಂದಲೇ ವಿವಿಧೆಡೆಗಳಿಂದ ಯೋಗಪಟುಗಳು ಉತ್ಸಾಹದಿಂದ ಆಗಮಿಸಿದರು. ವಿವಿಧ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಯೋಗ ಶಿಕ್ಷಣ ಸಂಸ್ಥೆಗಳ ಯೋಗಪಟುಗಳು, ಎನ್‌ಸಿಸಿ ಕೆಡೆಟ್‌ಗಳು, ವಿದೇಶಿಗರು, ವಿಶೇಷ ಮಕ್ಕಳು, ವಿವಿಧ ಸರ್ಕಾರಿ ಇಲಾಖೆಗಳ ನೌಕರರು ಸೇರಿದಂತೆ ಯೋಗಾಸಕ್ತರು ತಂಡೋಪತಂಡವಾಗಿ ಅರಮನೆ ಆವರಣ ಪ್ರವೇಶಿಸಿ, ಯೋಗಾಸನ ಪ್ರದರ್ಶಿಸಲು ನಿಗಧಿತ ಸ್ಥಳದಲ್ಲಿ ಸಿದ್ಧತೆ ಮಾಡಿಕೊಂಡರು.

ಗಾಳಿ, ಚಳಿ ನಡುವೆಯೂ ಮಕ್ಕಳಿಂದ ಹಿರಿಯ ನಾಗರಿಕರವರೆಗೂ ವಿವಿಧ ವಯೋಮಾನದ ಯೋಗಪಟುಗಳು ಅರಮನೆ ಆವರಣದಲ್ಲಿ ಯೋಗ ಪ್ರದರ್ಶನದಲ್ಲಿ ಪಾಲ್ಗೊಳ್ಳುವ ಮೂಲಕ ಅಂತರ ರಾಷ್ಟ್ರೀಯ ಯೋಗ ದಿನವನ್ನು ಅತ್ಯಂತ ಸಂಭ್ರಮದಿಂದ ಆಚರಿಸಿದರು. ▶ 6ನೇ ಪುಟಕ್ಕೆ

ಯೋಗದಿಂದ ಜಗತ್ತಿನಲ್ಲಿ ಶಾಂತಿ


ವಿಶಾಖಪಟ್ಟಣಂನಲ್ಲಿ ನಡೆದ 11ನೇ ವಿಶ್ವ ಯೋಗ ದಿನ ಆಚರಣೆಯಲ್ಲಿ ಪ್ರಧಾನಿ ಮೋದಿ ಯೋಗ ಪ್ರದರ್ಶಿಸಿದರು.

ವಿಶಾಖಪಟ್ಟಣಂ, ಜೂ.21– ಸಂಘರ್ಷಭರಿತ ಜಗತ್ತಿನಲ್ಲಿ ಯೋಗವು ಶಾಂತಿಯನ್ನು ಖಚಿತಪಡಿಸುತ್ತದೆ. ಇದು 'ವಿರಾಮ ಬಟನ್' ಆಗಿದ್ದು, ಈಗಿನ ಅಗತ್ಯವಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಶನಿವಾರ ಹೇಳಿದ್ದಾರೆ.

ವಿಶಾಖಪಟ್ಟಣಂನಲ್ಲಿ 11ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಯೋಗ ಪ್ರದರ್ಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಯೋಗವು ಎಲ್ಲೆಗಳು, ಹಿನ್ನೆಲೆಗಳು, ವಯಸ್ಸು ಅಥವಾ ಸಾಮರ್ಥ್ಯಗಳನ್ನು ಮೀರಿ ಎಲ್ಲವೂ ಆಗಿದೆ. ಇದು ಜಗತ್ತನ್ನು ಒಂದುಗೂಡಿಸಿದೆ ಎಂದು ಹೇಳಿದರು.

ಕೋಟ್ಯಾಂತರ ಜನರು ಯೋಗವನ್ನು ಅಳವಡಿಸಿಕೊಂಡಿದ್ದಾರೆ. ಇದು ನಮ್ಮನ್ನು ಪರಸ್ಪರ ಬೆಸೆಯುತ್ತದೆ. ಯೋಗ ಒಂದು ಭೂಮಿಗೆ, ಒಂದು ಆರೋಗ್ಯಕ್ಕೆ. ಭಾರತವು ಜಗತ್ತಿಗೆ ಗುಣಪಡಿಸುವಿಕೆಯ ಮಂತ್ರವನ್ನು ನೀಡುತ್ತಿದೆ. ಕಳೆದ ಒಂದು ದಶಕದಲ್ಲಿ, ಯೋಗದ ಪ್ರಯಾಣವನ್ನು ನೋಡಿದಾಗ, ಅದು ನನಗೆ ಅನೇಕ ವಿಷಯಗಳನ್ನು ನೆನಪಿಸುತ್ತದೆ. ಭಾರತವು ಜೂನ್ 21 ಅನ್ನು ಅಂತರರಾಷ್ಟ್ರೀಯ ಯೋಗ ದಿನವೆಂದು ಗುರುತಿಸಲು ಯುಎನ್‌ಜಿಎಯಲ್ಲಿ ನಿರ್ಣಯವನ್ನು ಮಂಡಿಸಿದ ದಿನ ಮತ್ತು ಬಹಳ ಕಡಿಮೆ ಸಮಯದಲ್ಲಿ, ವಿಶ್ವದ 175 ದೇಶಗಳು ನಮ್ಮ ಭಾರತ ▶ 6ನೇ ಪುಟಕ್ಕೆ

ನಾಳೆ 'ಅರ್ಜುನ'ನ ಸ್ಮಾರಕ ಅನಾವರಣ



ಮೈಸೂರು,ಜೂ.21(ಎಂಟಿವೈ)– ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಮದವೇರಿದ್ದ ಒಂಟಿಸಲಗ ನಡೆಸಿದ ದಾಳಿಯಿಂದ ಹುತಾತ್ಮನಾದ ದಸರಾ ಆನೆ ಅರ್ಜುನ ಸ್ಮರಣಾರ್ಥ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಡಿ.ಬಿ.ಕುಪ್ಪೆ ವಲಯದ ಬಳ್ಳೆ ಆನೆ ಶಿಬಿರದ ಬಳಿ ನಿರ್ಮಿಸಿರುವ 'ಅರ್ಜುನ'ನ ಸ್ಮಾರಕವನ್ನು ಜೂ.23ರಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಉದ್ಘಾಟಿಸಲಿದ್ದಾರೆ.

ನಾಡಹಬ್ಬ ದಸರಾ ಮಹೋತ್ಸವದಲ್ಲಿ 9 ಬಾರಿ ಅಂಬಾರಿ ಹೊತ್ತು ಸೈ ಎನಿಸಿಕೊಂಡಿದ್ದ ಅರ್ಜುನ ಆನೆ 2020ರಲ್ಲಿ 60 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಅಂಬಾರಿ ಹೊರುವ ಜವಾಬ್ದಾರಿಯಿಂದ ನಿವೃತ್ತಿ ಹೊಂದಿತ್ತು. ಕೊರೊನಾ ಹಿನ್ನೆಲೆಯಲ್ಲಿ 2020 ಮತ್ತು 2021ರಂದು ನಡೆದ ಸರಳ ದಸರಾ ಮಹೋತ್ಸವದಲ್ಲಿ ಅರ್ಜುನ ಆನೆಯನ್ನು ಆಯ್ಕೆ ಮಾಡಿರಲಿಲ್ಲ. 2023ರ ದಸರಾಗೆ ಕರೆತಂದು ಜಂಬೂಸವಾರಿ ಮೆರವಣಿಗೆಯಲ್ಲಿ ಮುಂಚೂಣಿಯಾಗಿ ಸಾಗುವ ನಿಶಾನೆ ಆನೆಯಾಗಿ ಆಯ್ಕೆ ಮಾಡಿ ಗೌರವ ಸಮರ್ಪಿಸಲಾಗಿತ್ತು.

ಆದರೆ, ಹಾಸನ ಜಿಲ್ಲೆ ಸಕಲೇಶಪುರ ತಾಲೂಕು ಯಸಳೂರು ಬಳಿ ಪುಂಡಾನೆ ಸೆರೆ ಕಾರ್ಯಾಚರಣೆ ವೇಳೆ 2023ರ ಡಿ.4ರಂದು ಅರ್ಜುನ ಒಂಟಿಸಲಗದ ದಾಳಿಗೆ ತುತ್ತಾಗಿ ಹುತಾತ್ಮನಾಗಿತ್ತು. ಅರ್ಜುನನ ಕಳೇಬರವನ್ನು ಹಾಸನದ ಯಸ ಳೂರಿನ ದಬ್ಬಳ್ಳಿಕಟ್ಟೆ ನೆಡುತೋಪಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗಿತ್ತು. ಅಲ್ಲದೆ, ದಬ್ಬಳ್ಳಿಕಟ್ಟೆ ಹಾಗೂ ಅರ್ಜುನ ವಾಸವಾಗಿದ್ದ ಬಳ್ಳೆ ಶಿಬಿರದಲ್ಲಿ ಸ್ಮಾರಕ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿತ್ತು. ಸ್ಮಾರಕ ನಿರ್ಮಾಣ ಕಾರ್ಯ ಪೂರ್ಣಗೊಂಡಿತ್ತಾದರೂ ವಿವಿಧ ಕಾರಣಗಳಿಂದ ಉದ್ಘಾಟಿಸಿರಲಿಲ್ಲ. ಇದೀಗ ಬಳ್ಳೆ ಶಿಬಿರದಲ್ಲಿ ನಿರ್ಮಿಸಿರುವ ಸ್ಮಾರಕವನ್ನು ಜೂ.23ರಂದು ಉದ್ಘಾಟಿಸಲಾಗುತ್ತಿದೆ. ಅದಕ್ಕಾಗಿ ಅರಣ್ಯ ಇಲಾಖೆ ಸಿದ್ಧತೆ ಮಾಡಿಕೊಳ್ಳುತ್ತಿದೆ. 1968ರಲ್ಲಿ ಕಾಕನಕೋಟೆಯಲ್ಲಿ ನಡೆದ ಖೆಡ್ಡಾ ಕಾರ್ಯಾಚರಣೆಯಲ್ಲಿ ಅರ್ಜುನನನ್ನು ಸೆರೆಹಿಡಿಯಲಾಗಿತ್ತು. 1990ರಿಂದ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದ ಅರ್ಜುನ ಸತತ 8 ಬಾರಿ ಅಂಬಾರಿ ಹೊತ್ತಿದ್ದ ಅರ್ಜುನ, ಈ ಹಿಂದೆ ಒಂದು ಬಾರಿ ಬನ್ನಿಮಂಟಪದಿಂದ ಅರಮನೆವರೆಗೆ ಅಂಬಾರಿ ಹೊತ್ತು ಸಾಗಿತ್ತು. ಇದರಿಂದ ಅರ್ಜುನನ ಹೆಸರಲ್ಲಿ 9 ಬಾರಿ ಚಿನ್ನದ ಅಂಬಾರಿ ಹೊತ್ತ ದಾಖಲೆ ನಿರ್ಮಾಣವಾಗಿದೆ.

ಮೇಟಗಳ್ಳಿಯ ಶ್ರೀ ಚಲುವನಾರಾಯಣಸ್ವಾಮಿ ದೇವಸ್ಥಾನದಲ್ಲಿ ನೂತನ ಶಿಲಾಬಿಂಬ ಪ್ರಾಣ ಪ್ರತಿಷ್ಠಾಪನಾ ಮಹೋತ್ಸವ



ಮೈಸೂರು, ಜೂ.21(ಬಿಎಲ್‌ಯು)– ನಗರದ ಮೇಟಗಳ್ಳಿ ರಿಂಗ್ ರಸ್ತೆಯ ಶ್ರೀ ಚಲುವ ನಾರಾಯಣಸ್ವಾಮಿ ದೇವಸ್ಥಾನದಲ್ಲಿ ನೂತನ ಶಿಲಾಬಿಂಬ ಪ್ರಾಣ ಪ್ರತಿಷ್ಠಾಪನೆಯ 3 ದಿನಗಳ ಮಹೋತ್ಸವ ಶನಿವಾರ ಆರಂಭವಾಯಿತು.

ಶ್ರೀ ಚಲುವನಾರಾಯಣಸ್ವಾಮಿ ಧರ್ಮ ಕಾರ್ಯ ಟ್ರಸ್ಟ್ ಆಯೋಜಿಸಿರುವ ಮಹೋತ್ಸವದ ಧಾರ್ಮಿಕ ಕಾರ್ಯವು ಜೂ.23ರವರೆಗೆ ನಡೆಯಲಿದೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥೇಶ್ವರ ಸ್ವಾಮೀಜಿ, ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಶ್ರೀ ಭಾಷ್ಯಂ ಸ್ವಾಮೀಜಿ, ಮೇಲುಕೋಟೆಯ ಶ್ರೀ ಮೇಲುಕೋಟೆ ರಾಮಪ್ರಿಯ ಮತ್ತು ರಂಗಪ್ರಿಯರು ಆಶೀರ್ವದಿಸಲಿದ್ದಾರೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಕೆ.ಹರೀಶ್‌ಗೌಡ, ಜಿ.ಟಿ.ದೇವೇಗೌಡ, ತನ್ವೀರ್‌ಸೇಠ್, ಟಿ.ಎಸ್.ಶ್ರೀವತ್ಸ, ಯತೀಂದ್ರ, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಸಂಸದ ಪ್ರತಾಪ್ ಸಿಂಹ, ಪೋಷಕ ಗೌರವಾಧ್ಯಕ್ಷ ಡಿ.ಮಾದೇಗೌಡ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಇಂದು ಶರ್ಮಿಷ್ಠೆ ನಾಟಕ ಪ್ರದರ್ಶನ



ಮೈಸೂರು, ಜೂ.21(ಜಿಎ)–ನಟಿ ಉಮಾಶ್ರೀ ಅವರ ಏಕವ್ಯಕ್ತಿ ಪ್ರಯೋಗದ 'ಶರ್ಮಿಷ್ಠೆ' ನಾಟಕ ಪ್ರದರ್ಶನವನ್ನು ರಂಗಸಂಪದ ರಂಗ ತಂಡದ ವತಿಯಿಂದ ಮೈಸೂರಿನ ನಟನ ರಂಗಶಾಲೆಯಲ್ಲಿ ಜೂ.22ರಂದು 2 ಪ್ರದರ್ಶನ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರಂಗಸಂಪದ ಕಾರ್ಯದರ್ಶಿ ವಿ.ಎಂ.ನಾಗೇಶ್ ಈ ವಿಷಯ ತಿಳಿಸಿ, ಅಂದು ಮಧ್ಯಾಹ್ನ 4 ಗಂಟೆಗೆ ಹಾಗೂ ಸಂಜೆ 6.30ಕ್ಕೆ 2 ಪ್ರದರ್ಶನ ಆಯೋಜಿಸಲಾಗಿದೆ. ಡಾ.ಬೇಲೂರು ರಘುನಂದನ್ ನಾಟಕ ರಚಿಸಿದ್ದು ಚಿದಂಬರ ರಾವ್ ಜಂಬೆ ನಿರ್ದೇಶಿಸಿದ್ದಾರೆ. ಈಗಾಗಲೇ ಮೈಸೂರಲ್ಲಿ 'ಶರ್ಮಿಷ್ಠೆ' ಪ್ರದರ್ಶನಗೊಂಡು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಹೇಳಿದರು.

ನಿಧನ

ಶ್ರೀಮತಿ ಜಯಲಕ್ಷ್ಮಿ



ಕೆ.ಆರ್.ಪೇಟೆ, ಜೂ.21– ತಾಲೂಕಿನ ಕಿಕ್ಕೇರಿ ಗ್ರಾಮದ ಹಿರಿಯ ಮುಖಂಡರಾದ ಲೇಟ್ ಕೆ. ಜೆ. ವೆಂಕಟರಮಣಶೆಟ್ಟಿ ಅವರ ಧರ್ಮಪತ್ನಿ ಶ್ರೀಮತಿ ಜಯಲಕ್ಷ್ಮಿ(90) ಅವರು ವಯೋಸಹಜ ಕಾಯಿಲೆಯಿಂದ ಇಂದು(ಶನಿವಾರ) ಮುಂಜಾನೆ 5 ಗಂಟೆ ಸಮಯದಲ್ಲಿ ನಿಧನ ಹೊಂದಿದ್ದಾರೆ.

ಮೃತರು, ಹಿರಿಯ ಪತ್ರಕರ್ತ ಗೋವಿಂದರಾಜು, ಬಲರಾಮ್ ಸೇರಿ ಇಬ್ಬರು ಪುತ್ರರು, ಸೊಸೆ ಪತ್ರಕರ್ತೆ ತ್ರಿವೇಣಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗ್ರಾಮದ ಸಾರ್ವಜನಿಕ ರುದ್ರಭೂಮಿಯಲ್ಲಿ ಇಂದು ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇವರ ನಿಧನಕ್ಕೆ ಸಚಿವ ಎನ್.ಚೆಲುವರಾಯಸ್ವಾಮಿ, ಶಾಸಕ ಹೆಚ್.ಟಿ ಮಂಜು, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ತಗಡೂರು ಶಿವಾನಂದ, ಮಾಜಿ ಸಚಿವ ಕೆ.ಸಿ.ನಾರಾಯಣಗೌಡ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಕೆಪಿಸಿಸಿ ಸದಸ್ಯ ಕಿಕ್ಕೇರಿ ಸುರೇಶ್, ಜಿ.ಪಂ ಮಾಜಿ ಉಪಾಧ್ಯಕ್ಷ ಕೆ.ಎಸ್.ಪ್ರಭಾಕರ್, ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್, ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಡಾಲು ರವಿ, ಎಂ.ಬಿ.ಹರೀಶ್, ಕಾಂಗ್ರೆಸ್ ಮುಖಂಡ ಬೂಕನಕೆರೆ ವಿಜಯ ರಾಮೇಗೌಡ, ಜೆಡಿಎಸ್ ಅಧ್ಯಕ್ಷ ಜಾನಕಿರಾಮ್, ಜೆಡಿಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ಕಿರಣ್, ಬಿಜೆಪಿ ಅಧ್ಯಕ್ಷ ಸಾರಂಗಿ ನಾಗಣ್ಣ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಶ್ವನಾಥ್, ಎಂಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೊಸಹೊಳಲು ಅಶೋಕ್, ಜೆಡಿಎಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಂ.ಕಿರಣ್, ಜೆಡಿಎಸ್ ರಾಜ್ಯ ಯುವ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಕುರುಬಹಳ್ಳಿ ನಾಗೇಶ್, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಅಪ್ಪನಹಳ್ಳಿ ಅರುಣ್‌ಕುಮಾರ್, ಹಿರಿಯ ಪತ್ರಕರ್ತರಾದ ಬಳ್ಳೆಕೆರೆ ಮಂಜುನಾಥ್, ಕೆ.ಆರ್.ನೀಲಕಂಠ, ಹರಿಚರಣ ತಿಲಕ್, ಸಾಹಿತಿ ಬಲ್ಲೇನಹಳ್ಳಿ ಮಂಜುನಾಥ್, ವಿವಿಧ ಕನ್ನಡಪರ ಸಂಘಟನೆಗಳು ಸೇರಿದಂತೆ ಹಲವು ಗಣ್ಯರು ತೀವ್ರ ಸಂತಾಪ ಸೂಚಿಸಿದ್ದಾರೆ.

ಎಸ್.ವಿನೋದಮ್ಮ



ಶ್ರೀರಂಗಪಟ್ಟಣ ತಾಲೂಕಿನ ಬಾಬುರಾಯನಕೊಪ್ಪಲು ನಿವಾಸಿ ಎಸ್.ವಿನೋದಮ್ಮ (75) ಶನಿವಾರ ನಿಧನರಾದರು. ಮಾಜಿ ಶಾಸಕ ಬಿ.ಚಾಮಯ್ಯ ಅವರ ಸೊಸೆ. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸೋಮವಾರ ಬಾಬುರಾಯನಕೊಪ್ಪಲು ಗ್ರಾಮದಲ್ಲಿ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಭಾಗ್ಯಮ್ಮ



ನಂಜನಗೂಡು ನಗರದ ಅಶೋಕಪುರಂನ 4ನೇ ಕ್ರಾಸ್ ನಿವಾಸಿ ಶ್ರೀಮತಿ ಭಾಗ್ಯಮ್ಮ (75) ಅವರು ಶುಕ್ರವಾರ ಸಂಜೆ ನಿಧನರಾದರು. ಮೃತರು ಪತಿ ಶಿವಣ್ಣ, ಪುತ್ರರಾದ ಶಿವಕುಮಾರ್, ಪ್ರಕಾಶ್, ಅಶೋಕ, ಬಲ್ಲಪ್ಪ, ಕೃಷ್ಣ, ಕಾರ್ತಿಕ್, ಪುತ್ರಿಯರಾದ ಮಧು, ಚೈತ್ರ, ಪ್ರೀತಿ, ಸೊಸೆಯಂದಿರಾದ ಜ್ಯೋತಿ, ಗೀತಾ, ಮಮತ, ಅಭಿಲಾಷ, ಅಪೂರ್ವ, ಅಂಜಲಿ, ಅಳಿಯಂದಿರಾದ ಮಲ್ಲೇಶ್, ಮಹದೇವ್, ಪ್ರಭು, ಮೊಮ್ಮಕ್ಕಳು ಮತ್ತು ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಶನಿವಾರ ಮಧ್ಯಾಹ್ನ ನಂಜನಗೂಡಿನಲ್ಲಿ ನೆರವೇರಿತು.

ಒಟ್ಟಾಗಿ ಹೋದರೆ ಗೌರವ; ಜನರು ವಿಶ್ವಾಸ ತೋರುತ್ತಾರೆ!

● ಕೇಂದ್ರ ಗೃಹ ಸಚಿವ ಅಮಿತ್ ಶಾ ರಾಜ್ಯ ಬಿಜೆಪಿ ನಾಯಕರಿಗೆ ಕಿವಿಮಾತು ● ಈ ವಿಷಯ ಸ್ವತಃ ಬಹಿರಂಗಪಡಿಸಿದ ವಿಜಯೇಂದ್ರ; ರಾಜ್ಯಾಧ್ಯಕ್ಷ ಸ್ಥಾನದ ಬಗ್ಗೆ ಸದ್ಯದಲ್ಲೇ ವರಿಷ್ಠರ ನಿರ್ಧಾರ

ಬೆಂಗಳೂರು, ಜೂ.21(ಕೆಎಂಶಿ)– ರಾಜ್ಯ ಬಿಜೆಪಿ ನಾಯಕರು ತಮ್ಮ ನಡುವಿನ ವ್ಯತ್ಯಾಸಗಳನ್ನು ಮರೆತು ಒಟ್ಟಾಗಿ, ಒಂದಾಗಿ ಹೋದಾಗ ಮಾತ್ರ ಕಾರ್ಯಕರ್ತರಿಗೆ ಗೌರವ ಕೊಟ್ಟಂತಾಗುತ್ತದೆ. ಅಲ್ಲದೆ, ಜನರು ಪಕ್ಷದ ಮೇಲೆ ವಿಶ್ವಾಸ ಇಡುತ್ತಾರೆ ಎಂಬ ಕಿವಿಮಾತನ್ನು ಕೇಂದ್ರ ಸಚಿವ ಹಾಗೂ ಹಿರಿಯ ನಾಯಕ ಅಮಿತ್ ಶಾ ಹೇಳಿದ್ದಾರೆ ಎಂದು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ರಾಜ್ಯಾಧ್ಯಕ್ಷ ಹುದ್ದೆ ಕುರಿತು ದೆಹಲಿ ವರಿಷ್ಠರು ಸದ್ಯದಲ್ಲೇ ನಿರ್ಧಾರ ಕೈಗೊಳ್ಳುವ ವಿಶ್ವಾಸವಿದೆ ಎಂದರು.

ನಮ್ಮದು ರಾಷ್ಟ್ರೀಯ ಪಕ್ಷ, ಎಲ್ಲ ಜಿಲ್ಲಾಧ್ಯಕ್ಷರ ಅಭಿಪ್ರಾಯ, ಪಕ್ಷದ ಮುಖಂಡರ ಅಭಿಮತ ಪಡೆದು ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ. ಕಳೆದ ಒಂದೂಕಾಲು ವರ್ಷದಿಂದ ಕೊಟ್ಟಿರುವ ಜವಾಬ್ದಾರಿಯನ್ನು ಪಕ್ಷದ ಕಾರ್ಯಕರ್ತನಾಗಿ ಶ್ರದ್ಧೆಯಿಂದ ನಿರ್ವಹಿಸುತ್ತಿದ್ದೇನೆ. ಕೇಂದ್ರ ಮತ್ತು ರಾಷ್ಟ್ರೀಯ ನಾಯಕರಿಗೆ ಕೊಡಬೇಕಾದ ಮಾಹಿತಿಯನ್ನು ಕಾಲ ಕಾಲಕ್ಕೆ ಕೊಡುತ್ತಾ ಬಂದಿದ್ದೇನೆ.



ನಾನು ಮತ್ತು ಕೆಲವು ಹಿರಿಯ ಮುಖಂಡರು ಕೇಂದ್ರ ಗೃಹ ಸಚಿವ ಮತ್ತು ಪಕ್ಷದ ಮಾರ್ಗದರ್ಶಕ ಅಮಿತ್ ಶಾ ಅವರನ್ನು ಭೇಟಿ ಮಾಡಿ ರಾಜ್ಯದ ರಾಜಕೀಯ ವಿದ್ಯಮಾನಗಳ ಕುರಿತು ಸುಮಾರು 25 ನಿಮಿಷ ಸುದೀರ್ಘ ಚರ್ಚಿಸಿದ್ದೇವೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಒಡೆದು ಆಳುವ ನೀತಿ ಅನುಸರಿಸುತ್ತಿದೆ. ಬಡವರು, ರೈತರಿಗೆ ಶಾಪವಾಗಿ ಪರಿಣಮಿಸಿದೆ ಎಂಬ ನಮ್ಮ ಮಾತುಗಳನ್ನು ಅಮಿತ್ ಶಾ ಸಮಾಧಾನದಿಂದ ಆಲಿಸಿದರು.

ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷಕ್ಕೆ ಎಷ್ಟು ಜವಾಬ್ದಾರಿ ಇದೆಯೋ ಅದಕ್ಕಿಂತ ಹೆಚ್ಚಿನ ಹೊಣೆಗಾರಿಕೆ ವಿರೋಧ ಪಕ್ಷದ ಮೇಲೂ ಇದೆ. ಸರ್ಕಾರದ ಕಾರ್ಯವೈಖರಿ, ಕಾಂಗ್ರೆಸ್‌ನ ಕರಾಳ ಮುಖವನ್ನು ಜನರ ಮುಂದೆ ಅನಾವರಣಗೊಳಿಸುವ ಕೆಲಸವನ್ನು ನಾವು ಮಾಡುತ್ತಾ ಬಂದಿದ್ದೇವೆ. ಇದೆಲ್ಲವನ್ನು ಕೇಂದ್ರ ನಾಯಕರಿಗೆ ವಿವರಿಸಿದ್ದು, ಅಮಿತ್ ಶಾ ಸಂತೋಷ ವ್ಯಕ್ತಪಡಿಸಿದ್ದಾರೆ ಎಂದರು.

ಬಿಜೆಪಿ ಉಚ್ಚಾಟಿತ ಕೆ.ಎಸ್.ಈಶ್ವರಪ್ಪ ಮರುಸೇರ್ಪಡೆ ಕುರಿತು ರಾಜ್ಯ ಅಥವಾ ಕೇಂದ್ರ ಮಟ್ಟದಲ್ಲಿ ಯಾವುದೇ ಚರ್ಚೆಗಳು ನಡೆದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸಹಕಾರ ಸಚಿವ ಕೆ.ಎನ್.ರಾಜಣ್ಣರಿಗೆ ಹುಟ್ಟುಹಬ್ಬದ ಶುಭಾಶಯ...



ತಮ್ಮ 75ನೇ ಹುಟ್ಟುಹಬ್ಬ ಆಚರಿಸಿಕೊಂಡ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಬೆಳ್ಳಿ ಗದೆ ನೀಡಿ, ಶುಭಾಶಯ ಕೋರಲಾಯಿತು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ, ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷ ಎಸ್.ಚಂದ್ರಶೇಖರ್, ಇತರೆ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

ಕರ್ನಾಟಕ ಗಡಿ ವಿವಾದ: ಮಹಾರಾಷ್ಟ್ರ ಸಮಿತಿ ಪುನರ್‌ರಚನೆ

ಬೆಳಗಾವಿ: ಕರ್ನಾಟಕದೊಂದಿಗಿನ ಗಡಿ ವಿವಾದದ ಕುರಿತು ತನ್ನ ನಿಲುವನ್ನು ಬಲಪಡಿಸಲು, ಮಹಾರಾಷ್ಟ್ರ ಸರ್ಕಾರವು ತನ್ನ ಉನ್ನತ ಅಧಿಕಾರ ಸಮಿತಿಯನ್ನು ಪುನರ್‌ರಚಿಸಿದೆ. ಈ ಸಮಿತಿಗೆ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ನೇತೃತ್ವ ವಹಿಸಲಿದ್ದಾರೆ. ಮಹಾರಾಷ್ಟ್ರದ ವಿವಿಧ ರಾಜಕೀಯ ಪಕ್ಷಗಳ ಹಲವು ಉನ್ನತ ನಾಯಕರು ಈ ಸಮಿತಿಯಲ್ಲಿದ್ದಾರೆ. ಈ ಹಿಂದೆ ಮಾಜಿ ಸಿಎಂ ಏಕನಾಥ್ ಶಿಂಧೆ ಸಮಿತಿಯ ನೇತೃತ್ವ ವಹಿಸಿದ್ದರು.

18 ಸದಸ್ಯರ ಸಮಿತಿಯಲ್ಲಿ ಡಿಸಿಎಂಗಳಾದ ಏಕನಾಥ್ ಶಿಂಧೆ ಮತ್ತು ಅಜಿತ್ ಪವಾರ್, ಮಾಜಿ ಸಿಎಂಗಳಾದ ಶರದ್ ಪವಾರ್, ಪೃಥ್ವಿರಾಜ್ ಚವಾಣ್, ನಾರಾಯಣ್ ರಾಣೆ ಮತ್ತು ಗಡಿ ವ್ಯವಹಾರಗಳ ತಜ್ಞ ಪ್ರೊ.ಅವಿನಾಶ್ ಕೊಲ್ಹೆ ಇದ್ದಾರೆ. ಸಚಿವರಾದ ಚಂದ್ರಕಾಂತ್ ದಾದಾ ಪಾಟೀಲ್ ಮತ್ತು ಶಂಭುರಾಜೆ ದೇಸಾಯಿ ಅವರು ಸಮಿತಿಗೆ ಪ್ರಮುಖ ಸಮನ್ವಯ ತಂಡದಲ್ಲಿದ್ದಾರೆ. ಕರ್ನಾಟಕದಲ್ಲಿ ನೆಲೆಗೊಂಡಿರುವ ಮರಾಠಿಪರ ಸಂಘಟನೆಯಾದ ಮಹಾರಾಷ್ಟ್ರ ಏಕೀಕರಣ ಸಮಿತಿ (MES)ಗೆ ಸಂಬಂಧಿಸಿದ ವಿಷಯಗಳನ್ನು ನಿರ್ವಹಿಸುವ ಕಾರ್ಯ ಹೊಂದಿದ್ದಾರೆ. ಸುಪ್ರೀಂಕೋರ್ಟ್‌ನಲ್ಲಿ ಗಡಿ ಪ್ರಕರಣವನ್ನು ಬಲಪಡಿಸಲು ಮಾತ್ರವಲ್ಲದೆ ಮಹಾರಾಷ್ಟ್ರಕ್ಕೆ ಸಹಾಯ ಮಾಡಬಹುದಾದ ವಿವಿಧ ಪರ್ಯಾಯಗಳ ಬಗ್ಗೆಯೂ ಸಮಿತಿ ಗಮನಹರಿಸಲಿದೆ.

ಮಹಾರಾಷ್ಟ್ರಕ್ಕೆ ಪ್ರಯೋಜನವಾಗಬಹುದಾದ ಈ ವಿವಾದದ ಬಗ್ಗೆ ಮಾಹಿತಿ ನೀಡುವಂತೆ ಎಂಇಎಸ್ ನಾಯಕರನ್ನು ಕೇಳಬಹುದು ಎಂದು ಮೂಲಗಳು ತಿಳಿಸಿವೆ. ಎಂಇಎಸ್ ಆದೇಶದ ಮೇರೆಗೆ ಮಹಾರಾಷ್ಟ್ರ ಸರ್ಕಾರವು ಕರ್ನಾಟಕದೊಂದಿಗೆ ಕಾನೂನು ಮತ್ತು ರಾಜಕೀಯ ಹೋರಾಟದಲ್ಲಿ ತೊಡಗಿಸಿಕೊಂಡಿದ್ದು, ಬೆಳಗಾವಿ, ಖಾನಾಪುರ, ಕಾರವಾರ, ಭಾಲ್ಕಿ ಮತ್ತು ನಿಪ್ಪಾಣಿ ಸೇರಿದಂತೆ ಗಡಿಯುದ್ದಕ್ಕೂ ಕರ್ನಾಟಕದ ನೂರಾರು ಹಳ್ಳಿಗಳು ಮತ್ತು ಪಟ್ಟಣಗಳ ಮೇಲೆ ತನ್ನ ಹಕ್ಕು ಸಾಧಿಸುತ್ತಿದೆ.

'ಮಾತೊಂದ ಹೇಳುವೆ' ಚಿತ್ರಕ್ಕೆ ಉತ್ತಮ ಸ್ಪಂದನೆ

ಮೈಸೂರು, ಜೂ.21(ಜಿಎ)– 'ಮಾತೊಂದ ಹೇಳುವೆ' ಚಲನಚಿತ್ರ ರಾಜ್ಯಾದ್ಯಂತ ಬಿಡುಗಡೆಗೊಂಡಿದ್ದು, ಪ್ರೇಕ್ಷಕರಿಂದ ಉತ್ತಮ ಸ್ಪಂದನೆ ದೊರೆತಿದೆ ಎಂದು ನಟ, ನಿರ್ದೇಶಕ ಮಯೂರ್ ಕಡಿ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು ಹೊಸತರದ ಪ್ರೇಮಕಥೆ ಹೊಂದಿದ ಸಿನಿಮಾ ಆಗಿದೆ. ಉತ್ತರ ಕರ್ನಾಟಕದ ರೇಡಿಯೋ ಜಾಕಿಯನ್ನು ಮೈಸೂರಿನ ಹುಡುಗಿಯೊಬ್ಬಳು ಪ್ರೀತಿಸುವ ಎಳೆಯನ್ನು ಚಿತ್ರ ಕಥೆ ಹೊಂದಿದೆ. ಇದೊಂದು ವಿಭಿನ್ನ ಪ್ರೇಮ ಕಥೆಯ ಸಿನಿಮಾ ಆಗಿದ್ದು, ಇಡೀ ಕುಟುಂಬ ಒಟ್ಟಿಗೆ ಕುಳಿತು ನೋಡಬಹುದಾಗಿದೆ. 6 ಹಾಡುಗಳಿವೆ ಎಂದರು. ಮಹೇಶ್ವರ ಮೋಷನ್ ಪಿಕ್ಚರ್ಸ್ ಅಡಿಯಲ್ಲಿ ನಿರ್ಮಿಸಿರುವ ಈ ಸಿನಿಮಾದಲ್ಲಿ ನಾಯಕಿ ನಟಿಯಾಗಿ ಮೈಸೂರಿನ ಅಪೂರ್ವ ಆರಾಧ್ಯ, ಇನ್ನಿತರ ಪಾತ್ರಗಳಲ್ಲಿ ಗಿರೀಶ್, ಶಿವಣ್ಣ, ಪಿ.ಡಿ.ಸತೀಶ್ ಚಂದ್ರ, ಪ್ರತೀಕ್, ವಿದ್ಯಾಸಾಗರ ದೀಕ್ಷಿತ್, ಕಾರ್ತಿಕ್ ಪುತ್ತಾರ್, ಸುನಿಲ್ ಪತ್ರಿ, ಜ್ಯೋತಿ ಪುರಾಣಿಕ್ ಕಲಾತಂಡವಿದೆ ಎಂದರು.

ಲಿಂಗತ್ವ ಅಲ್ಪಸಂಖ್ಯಾತರ ನೀತಿ ಪರಿಣಾಮಕಾರಿ ಜಾರಿಗೆ ಆಗ್ರಹ

ಮೈಸೂರು,ಜೂ.21(ಜಿಎ)–ರಾಜ್ಯದಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ನೆಲೆ ಕಲ್ಪಿಸುವ ಸಲುವಾಗಿ ಸರ್ಕಾರ ಜಾರಿಗೆ ತಂದಿರುವ 2017ರ ಲಿಂಗತ್ವ ಅಲ್ಪಸಂಖ್ಯಾತರ ನೀತಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕೆಂದು 7 ರೈನ್‌ಬೋಸ್ ಸಂಸ್ಥೆಯ ಅಧ್ಯಕ್ಷ ಟಿ.ಶಿವರಾಂ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಳಮಟ್ಟದಿಂದ ಲಿಂಗತ್ವ ಹಾಗೂ ಲೈಂಗಿಕ ಅಲ್ಪಸಂಖ್ಯಾತರ ಮೂಲ ಸಮೀಕ್ಷೆ ನಡೆಸಬೇಕು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಇವರ ಸಂಖ್ಯೆ ಎಷ್ಟಿದೆ ಎಂಬುದರ ಅಂಕಿ ಅಂಶ ಪಡೆದು ಪುನಶ್ಚೇತನ ಕಾರ್ಯಕ್ರಮ ಜಾರಿಗೊಳಿಸಬೇಕಿದೆ. ಈ ನಿಟ್ಟಿನಲ್ಲಿ ಜಿಲ್ಲೆಯ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅಧಿಕಾರಿಗಳು ಈ ಸಮುದಾಯದ ಮುಖಂಡರೊಡನೆ ಸಮಾಲೋಚನೆ ನಡೆಸಿ ಕಾರ್ಯಕ್ರಮ ರೂಪಿಸಬೇಕು ಎಂದರು.

ಎಲ್ಲಾ ಇಲಾಖೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ವೇಳೆ ಲಿಂಗತ್ವ ಅಲ್ಪಸಂಖ್ಯಾತರಿಗೂ ಪ್ರಾಧಾನ್ಯತೆ ನೀಡಬೇಕು. ಈ ಹಿಂದೆ ಬರುತ್ತಿದ್ದ ವಾರ್ಷಿಕ ಸಹಾಯಧನ ಮತ್ತೆ ನೀಡುವುದನ್ನು ಆರಂಭಿಸಬೇಕು. ಉದ್ಯೋಗಿನಿ ಯೋಜನೆ ಸೌಲಭ್ಯ ದೊರಕಿಸಿಕೊಡಬೇಕು. ಈ ನಿಟ್ಟಿನಲ್ಲಿ ಸಿಎಂಗೂ ಮನವಿ ಸಲ್ಲಿಸಿದ್ದು, ಈ ಸಮುದಾಯದ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಕೋರಿದರು. ಗೋಷ್ಠಿಯಲ್ಲಿ ರಮ್ಯ, ರಶ್ಮಿಕಾ, ಸುಚಿತ್ರ, ಸಂತೋಷ್‌ಕುಮಾರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.06.2025 ಭಾನುವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2025 ರಿಂದ 05.07.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಭರಣಿ, ರಾಹುಕಾಲ: ಸಂಜೆ 4.30 ರಿಂದ 6 ರವರೆಗೆ

* **ಕಾಮಾಕ್ಷಿ ಆಸ್ಪತ್ರೆ (ಕುವೆಂಪುನಗರ ಮತ್ತು ಜೆ.ಪಿ.ನಗರ):** 11ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ 'ಯೋಗ ಸಂಗಮ' ಕಾರ್ಯಕ್ರಮ–ಒಂದು ಭೂಮಿ, ಒಂದು ಆರೋಗ್ಯ, ಸ್ಥಳ: ಕಾಮಾಕ್ಷಿ ಆಸ್ಪತ್ರೆ, ಇಂಡಸ್ಟ್ರೀಯಲ್ ಲೇಔಟ್, ಜೆ.ಪಿ.ನಗರ, ಬೆಳಗ್ಗೆ 7ರಿಂದ.
* **ಮೈಸೂರ್ ಕರಾಟೆ ಅಸೋಸಿಯೇಷನ್:** ವಿಶ್ವ ಕರಾಟೆ ದಿನ–2025, ಆತ್ಮರಕ್ಷಣೆಗಾಗಿ ಕರಾಟೆ ಕಾರ್ಯಕ್ರಮ, ಉದ್ಘಾಟನೆ: ಸಂಸದ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿ: ಮೈಸೂರು ವಿವಿ ಕುಲಪತಿ ಎನ್.ಕೆ. ಲೋಕನಾಥ್, ಅಡಿಷನಲ್ ಎಸ್‌ಪಿ ಮಲ್ಲಿಕ್ ಸಿ, ಎಕೆಎಸ್‌ಕೆಎ ರಾಜ್ಯಾಧ್ಯಕ್ಷ ಸಿ.ಎಸ್. ಅರುಣ್ ಮಾಚಯ್ಯ, ಸ್ಥಳ: ಸ್ಪೋರ್ಟ್ಸ್ ಪೆವಿಲಿಯನ್, ಮಹಾರಾಜ ಕಾಲೇಜು ಹಾಕಿ ಮೈದಾನ, ಬೆಳಗ್ಗೆ 8 ಗಂಟೆಗೆ.
* **ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ (ಮೈಸೂರು), ರೋಟರಿ ಜಯಪ್ರಕಾಶ್‌ನಗರ, ರೋಟರಿ ಜಯಪ್ರಕಾಶ್‌ನಗರ ಚಾರಿಟೆಬಲ್ ಟ್ರಸ್ಟ್, ರೋಟರಿ ಕ್ಲಬ್ ಆಫ್ ಕೃಷ್ಣರಾಜ, ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್, ಲಯನ್ಸ್ ಜೆ.ಪಿ.ನಗರ, ಸ್ನೇಹನಿಧಿ ಪತ್ತಿನ ಸಹಕಾರ ಸಂಘ, ಶ್ರೀ ಅಷ್ಟೈಶ್ವರ್ಯ ಸಿದ್ಧಿ ವಿನಾಯಕ ದೇವಸ್ಥಾನ, ಲಯನ್ಸ್ ಕ್ಲಬ್ ಆಫ್ ಈರೋಡ್ ಈಸ್ಟ್ :** ಕಣ್ಣಿನ ಉಚಿತ ತಪಾಸಣೆ ಹಾಗೂ ಶಸ್ತ್ರಚಿಕಿತ್ಸಾ ಶಿಬಿರ, ಸ್ಥಳ: ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್ ಆವರಣ, ಬೆಳಗ್ಗೆ 8 ಗಂಟೆಗೆ.
* **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9 ಗಂಟೆಯಿಂದ ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರ ದರ್ಶಕತೆ, ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.
* **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡುಬರುವ ಹಸಿವಾಗದಿರುವುದು, ಅಜೀರ್ಣ, ಹೊಟ್ಟೆನೋವು, ಜಂತು ಹುಳುವಿನ ಬಾಧೆ, ರುಮಟೈಡ್ ಆರ್ಥೈಟಿಸ್, ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
* **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ–2025, ಗುಜರಾತ್ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ವರ್ತುಲ ರಸ್ತೆ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.
* **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂಪ್ರೆಷರ್ ಹಾಗೂ ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶೀಯೋ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್ ವ್ಹೀಲ್ ರೋಟರಿ ಭವನ, ವಿಜಯನಗರ ರೈಲ್ವೆ ಬಡಾವಣೆ, ಬೆಳಗ್ಗೆ 10.30ರಿಂದ.
* **ಕರ್ನಾಟಕ ಸೇನಾ ಪಡೆ:** ಶ್ರೀ ಶಂಕರ ಜಯಂತಿ–ತತ್ವಜ್ಞಾನಿಗಳ ದಿನಾಚರಣೆ, ವಿವಿಧ ಕ್ಷೇತ್ರಗಳ ಸಾಧಕರಿಗೆ ಶ್ರೀ ಶಂಕರಾಚಾರ್ಯ ಸೇವಾರತ್ನ ಪ್ರಶಸ್ತಿ ಪ್ರದಾನ, ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ದಿವ್ಯ ಸಾನ್ನಿಧ್ಯ: ಯೋಗಾ ನರಸಿಂಹಸ್ವಾಮಿ ದೇವಸ್ಥಾನ ಸಂಸ್ಥಾಪಕ ಡಾ. ಭಾಷ್ಯಂ ಸ್ವಾಮೀಜಿ, ದಿವ್ಯ ಉಪಸ್ಥಿತಿ: ಶ್ರೀ ಅರ್ಜುನ ಅವಧೂತರು, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಪುಷ್ಪಾರ್ಚನೆ: ಸಂಜಯ್ ಗಾಂಧಿ ಮತ್ತು ಪ್ರಲಕ್ಷ ಆಸ್ಪತ್ರೆಯ ಖ್ಯಾತ ಬೆನ್ನು ಮೂಳೆ ತಜ್ಞ ಡಾ. ಮೋಹನ್, ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ: ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ: ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಸ್ಥಳ: ಶ್ರೀ ಶೃಂಗೇರಿ ಮಠ, ಗನ್‌ಹೌಸ್ ಎದುರು, ಬೆಳಗ್ಗೆ 10.30ರಿಂದ.
* **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್ (ಮೈಸೂರು):** 'ಪ್ರತಿಭಾಂಕುರ'–ಸಂಗೀತ ಮಾಲಿಕೆ, ಕರ್ನಾಟಕ ಶಾಸ್ತ್ರೀಯ ಸಂಗೀತ–ಶ್ರೀ ಸದಾಶಿವ, ಪ್ರಸ್ತುತಿ: ವಿದುಷಿ ಮೀರಾ ಮಂಜುನಾಥ್–ಗಾಯನ, ಪಕ್ಕವಾದ್ಯ ಸಹಕಾರ: ವಿದುಷಿ ತನ್ಮಯೀ ಉಪ್ಪಂಗಳ–ವಯೋಲಿನ್, ವಿದ್ವಾನ್ ಪಿ.ಎಸ್. ಶ್ರೀಧರ್–ಮೃದಂಗ, ಸ್ಥಳ: ಶ್ರೀ ವಿಶ್ವನಾಥ್, ಅಶ್ವತ್ಥ, # 2773, 5ನೇ ಮುಖ್ಯ ರಸ್ತೆ, ವಿವಿ ಮೊಹಲ್ಲಾ, ಬೆಳಗ್ಗೆ 10.30ರಿಂದ.
* **ದೇಶಿರಂಗ ಸಾಂಸ್ಕೃತಿಕ ಟ್ರಸ್ಟ್:** ವಿಚಾರವಾದಿ, ಪ್ರಗತಿಪರ ಚಿಂತಕ ಪ್ರೊ. ಕೆ. ರಾಮದಾಸ್ ನೆನಪಿನಲ್ಲಿ–ಸಂವಾದ, ಪುಸ್ತಕ ಬಿಡುಗಡೆ ಹಾಗೂ ಲೇಖನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಪ್ರಗತಿಪರ ಚಿಂತಕ ದಿನೇಶ್ ಅಮೀನ್ ಮಟ್ಟು, ಅಧ್ಯಕ್ಷತೆ: ರಂಗಕರ್ಮಿ ಪ್ರಸನ್ನ ಹೆಗ್ಗೋಡು, ಪುಸ್ತಕ ಬಿಡುಗಡೆ: ಹಿರಿಯ ಪತ್ರಕರ್ತ ಆರ್.ಸಿ. ವೆಂಕಟೇಶ್‌ಮೂರ್ತಿ, ಪುಸ್ತಕ ಕುರಿತು: ಚಿಂತಕ ನಾ. ದಿವಾಕರ್, ಪ್ರಶಸ್ತಿ ಪ್ರದಾನ: ಚಿಂತಕ ರುದ್ರಪ್ಪ ಅನಗವಾಡಿ, ಸಂವಾದ: ಪ್ರೊ. ಕೆ. ರಾಮದಾಸರ ಸಾಮಾಜಿಕ ಹೋರಾಟದ ಕ್ಷಣಗಳು, ಸ್ಥಳ: ಶ್ರೀ ಬಿ.ವಿ. ಕಾರಂತ ರಂಗ ಚಾವಡಿ, ರಂಗಾಯಣ, ಬೆಳಗ್ಗೆ 10.30ಕ್ಕೆ.
* **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ (ಮೈಸೂರು) ಹಾಗೂ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ವೀರಶೈವ–ಲಿಂಗಾಯಿತ ವಧು–ವರರ ಸಮಾವೇಶ, ಸ್ಥಳ: ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪ, ಉತ್ತರಾದಿ ಮಠದ ರಸ್ತೆ, ಗನ್‌ಹೌಸ್ ಹತ್ತಿರ, ಮಧ್ಯಾಹ್ನ 3ಕ್ಕೆ.
* **ರಂಗ ವಿಕಾಸ ಶಾಲೆ:** ಎರಡನೇ ವರ್ಷದ ಸಂಭ್ರಮ, 'ನಿರ್ಧಿಗಂತವಾಗಿ ಏರಿ' ಸ್ಮರಣ ಸಂಚಿಕೆ ಬಿಡುಗಡೆ, ಬಿಡುಗಡೆ: ಸಿನಿಮಾ ಕವಿ ಜಯಂತ್ ಕಾಯ್ಕಿಣಿ, ಸ್ಥಳ: ಕಿರು ರಂಗಮಂದಿರ, ಸಂಜೆ 4 ಗಂಟೆಗೆ.
* **ಶ್ರೀ ರಾಮಕೃಷ್ಣ ಆಶ್ರಮ:** ಜೂನ್ ತಿಂಗಳ ಕಾರ್ಯಕ್ರಮ, ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀ ಮಾತೆ ಶಾರದಾದೇವಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಸಂಜೆ 6 ಗಂಟೆಗೆ.
* **ಶ್ರೀ ನಾದಬ್ರಹ್ಮ ಸಂಗೀತ ಸಭಾ (ಮೈಸೂರು):** ಟಿ.ವಿ. ಶ್ರೀನಿವಾಸನ್ ಮೆಮೋರಿಯಲ್ ಕಾರ್ಯಕ್ರಮ, ಕರ್ನಾಟಕ ಶಾಸ್ತ್ರೀಯ ಗಾಯನ: ವಿದ್ವಾನ್ ಡಾ. ಆರ್.ಎಸ್. ನಂದಕುಮಾರ್, ವಿದುಷಿ ಪೃಥ್ವಿಭಾಸ್ಕರ್–ಪಿಟೀಲು, ವಿದ್ವಾನ್ ರಾಮಾನುಜನ್–ಮೃದಂಗ ಮತ್ತು ವಿದ್ವಾನ್ ಆರ್.ಐ. ರವಿಶಂಕರ್–ಘಟಂ, ಸ್ಥಳ: ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6 ಗಂಟೆಗೆ.
* **ರಂಗಾಯಣ:** ವಾರಾಂತ್ಯ ರಂಗ ಪ್ರದರ್ಶನ, 'ಮೈ ಫ್ಯಾಮಿಲಿ' ನಾಟಕ ಪ್ರದರ್ಶನ, ತಂಡ: ರಂಗಾಯಣ ರೆಪರ್ಟರಿ, ಸ್ಕ್ರಿಪ್ಟ್ ಡಮಟರ್ಜಿ: ಸತೀಶ್ ತಿಪಟೂರು, ಸಂಗೀತ, ವಿನ್ಯಾಸ, ನಿರ್ದೇಶನ: ಗಣೇಶ್ ಮಂದಾರ್ತಿ, ಸ್ಥಳ: ಭೂಮಿಗೀತ ರಂಗಮಂದಿರ, ರಂಗಾಯಣದ ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ: ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ– ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಮತ್ತೂರು ಕುಮಾರ ಸ್ವಾಮಿ ಹಾಗೂ ಎಸ್. ಸಂಗೀತ, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ: 'ಮಹಾಯೋಗ', 8.35 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ: ಮಕ್ಕಳ ಬೆಳವಣಿಗೆಯ ಹಂತದಲ್ಲಿ ಕಂಡುಬರುವ 'Nuro Developmental Disorders' ಕುರಿತು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮನೋವೈದ್ಯಕೀಯ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥರಾದ ಡಾ. ಭಾಗ್ಯವತಿ ಎಚ್.ಡಿ. ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ: ಮೈಸೂರಿನ ಶ್ರೀರಾಂಪುರದ ಶ್ರೀಗುರು ಕಲಾಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 KRISH-TRISH and Balty boy: ನಾವು ಭಾರತೀಯರು 'ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ: 'ಚೈತನ್ಯ ಚಿಲುಮೆ'– ಬಹುಮುಖ ಪ್ರತಿಭೆ ಅನನ್ಯಾ ಎ.ಎಸ್. ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿಗ್ವಿಜಯ್ ಬಿ.

ಮಧ್ಯಾಹ್ನ: 11.15 ಮಿಶ್ರಮಾಧುರ್ಯ, 12.00 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ: ಜಾನಕಮ್ಮ ಮತ್ತು ಸಂಗಡಿಗರಿಂದ ಸೋಬಾನೆ ಪದ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿಯೋಜನೆಗಳ ಸರಣಿ, 1.20 ಭಾವಗೀತೆಗಳು– ಎನ್. ಜ್ಯೋತಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ: 'ಬಂಗಾರದ ಮನೆ', 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ: ತಾಳಮದ್ದಲೆ.

ಸಂಜೆ: 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ: 1. ತೋರಣ ಹೂರಣ: ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, 2. ಕೃಷಿ ಲೋಕ, 3. ಕೃಷಿ ದರ್ಪಣ: ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ, ಮುನ್ನೋಟ ಪ್ರಸ್ತುತಿ– ಆರ್. ಲೋಕೇಶ್ವರಿ.

ರಾತ್ರಿ: 7.45 ಕನ್ನಡದಲ್ಲಿ ಭಾಷಣ, 8.00 'ನಾದ ಮೀಮಾಂಸೆ': ಕರ್ನಾಟಕ ಶಾಸ್ತ್ರೀಯ ಸಂಗೀತದ ರೂಪು ರೇಷೆ ಕುರಿತ ಸರಣಿ, ಸಂಶೋಧನೆ ಹಾಗೂ ಸಾಹಿತ್ಯ– ಡಾ. ಸಿ.ಎ. ಶ್ರೀಧರ್, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು: ಎಂ.ಪಿ. ನಾಗಲಿಂಗಾಚಾರ್, 9.30 ರಾಷ್ಟ್ರೀಯ ವಿಜ್ಞಾನ ಸಂಚಿಕೆ, 10.00 ರವಿವಾರದ ಅಖಿಲಭಾರತ ಸಂಗೀತ ಸಭಾ, ಶ್ವೇತಾ ಪ್ರಸಾದ್– ಹಾಡುಗಾರಿಕೆ.

ಮೋದಿಯ ಬಿಹಾರ ರ್‍ಯಾಲಿಗಳಿಗೆ 20 ಸಾವಿರ ಕೋಟಿ ಖರ್ಚು

ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಆರೋಪ



ಪಾಟ್ನಾ: ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಶನಿವಾರ ತಮ್ಮ ಪಿಕ್‌ಪಾಕೆಟ್ ಟೀಕೆಯನ್ನು ಮುಂದುವರೆಸಿದ್ದು, ಪ್ರಧಾನಿ ನರೇಂದ್ರ ಮೋದಿ ಬಿಹಾರದಲ್ಲಿ ಮಾತನಾಡಿದ ರ್‍ಯಾಲಿಗಳಿಗೆ ಇದುವರೆಗೆ 20,000 ಕೋಟಿ ರೂ. ಖರ್ಚು ಮಾಡಲಾಗಿದೆ ಎಂದು ಆರೋಪಿಸಿದ್ದಾರೆ.

ಬಿಜೆಪಿ ಕೂಡ ತನ್ನ ಪ್ರತಿದಾಳಿಯನ್ನು ಚುರುಕುಗೊಳಿಸಿದ್ದು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಇಂಡಿಯಾ ಬಣವನ್ನು ಮುನ್ನಡೆಸುತ್ತಿರುವ ವಿರೋಧ ಪಕ್ಷದ ನಾಯಕನನ್ನು ಕೀಳಾಗಿ ಚಿತ್ರಿಸಿ, ಮೇರಾ ಬಾಪ್ ಚಾರಾ ಚೋರ್, ಮುಝೆ ವೋಟ್ ದೋ (ನನ್ನ ತಂದೆ ದನಗಳಿಗೆ ಮೀಸಲಾದ ಮೇವನ್ನು ಕದ್ದಿದ್ದಾರೆ, ನನಗೆ ಮತ ಹಾಕಿ) ಎಂಬ ಘೋಷಣೆ ಹೊಂದಿರುವ ಪೋಸ್ಟರ್‌ಗಳನ್ನು ರಾಜ್ಯ ರಾಜಧಾನಿಯಾದ್ಯಂತ ಹಾಕಲಾಗಿದೆ.

ಒಂದು ದಿನದ ಹಿಂದೆ ವಂದೇ ಭಾರತ್ ರೈಲಿನ ದುಬಾರಿ ಟಿಕೆಟ್ ದರದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದ ತೇಜಸ್ವಿ ಯಾದವ್, ಪಿಕ್‌ಪಾಕೆಟ್ ಮೋದಿ ಸರ್ಕಾರ ಎಂದು ಟೀಕಿಸಿದ್ದರು ಮತ್ತು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಮತ್ತೆ ಅದೇ ಅಭಿವ್ಯಕ್ತಿಯನ್ನು ಬಳಸಿದ್ದಾರೆ.

2014 ರಿಂದ ಬಿಹಾರದಲ್ಲಿ ಮೋದಿಯ ಪ್ರತಿ ರ್‍ಯಾಲಿಗಳಿಗೆ 100 ಕೋಟಿ ರೂ. ವೆಚ್ಚ ಮಾಡಲಾಗಿದೆ ಮತ್ತು ಇಲ್ಲಿಯ ವರೆಗೆ 200 ಅಂತಹ ಸಾರ್ವಜನಿಕ ರ್‍ಯಾಲಿಗಳು ನಡೆದಿವೆ ಎಂದು ಅವರು ಆರೋಪಿಸಿದ್ದಾರೆ.

ಆದ್ದರಿಂದ ಐದು ಚುನಾವಣೆಗಳನ್ನು(ಮೂರು ಲೋಕಸಭೆ ಮತ್ತು ಎರಡು ವಿಧಾನಸಭಾ ಚುನಾವಣೆಗಳು) ಕಂಡ ಈ ಅವಧಿಯಲ್ಲಿ ಮೋದಿ ರ್‍ಯಾಲಿಗಳಿಗಾಗಿ ಒಟ್ಟು 20,000 ಕೋಟಿ ರೂ. ಖರ್ಚು ಮಾಡಲಾಗಿದೆ ಮತ್ತು ಈ ರ್‍ಯಾಲಿಗಳನ್ನು ಸರ್ಕಾರ ಆಯೋಜಿಸಿದೆ. ಅವರ ಉದ್ದೇಶವು ಸ್ಪಷ್ಟವಾಗಿ ಚುನಾವಣಾ ಉದ್ದೇಶವಾಗಿತ್ತು ಎಂದು ಬಿಹಾರದ ಮಾಜಿ ಉಪಮುಖ್ಯಮಂತ್ರಿ ಹೇಳಿದ್ದಾರೆ.

ಗಮನಾರ್ಹ ವಿಚಾರ ಎಂದರೆ, ಮೋದಿ ಶುಕ್ರವಾರ ಸಿವಾನ್ ಜಿಲ್ಲೆಯಲ್ಲಿದ್ದರು. ಇದು ಈ ವರ್ಷ ಬಿಹಾರಕ್ಕೆ ಅವರ ಐದನೇ ಭೇಟಿಯಾಗಿದೆ. ಒಂದು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಎರಡನೇ ಭೇಟಿಯಾಗಿದೆ ಮತ್ತು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ 51ನೇ ಭೇಟಿ ಎಂದು ಹೇಳಲಾಗುತ್ತಿದೆ.

ಸರ್ಕಾರಿ ಕಚೇರಿಗಳಲ್ಲಿ 5 ನಿಮಿಷ ಯೋಗ ಬ್ರೇಕ್ ಘೋಷಿಸಿದ ಹರಿಯಾಣ ಸಿಎಂ



ಕುರುಕ್ಷೇತ್ರ: ಯೋಗವು 'ಜೀವನದ ಕಲೆ' ಎಂದು ಪ್ರತಿಪಾದಿಸಿದ ಹರಿಯಾಣ ಮುಖ್ಯಮಂತ್ರಿ ನಯಬ್ ಸಿಂಗ್ ಸೈನಿ ಅವರು ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಐದು ನಿಮಿಷಗಳ ಯೋಗ ವಿರಾಮ ನೀಡಲಾಗುವುದು ಮತ್ತು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ಏಕರೂಪದ ಯೋಗ ಪಠ್ಯಕ್ರಮವನ್ನು ಜಾರಿಗೆ ತರಲಾಗುವುದು ಎಂದು ಶನಿವಾರ ಘೋಷಿಸಿದರು.

ಇಂದು ಕುರುಕ್ಷೇತ್ರದ ಬ್ರಹ್ಮ ಸರೋವರದಲ್ಲಿ 11ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ನಡೆದ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಮಾತನಾಡಿದ ಸೈನಿ, ಈ ವರ್ಷದ 'ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ' ಘೋಷ ವಾಕ್ಯವು ಯೋಗವು ಕೇವಲ ವೈಯಕ್ತಿಕ ಯೋಗಕ್ಷೇಮಕ್ಕಾಗಿ ಅಲ್ಲ, ಬದಲಾಗಿ ಎಲ್ಲಾ ಮಾನವೀಯತೆಯ ಕಲ್ಯಾಣಕ್ಕಾಗಿ ಎಂದು ಹೇಳಿದರು.

ಯೋಗ ಗುರು ಬಾಬಾ ರಾಮದೇವ್, ಹರಿಯಾಣ ರಾಜ್ಯಪಾಲ ಬಂಡಾರು ದತ್ತಾತ್ರೇಯ, ರಾಜ್ಯದ ಆಯುಷ್ ಮತ್ತು ಆರೋಗ್ಯ ಸಚಿವೆ ಕುಮಾರಿ ಆರತಿ ಸಿಂಗ್ ರಾವ್ ಮತ್ತು ಸಂಸದ ನವೀನ್ ಜಿಂದಾಲ್ ಕೂಡ ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಆಂಧ್ರಪ್ರದೇಶದ ವಿಶಾಖಪಟ್ಟಣದಿಂದ ಪ್ರಧಾನಿ ನರೇಂದ್ರ ಮೋದಿ ಅವರ ಭಾಷಣವನ್ನು ಕಾರ್ಯಕ್ರಮದ ಸಂದರ್ಭದಲ್ಲಿ ನೇರ ಪ್ರಸಾರ ಮಾಡಲಾಯಿತು.

ರಾಜ್ಯಮಟ್ಟದ ಕಾರ್ಯಕ್ರಮಕ್ಕಾಗಿ ಪವಿತ್ರ ಬ್ರಹ್ಮ ಸರೋವರದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರು ಸೇರಿದ್ದರೆ, ರಾಜ್ಯದ 22 ಜಿಲ್ಲೆಗಳು ಮತ್ತು 121 ಬ್ಲಾಕ್‌ಗಳಲ್ಲಿ ನಡೆದ ಯೋಗ ಕಾರ್ಯಕ್ರಮಗಳಲ್ಲಿ ಸುಮಾರು 20 ಲಕ್ಷ ಜನರು ಭಾಗವಹಿಸಿದ್ದರು.

ನಾಳೆ ಸಿಎಂ ಸಿದ್ದರಾಮಯ್ಯ ದೆಹಲಿಗೆ: ರಾಷ್ಟ್ರಪತಿ ಭೇಟಿ



ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಸಂಪುಟದ ಸದಸ್ಯರು ಸೋಮವಾರ ಸಂಜೆ ದೆಹಲಿಗೆ ಬರಲಿದ್ದು, ರಾಷ್ಟ್ರಪತಿ ಹಾಗೂ ಕೇಂದ್ರ ಸಚಿವರನ್ನು ಭೇಟಿ ಮಾಡಲಿದ್ದಾರೆ.

ಬುಧವಾರದವರೆಗೆ ನವದೆಹಲಿಯಲ್ಲಿ ಇರಲಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ ಐದು ಮಸೂದೆಗಳಿಗೆ ಅಂಗೀಕಾರ ನೀಡುವಂತೆ ಮನವಿ ಮಾಡಲಿದ್ದಾರೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಭದ್ರಾ ಮೇಲ್ದಂಡೆ ಯೋಜನೆ ಸೇರಿದಂತೆ ವಿವಿಧ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡುವಂತೆ ಒತ್ತಾಯಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಗೆ ಕಾಲಾವಕಾಶ ಕೇಳಲಾಗಿದೆ ಎಂದು ಮುಖ್ಯಮಂತ್ರಿ ಸಚಿವಾಲಯ ತಿಳಿಸಿದೆ. ಈ ನಡುವೆ, ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ವಿಧಾನ ಪರಿಷತ್ ನಾಮ ನಿರ್ದೇಶನ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಮತ್ತಿತರ ವಿಷಯಗಳ ಕುರಿತು ಚರ್ಚಿಸುವ ಸಾಧ್ಯತೆ ಇದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಜೂ.21– ಕಡಕೊಳ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಜೂನ್ 22 ರಂದು ಬೆಳಿಗ್ಗೆ 10 ರಿಂದ ಸಂಜೆ 5.30 ಗಂಟೆಯವರೆಗೆ ಕಡಕೊಳ, ಕೆ.ಐ.ಎ.ಡಿ.ಬಿ ಇಂಡಸ್ಟ್ರಿಯಲ್ ಏರಿಯಾ, ಬ್ಯಾತಹಳ್ಳಿ, ಸಿಂಧುವಳ್ಳಿ, ದಡದಹಳ್ಳಿ, ದೊಡ್ಡಕಾನ್ಯ, ಚಿಕ್ಕಕಾನ್ಯ, ಮರಸೆ, ಮಾಕನಹುಂಡಿ, ಕೂಡನಹಳ್ಳಿ, ಕೋಚನಹಳ್ಳಿ, ವಿಮಾನ ನಿಲ್ದಾಣ, ಬಿರೇಗೌಡನಹುಂಡಿ, ಕೆ.ಎಂ. ಹುಂಡಿ, ಬಿ.ಜಿ. ಹುಂಡಿ, ಕೆ.ಎನ್. ಹುಂಡಿ, ಆಯರಹಳ್ಳಿ, ಕಿರಾಳು, ದೂರ, ಮುರುಡಗಳ್ಳಿ, ತಳೂರು, ಡಿ. ಕಾಟೂರು, ಟಿ.ವಿ.ಎಸ್. ಫ್ಯಾಕ್ಟರಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಜೂ.24ರಂದು ಸಹ ನಿಲುಗಡೆ: ಜೂನ್ 24 ರಂದು ಬೆಳಿಗ್ಗೆ 10 ರಿಂದ ಸಂಜೆ 5.30 ಗಂಟೆಯವರೆಗೆ ವಿದ್ಯಾರಣ್ಯಪುರಂ 25 ರಿಂದ 30ನೇ ಕ್ರಾಸ್, ಕನಕಗಿರಿ, ವಿವರ್ಸ್ ಕಾಲೋನಿ, ಸ್ಟರ್ಲಿಂಗ್ ಸುತ್ತ–ಮುತ್ತ, ಇಂಡಸ್ಟ್ರಿಯಲ್ ಸಬರ್ಬ್ 1 ರಿಂದ 3ನೇ ಹಂತ, ಚಾಮುಂಡಿಪುರಂವೃತ್ತ, ಸಿಲ್ಕ್ ಫ್ಯಾಕ್ಟರಿ ಸುತ್ತ–ಮುತ್ತ, ಅಶೋಕಪುರಂ, ಕೃಷ್ಣಮೂರ್ತಿಪುರಂ, ಮೇದರಕೇರಿ, ಆರ್.ಟಿ.ಓ ಸುತ್ತ–ಮುತ್ತ, ಬಲ್ಲಾಳ್ ವೃತ್ತ, ನಂಜುಮಳಿಗೆ ಸುತ್ತ–ಮುತ್ತ, ಬಂಡಿಪಾಳ್ಯ ಗ್ರಾಮ, ಹೊಸಹುಂಡಿ ಗ್ರಾಮ, ಗುಡುಮಾದನಹಳ್ಳಿ ಗ್ರಾಮ, ಉತ್ತನಹಳ್ಳಿ ಗ್ರಾಮ, ಏಳಿಗೆಹುಂಡಿ, ಆಲನಹಳ್ಳಿ ರಿಂಗ್ ರಸ್ತೆ ಸುತ್ತ–ಮುತ್ತ, ನಾಚನಹಳ್ಳಿ ಪಾಳ್ಯ, ಕವಿತಾ ಬೇಕರಿ ಸರ್ಕಲ್, ಜೆ.ಪಿ ನಗರ ಎ ಯಿಂದ ಇ ಬ್ಲಾಕ್, ಗೊಬ್ಬಳಿಮರ, ಪೊಲೀಸ್ ಬೂತ್ ವೃತ್ತ ಓಂಕಾರ್ ಬಡಾವಣೆ, ಸಿದ್ದಲಿಂಗೇಶ್ವರ ಬಡಾವಣೆ, ಅಮೋಘ ಬಡಾವಣೆ, ಪ್ಯಾಲೇಸ್ ಹತ್ತಿರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಇಂದು ಕಾಮಾಕ್ಷಿ ಆಸ್ಪತ್ರೆಯಲ್ಲಿ ಯೋಗ ಸಮಾಗಮ

ಮೈಸೂರು,ಜೂ.21– ಮೈಸೂರಿನ ಕಾಮಾಕ್ಷಿ ಆಸ್ಪತ್ರೆ ವತಿಯಿಂದ ಜೂ.22ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ 'ಯೋಗ ಸಮಾಗಮ' ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರಿನ ಜೆಪಿ.ನಗರದಲ್ಲಿರುವ ಕಾಮಾಕ್ಷಿ ಆಸ್ಪತ್ರೆ ಆವರಣದಲ್ಲಿ ಬೆಳಗ್ಗೆ 7ರಿಂದ 8ರವರೆಗೆ ಮೈಸೂರು ಅಷ್ಟಾಂಗ ಯೋಗ ಶಾಲಾದ ಡಾ.ರಮೇಶ್ ಶೆಟ್ಟಿ ಮಾರ್ಗದರ್ಶನದಲ್ಲಿ ಯೋಗ ಸೆಷನ್ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹಿಂದುಳಿದ ವರ್ಗಗಳ ಆಯೋಗಕ್ಕೆ ನಾಲ್ವರು ಸದಸ್ಯರ ನೇಮಕ

ಬೆಂಗಳೂರು, ಜೂ.21– ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಲ್ಲಿ ಖಾಲಿ ಇರುವ ಸದಸ್ಯರ ಹುದ್ದೆಗಳಿಗೆ ನಾಲ್ವರನ್ನು ನಾಮನಿರ್ದೇಶನ ಮಾಡಲಾಗಿದೆ.

ಬೆಂಗಳೂರು ದಕ್ಷಿಣ ಜಿಲ್ಲೆ, ಚನ್ನಪಟ್ಟಣ ತಾಲೂಕು ಹರಲಾಳುಸಂದ್ರ ಗ್ರಾಮದ ನಿವಾಸಿಯಾದ ನಿವೃತ್ತ ಐಜಿಪಿ ಕೆ.ಅರ್ಕೇಶ್, ಮೈಸೂರಿನ ಟಿ.ಕೆ.ಲೇಔಟ್ ನಿವಾಸಿಯಾದ ವಕೀಲ ಶಿವಣ್ಣಗೌಡ, ಮಂಗಳೂರು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಸಮಾಜಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಬಿ.ಸುಮನ ಹಾಗೂ ಧಾರವಾಡದ ನಿವೃತ್ತ ಪ್ರಾಂಶುಪಾಲ ಡಾ.ಸಿ.ಎಂ.ಕುಂದಗೋಳ ಅವರನ್ನು ನಾಮನಿರ್ದೇಶನ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಟಿಪ್ಪಣಿ ಮೂಲಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸರ್ಕಾರದ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಮೈಸೂರಿನ ಭಾರತೀಯ ವಿದ್ಯಾಭವನದಲ್ಲಿ

ಹಿಂದೂಸ್ತಾನಿ ಶಾಸ್ತ್ರೀಯ ಗಾಯನದ ಇಂಪು; ಸಂಗೀತದ ಸೆಲೆಯಲ್ಲಿ ಸಂಭ್ರಮಿಸಿದ ಸಭಿಕರು

ವಿದ್ವಾನ್ ಡಾ.ದತ್ತಾತ್ರೇಯ ವೇಲಂಕರ್ ಗಾನ ಮೋಡಿ





ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಬಿವಿಬಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಂಗೀತ ಕಛೇರಿಯಲ್ಲಿ ಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕ ವಿದ್ವಾನ್ ಡಾ.ದತ್ತಾತ್ರೇಯ ವೇಲಂಕರ್ ಗಾಯನ ಸಾದರಪಡಿಸಿದರು. ಮತ್ತೊಂದು ಚಿತ್ರದಲ್ಲಿ ಬಿವಿಬಿ ಸಭಾಂಗಣದಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಲಾಯಿತು. (ಎಡದಿಂದ) ತಬಲಾ ವಾದಕ ಸುಮಿತ್ ನಾಯಕ್, ಬಿವಿಬಿ ಮೈಸೂರು ಕೇಂದ್ರದ ಆಡಳಿತ ಮಂಡಳಿ ಸದಸ್ಯರಾದ ಗಂಗಾಧರ್, ಗೌರವ ಖಜಾಂಚಿ ಎ.ಟಿ.ಭಾಷ್ಯಂ, ಗಾಯಕ ವಿದ್ವಾನ್ ಡಾ.ದತ್ತಾತ್ರೇಯ ವೇಲಂಕರ್, ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಉಪಾಧ್ಯಕ್ಷ ಡಾ.ಸಿ.ನಾಗಣ್ಣ, ಹಾರ್ಮೋನಿಯಂ ಕಲಾವಿದ ವೀರಭದ್ರಯ್ಯ ಹಿರೇಮಠ್, ಬಿವಿಬಿ ಮೈಸೂರು ಕೇಂದ್ರದ ಆಡಳಿತ ಮಂಡಳಿ ಸದಸ್ಯೆ ನಾಗಲಕ್ಷ್ಮಿ ಅವರನ್ನು ಕಾಣಬಹುದು.

ಮೈಸೂರು,ಜೂ.21(ಪಿಎಂ)– ಹಿಂದೂಸ್ತಾನಿ ಶಾಸ್ತ್ರೀಯ ಗಾಯನದ ಇಂಪು–ಕಂಪು ಆರಂಭದಲ್ಲಿ ಶ್ರೋತೃಗಳನ್ನು ಸೊಗಸಾದ ತರಂಗದಲ್ಲಿ ತೇಲಿಸಿದರೆ, ಬಳಿಕದಲ್ಲಿ ಕೇಳಿಬಂದ ಭಜನೆ ಗಾನವು ಸಭಿಕರಲ್ಲಿ ಭಕ್ತಿಭಾವ ಮೂಡಿಸಿತು. ವಿದ್ವಾನ್ ಡಾ.ದತ್ತಾತ್ರೇಯ ವೇಲಂಕರ್ ಅವರ ಗಾನ ಮೋಡಿಯಿದು. ಖ್ಯಾತ ಹಿಂದೂಸ್ತಾನಿ ಶಾಸ್ತ್ರೀಯ ಗಾಯಕರಾದ ಅವರು, ಸಭಿಕರನ್ನು ಸಂಗೀತದ ಸೆಲೆಯಲ್ಲಿ ಸಂಭ್ರಮಿಸುವಂತೆ ಮಾಡುವಲ್ಲಿ ಯಶಸ್ವಿಯಾದರು.

ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಬಿವಿಬಿ (ಭಾರತೀಯ ವಿದ್ಯಾಭವನ) ಸಭಾಂಗಣದಲ್ಲಿ ಶನಿವಾರ ಸಂಜೆ ಇಂತಹ ಸೊಗಸು ಸೂಸುವ ವಾತಾವರಣ ಸೃಷ್ಟಿಯಾಗಿತ್ತು. ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಘಟಕಗಳ ಸಂಯುಕ್ತಾಶ್ರಯದಲ್ಲಿ 145ನೇ ಸಾಂಸ್ಕೃತಿಕ ಕಾರ್ಯಕ್ರಮವಾಗಿ ನಡೆದ ಹಿಂದೂಸ್ತಾನಿ ಶಾಸ್ತ್ರೀಯ ಗಾಯನದ ಸಂಗೀತ ಕಛೇರಿಯಲ್ಲಿ ಡಾ.ದತ್ತಾತ್ರೇಯ ವೇಲಂಕರ್ ಅವರು ಮಾಧುರ್ಯದ ಹೊನಲು ಹೊಮ್ಮಿಸಿದರು.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಪ್ರಸಿದ್ಧ ಸಂಯೋಜನೆಯಾದ 'ಕರೀಮ್ ನಾಮ್ ತೇರೋ' ಎಂಬ ಪಾರಂಪರಿಕ ಬಂದಿಶ್ ಅನ್ನು ವಿಲಂಬಿತ್ ಏಕತಾಳದಲ್ಲಿ ಸಾದರಪಡಿಸಿ ಸಭಿಕರು ತಲೆದೂಗುವಂತೆ ಮಾಡಿದರು. ವಿಶೇಷವಾಗಿ ನಿಧಾನಗತಿಯಲ್ಲಿ ಸೂಸುವ ಈ ಗಾಯನಕ್ಕೆ ಸಭಿಕರು ಮೈಮರೆತರು. 'ಮಿಯನ್ ಮಲ್ಹಾರ್' ರಾಗದಲ್ಲಿ 'ಬಂದಿಶ್' ಸಂರಚನೆಯಲ್ಲಿ ಸುಶ್ರಾವ್ಯವಾಗಿ ಪ್ರಸ್ತುತಪಡಿಸಿ, ಸಭಿಕರಲ್ಲಿ ಹಿತಾನುಭವ ಉಂಟು ಮಾಡಿದರು.

ಇದಾದ ಬಳಿಕ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಜನಪ್ರಿಯ ತುಣುಕು 'ಬಿಜುರಿ ಚಮಕೆ' ಅನ್ನು ಲಯಬದ್ಧವಾಗಿ ಸಾದರಪಡಿಸಿ ಸಭಿಕರ ಮನ ಗೆದ್ದರು. ವಿದ್ವಾನ್ ಡಾ.ದತ್ತಾತ್ರೇಯ ವೇಲಂಕರ್ ಅವರ ಕಂಠಸಿರಿಯಲ್ಲಿ ಪ್ರತಿಧ್ವನಿಸಿದ ರಾಗ–ತಾಳದ ಮಾಧುರ್ಯಕ್ಕೆ ಸಭಿಕರು ಮನಸೋತರು. ಅರ್ಧ ತಾಸಿಗೂ ಹೆಚ್ಚು ಕಾಲ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಹೊನಲು ಹರಿಸಿದ ಡಾ.ದತ್ತಾತ್ರೇಯ ವೇಲಂಕರ್ ಶ್ರೋತೃಗಳಿಂದ ಅಭಿಮಾನದ ಚಪ್ಪಾಳೆ ಗಿಟ್ಟಿಸಿದರು.

ಅಲ್ಲದೆ, ಕನ್ನಡ ಭಜನೆಗಳನ್ನು ಪ್ರಸ್ತುತಪಡಿಸಿ ಸಭಿಕರನ್ನು ಭಕ್ತಿಯ ಸಿಂಚನದಲ್ಲಿ ಪರವಶವಾಗುವಂತೆ ಮಾಡಿದರು. 'ಏನು ನಿರುಪಮ ಸೊಬಗು... ಓಹೋ ಎಂಥ ಚೆಲುವಿನ ಮೋಹನ...' ಗೀತೆ ಮೂಲಕ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿದರು. ಬಳಿಕ ಕೀರ್ತನಕಾರ ವಿಜಯದಾಸರ ರಚನೆಯಲ್ಲಿ ಪೂರ್ವ ಕಲ್ಯಾಣಿ ರಾಗ ಹಾಗೂ ಆದಿ ತಾಳದಲ್ಲಿರುವ 'ಎಲೆ ಮನ ಮುರಾರಿಯನೆ ಕೊಂಡಾಡು' ಗೀತೆ ಹಾಡುವ ಮೂಲಕ ಸಭಿಕರಲ್ಲಿ ಭಕ್ತಿಭಾವ ಮೂಡಿಸಿದರು. ಅಲ್ಲದೆ, ಸಂತ ಶ್ರೇಷ್ಠ ಕನಕದಾಸರ ರಚನೆಯ 'ನೀ ಮಾಯೆಯೊಳಗೋ... ನಿನ್ನೊಳು ದೇಹವೋ ಹರಿಯೇ...' ಗೀತೆ ಪ್ರಸ್ತುತಪಡಿಸಿ ಭಕ್ತಿಯನ್ನು ಸಭಿಕರ ಮನದಲ್ಲಿ ಮೂಡಿಸಿದರು.

ಒಂದೂವರೆ ತಾಸಿಗೂ ಹೆಚ್ಚು ಕಾಲ ದಣಿವರಿಯದೇ ಗಾಯನ ಸಾದರಪಡಿಸಿದ ಡಾ.ದತ್ತಾತ್ರೇಯ ವೇಲಂಕರ್, ಶ್ರೋತೃಗಳ ಮೆಚ್ಚುಗೆಗೆ ಪಾತ್ರರಾಗಿ ಅಭಿಮಾನದ ಚಪ್ಪಾಳೆ ಪಡೆಯುವಲ್ಲಿ ಯಶಸ್ವಿಯಾದರು. ಪಕ್ಕವಾದ್ಯದಲ್ಲಿ ಸುಮಿತ್ ನಾಯಕ್ (ತಬಲಾ), ವೀರಭದ್ರಯ್ಯ ಹಿರೇಮಠ್ (ಹಾರ್ಮೋನಿಯಂ) ಹಾಗೂ ಸುಚಿತ್ (ತಂಬೂರಿ) ಸಹಕಾರ ನೀಡಿ, ಇವರೂ ಸಭಿಕರ ಅಭಿಮಾನಕ್ಕೆ ಭಾಜನರಾದರು.

ಇದಕ್ಕೂ ಮುನ್ನ ಬಿವಿಬಿ ಮೈಸೂರು ಕೇಂದ್ರದ ಉಪಾಧ್ಯಕ್ಷ ಡಾ.ಸಿ.ನಾಗಣ್ಣ ಕಾರ್ಯಕ್ರಮ ಉದ್ಘಾಟಿಸಿದರು. ಬಿವಿಬಿ ಮೈಸೂರು ಕೇಂದ್ರದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಗೌರವ ಖಜಾಂಚಿ ಎ.ಟಿ.ಭಾಷ್ಯಂ, ಆಡಳಿತ ಮಂಡಳಿ ಸದಸ್ಯರಾದ ಗಂಗಾಧರ್, ನಾಗಲಕ್ಷ್ಮಿ, ಬಿವಿಬಿ ಶಾಲೆಯ ಪ್ರಾಂಶುಪಾಲರಾದ ಲೇಖಾ ನಾಯರ್, ಶ್ರೀ ಕೃಷ್ಣ ಗಾನಸಭಾದ ಅಧ್ಯಕ್ಷ ಬಿ.ಎಸ್.ಶ್ರೀಧರ ರಾಜೇ ಅರಸ್ ಮತ್ತಿತರರು ಹಾಜರಿದ್ದರು.

ಐಟಿಎಂಎಸ್ ಕ್ಯಾಮರಾಗಳ ಅಳವಡಿಕೆ



ಮೈಸೂರು, ಜೂ.21– ನಗರದ ಹೊರಭಾಗದಲ್ಲಿ ಬೈಕ್ ಸವಾರರು ಹೆಲ್ಮೆಟ್, ಕಾರು ಚಾಲಕರು ಸೀಟ್ ಬೆಲ್ಟ್ ಹಾಕದಿದ್ದರೂ ನಡೆಯುತ್ತದೆ, ಮೂರಲ್ಲ ಎಷ್ಟು ಜನ ಬೇಕಾದರೂ ಬೈಕ್‌ನಲ್ಲಿ ಹೋಗಬಹುದು, ಎಷ್ಟೇ ವೇಗವಾಗಿ ಓಡಿಸಿದರೂ ಕೇಳುವವರು ಯಾರಿಲ್ಲ ಎಂಬ ಧೋರಣೆ ಇದ್ದರೆ ಈಗಲೇ ಬದಲಿಸಿಕೊಳ್ಳಿ, ಇಲ್ಲವಾದರೆ ದಂಡದ ಬರೆ ಸಹಿಸಿಕೊಳ್ಳಲು ಸಿದ್ಧರಾಗಿ.

ಹೌದು, ಸಂಚಾರ ನಿಯಮ ಪಾಲನೆ ಬಗ್ಗೆ ನಿಗಾ ವಹಿಸುವುದು, ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲಿಸುವುದರ ಜೊತೆಗೆ ವೇಗ ನಿಯಂತ್ರಣದ ಮೂಲಕ ಅಪಘಾತ ತಪ್ಪಿಸುವ ಉದ್ದೇಶದಿಂದ ಮೈಸೂರು ಜಿಲ್ಲೆಯ ವಿವಿಧೆಡೆ ಪೊಲೀಸರು ಐಟಿಎಂಎಸ್ ಕ್ಯಾಮರಾಗಳನ್ನು ಅಳವಡಿಸಲಾಗಿದೆ ಹೈ–ಡೆಫಿನಿಷನ್(ಹೆಚ್‌ಡಿ) ಕ್ಯಾಮರಾಗಳ ಮೂಲಕ ನೈಜಚಿತ್ರಗಳನ್ನು ಸೆರೆ ಹಿಡಿದು, ಸಂಚಾರ ನಿಯಮ ಉಲ್ಲಂಘಿಸಿದವರಿಗೆ ನೋಟೀಸ್ ಕಳುಹಿಸಲಾಗುತ್ತಿದೆ.

ವಾಹನ ಚಲಾಯಿಸುವಾಗ ಸೀಟ್ ಬೆಲ್ಟ್ ಧರಿಸದೇ, ಹೆಲ್ಮೆಟ್ ಧರಿಸದೇ, ಮೊಬೈಲ್‌ನಲ್ಲಿ ಮಾತನಾಡಿಕೊಂಡು ಅತಿವೇಗವಾಗಿ ಚಾಲನೆ ಮಾಡುವುದು, ಬೈಕಿನಲ್ಲಿ ಮೂರು ಜನ ಸಂಚರಿಸುವುದು, ಹೀಗೆ ಸಂಚಾರ ನಿಯಮಗಳ ಉಲ್ಲಂಘನೆಯಿಂದಾಗಿ ಹೆಚ್ಚು ಅಪಘಾತಗಳು ಸಂಭವಿಸಿ, ಸಾವು–ನೋವು ಸಂಭವಿಸುತ್ತಿದೆ. ಅದರಲ್ಲೂ ಯುವಕರು ಹೆಚ್ಚಾಗಿ ಜೀವ ಕಳೆದುಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಮೈಸೂರಿನ ವಿವಿಧೆಡೆ ಕ್ಯಾಮರಾ ಅಳವಡಿಸಲಾಗಿದೆ.

ಹತ್ತಾರು ಕ್ಯಾಮರಾಗಳು: ದೇವಲಾಪುರದಿಂದ ಐಪಿಎಸ್‌ನಗರ, ಆರ್ಚಿನ್ ರಸ್ತೆ, ನಂಜನಗೂಡು ರಸ್ತೆ ಕಡೆಗೆ, ಬೇರ್ಯ ವೃತ್ತದಿಂದ ಕೆ.ಆರ್.ನಗರ, ಹಾಸನ, ಕೆ.ಆರ್.ಪೇಟೆ ಕಡೆಗೆ, ಗರುಡಗಂಭ ಸರ್ಕಲ್‌ನಿಂದ ಬೇರ್ಯ ವೃತ್ತ, ಭುಗತಹಳ್ಳಿ ವೃತ್ತದಿಂದ ವರುಣ ಹಾಗೂ ಮೈಸೂರು, ಉದ್ಬೂರು ವೃತ್ತದಿಂದ ಉದ್ಬೂರು ಹಾಗೂ ಹೆಚ್.ಡಿ.ಕೋಟೆ, ವರುಣ ಕೆರೆಯಿಂದ ತಿ.ನರಸೀಪುರ ಹಾಗೂ ವರುಣಗೆ, ಇಲವಾಲ ಬೈಪಾಸ್‌ನಿಂದ ಕೊಡಗು ಹಾಗೂ ಮೈಸೂರು, ರಮ್ಮನಹಳ್ಳಿ ವೃತ್ತದಿಂದ ಮಹದೇವಪುರ, ನಂಜನಗೂಡು ಹುಲ್ಲಹಳ್ಳಿ ಸರ್ಕಲ್‌ನಿಂದ ಮೈಸೂರು, ತಿ.ನರಸೀಪುರ ವಿದ್ಯೋದಯ ಸರ್ಕಲ್‌ನಿಂದ ಮಾರ್ಕೆಟ್, ಮೂಗೂರುನಿಂದ ತಿ.ನರಸೀಪುರ ಹಾಗೂ ಕೊಳ್ಳೆಗಾಲ, ತಲಕಾಡು ಜಂಕ್ಷನ್‌ನಿಂದ ಮೈಸೂರು ರಸ್ತೆ ಹಾಗೂ ಕೊಳ್ಳೆಗಾಲ, ಬನ್ನೂರು ಕಾವೇರಿ ಸರ್ಕಲ್‌ನಿಂದ ಸಂತೆಮಾಳ ಹಾಗೂ ಶ್ರೀರಂಗಪಟ್ಟಣ, ಯಲಚಗೆರೆಬೋರೆ ಸರ್ಕಲ್‌ನಿಂದ ಊಟಿ ಹಾಗೂ ನಂಜನಗೂಡು, ನಂಜನಗೂಡು ಗೋಳೂರು ಜಂಕ್ಷನ್‌ನಿಂದ ತಿ.ನರಸೀಪುರ ರಸ್ತೆ, ಗೋಳೂರು, ಬೆಟ್ಟದಪುರ ಸರ್ಕಲ್‌ನಿಂದ ಪಿರಿಯಾಪಟ್ಟಣ, ಹಾಸನ ಹಾಗೂ ಕೆ.ಆರ್.ನಗರ, ಬಿಳಿಕೆರೆ ಸರ್ಕಲ್‌ನಿಂದ ಮೈಸೂರು ಹಾಗೂ ಹುಣಸೂರು, ಬೈಲಕುಪ್ಪೆ ಕೊಪ್ಪ ಜಂಕ್ಷನ್, ಪಿರಿಯಾಪಟ್ಟಣ ಸರ್ಕಲ್‌ನಿಂದ ಕೊಡಗು, ಬೆಟ್ಟದಪುರ, ಮೈಸೂರು ಹಾಗೂ ಗೋಣಿಕೊಪ್ಪಲು, ಹುಣಸೂರು ಕಲ್ಪತರು ಕಡೆಯಿಂದ ಕೋರ್ಟ್ ರಸ್ತೆ ಹಾಗೂ ಮೈಸೂರು, ಸರಗೂರು ಕಡೆಯಿಂದ ಹೆಚ್.ಡಿ.ಕೋಟೆ, ಹ್ಯಾಂಡ್‌ಪೋಸ್ಟ್ ಸರ್ಕಲ್‌ನಿಂದ ಸರಗೂರು, ಮೈಸೂರು ಹಾಗೂ ಹೆಚ್.ಡಿ.ಕೋಟೆ ಕಡೆಗೆ ಐಟಿಎಂಎಸ್ ಕ್ಯಾಮರಾಗಳನ್ನು ಅಳವಡಿಸಲಾಗಿದೆ ಎಂದು ಮೈಸೂರು ಜಿಲ್ಲಾ ಎಸ್ಪಿ ವಿಷ್ಣುವರ್ಧನ ತಿಳಿಸಿದ್ದಾರೆ.

ಇಂದು ಉಚಿತ ಆ್ಯಂಟಿ ರೇಬೀಸ್ ಲಸಿಕಾ ಶಿಬಿರ



ಮೈಸೂರು, ಜೂ.21– ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಶ್ರೀ ಪೆಟ್(ಸಾಕುಪ್ರಾಣಿ) ಆಸ್ಪತ್ರೆಯಲ್ಲಿ ಜೂ.22 ರಂದು ಉಚಿತ ಆ್ಯಂಟಿ ರೇಬೀಸ್ ಲಸಿಕಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಬೆಳಗ್ಗೆ 8 ರಿಂದ ರಾತ್ರಿ 8 ಗಂಟೆಯವರೆಗೆ ಶಿಬಿರ ನಡೆಯಲಿದ್ದು, ಸಾಕುನಾಯಿಗಳು, ಬೆಕ್ಕುಗಳಿಗೆ ಉಚಿತ ಲಸಿಕೆ ಹಾಕಲಾಗುವುದು. ಹೆಚ್ಚಿನ ಮಾಹಿತಿಗಾಗಿ ಡಾ.ದೀಪಕ್(9480702704) ಅವರನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಭಾರತ ಇರಾನ್ ಪರ ನಿಲ್ಲಬೇಕು: ಸಿಎಂ ಸಿದ್ದರಾಮಯ್ಯ

ಬೆಂಗಳೂರು, ಜೂ.21– ಇಸ್ರೇಲ್–ಇರಾನ್ ಯುದ್ಧದಲ್ಲಿ ಭಾರತ ಇರಾನ್ ಪರ ನಿಲ್ಲುವಂತೆ ಸಿಎಂ ಸಿದ್ದರಾಮಯ್ಯ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಗಾಜಾ ಮತ್ತು ಇರಾನ್‌ನಲ್ಲಿ ಇಸ್ರೇಲ್ ನಡೆಸಿದ ದಾಳಿ ಬಗ್ಗೆ ಭಾರತ ವಹಿಸಿರುವ ಮೌನವನ್ನು 'ಕೇವಲ ಧ್ವನಿಯ ನಷ್ಟವಲ್ಲ, ಮೌಲ್ಯಗಳ ಶರಣಾಗತಿ' ಎಂದು ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಟೀಕಿಸಿ ಬರೆದಿದ್ದಾರೆ.

ಈ ಲೇಖನ ಕೊಂಡಿಯನ್ನು ಹಂಚಿಕೊಂಡಿರುವ ಸಿಎಂ ಸಿದ್ದರಾಮಯ್ಯ, ಎರಡು ಕಡೆ ಭಾರೀ ಪ್ರಮಾಣದಲ್ಲಿ ಕ್ಷಿಪಣಿ ದಾಳಿ ನಡೆಸುತ್ತಿದ್ದರೂ ಭಾರತ ಇಲ್ಲಿಯವರೆಗೆ ಯಾವುದೇ ದೇಶದ ಪರ ನಿಲ್ಲದೇ ತಟಸ್ಥ ನಿಲುವು ತಳೆದಿದೆ. ಇರಾನ್ ಮೇಲೆ ಇಸ್ರೇಲ್ ನಡೆಸಿದ ಅಪಾಯಕಾರಿ ದಾಳಿ ಕಾನೂನುಬಾಹಿರ. ಇದು ಪ್ರಾದೇಶಿಕ ಶಾಂತಿಗೆ ಬೆದರಿಕೆ ಹಾಕುತ್ತದೆ ಮತ್ತು ಭಾರತದ ಹಿತಾಸಕ್ತಿಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ.

ಸೋನಿಯಾ ಗಾಂಧಿಯವರ ಲೇಖನವು ನಾಗರಿಕರ ಜೀವಗಳು ಬಲಿಯಾದಾಗ, ಅಂತಾರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಿದಾಗ ಮತ್ತು ರಾಜತಾಂತ್ರಿಕತೆಯನ್ನು ತ್ಯಜಿಸಿದಾಗ ಭಾರತ ಮೌನವಾಗಿರಲು ಸಾಧ್ಯವಿಲ್ಲ ಎಂಬುದನ್ನು ಪ್ರಬಲವಾಗಿ ನೆನಪಿಸುತ್ತದೆ ಎಂದು ಹೇಳಿದ್ದಾರೆ.

ಕಾಶ್ಮೀರ ಸೇರಿದಂತೆ ನಿರ್ಣಾಯಕ ಸಮಯದಲ್ಲಿ ಇರಾನ್ ಭಾರತದ ಪರವಾಗಿ ನಿಂತಿದ್ದರೂ ಕೇಂದ್ರ ಸರ್ಕಾರದ ಮೌನವಾಗಿದೆ. ಈ ಮೊದಲು ಗಾಜಾ ಈಗ ಇರಾನ್ ವಿಚಾರದಲ್ಲಿ ಮೌನವಾಗಿರುವುದು ಶಾಂತಿಯನ್ನು ಪ್ರತಿಪಾದಿಸುವ ನಮ್ಮ ವಿದೇಶಾಂಗ ನೀತಿಯ ನಿರ್ಗಮನವನ್ನು ಸೂಚಿಸುತ್ತದೆ. ಪಶ್ಚಿಮ ಏಷ್ಯಾದಲ್ಲಿ ನಮ್ಮದೇ ಆದ ದೀರ್ಘಕಾಲೀನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಭಾರತ ಈಗ ಮಾತನಾಡಬೇಕು ಎಂದು ಸಿಎಂ ಒತ್ತಾಯಿಸಿದ್ದಾರೆ.

ಇರಾನ್ ಮೇಲೆ ಇಸ್ರೇಲ್ ನಡೆಸಿದ ಕಾನೂನುಬಾಹಿರ ದಾಳಿಯು ಅಪಾಯಕಾರಿ ಉಲ್ಬಣವಾಗಿದೆ – ಇದು ಪ್ರಾದೇಶಿಕ ಶಾಂತಿಗೆ ಬೆದರಿಕೆ ಹಾಕುತ್ತದೆ. ಭಾರತದ ಹಿತಾಸಕ್ತಿಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ.

ಸೋನಿಯಾ ಗಾಂಧಿಯವರ ಲೇಖನವು ನಾಗರಿಕರ ಜೀವಗಳು ಬಲಿಯಾದಾಗ, ಅಂತಾರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಿದಾಗ ಮತ್ತು ರಾಜತಾಂತ್ರಿಕತೆಯನ್ನು ತ್ಯಜಿಸಿದಾಗ ಭಾರತ ಮೌನವಾಗಿರಲು ಸಾಧ್ಯವಿಲ್ಲ ಎಂಬುದನ್ನು ಪ್ರಬಲವಾಗಿ ನೆನಪಿಸುತ್ತದೆ.

ಕಾಶ್ಮೀರ ಸೇರಿದಂತೆ ನಿರ್ಣಾಯಕ ಕ್ಷಣಗಳಲ್ಲಿ ಇರಾನ್ ಭಾರತದ ಪರವಾಗಿ ನಿಂತಿದೆ. ಆದರೂ, ಭಾರತದ ಮೌನ – ಮೊದಲು ಗಾಜಾ ಮತ್ತು ಈಗ ಇರಾನ್ ಬಗ್ಗೆ – ಶಾಂತಿ ಮತ್ತು ಸಮತೋಲನದಲ್ಲಿ ಬೇರೂರಿರುವ ನಮ್ಮ ತತ್ವಬದ್ಧ ವಿದೇಶಾಂಗ ನೀತಿಯಿಂದ ತೊಂದರೆದಾಯಕ ನಿರ್ಗಮನವನ್ನು ಸೂಚಿಸುತ್ತದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.


ರಾಜ್ಯ ಬ್ರಾಹ್ಮಣ ಸಭಾಕ್ಕೆ ಜಂಟಿ ಕಾರ್ಯದರ್ಶಿಗಳ ನೇಮಕ

ಮೈಸೂರು, ಜೂ.21(ಎಸ್‌ಪಿಎನ್)– 2025–26ನೇ ಸಾಲಿಗೆ 119 ಮಂದಿ ರಾಜ್ಯ ಜಂಟಿ ಕಾರ್ಯದರ್ಶಿಗಳನ್ನಾಗಿ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಎಸ್.ರಘುನಾಥ್ ಪಟ್ಟಿ ಪ್ರಕಟಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯಿಂದ ಸತೀಶ್ ರುದ್ರಭೂಮಿ, ಮೈಸೂರು ಜಿಲ್ಲೆಯಿಂದ ನಾಗರಾಜ್ ಕಲ್ಕೆರೆ, ಟಿ.ಎಸ್. ಅರುಣ್, ಆರ್.ಎಸ್.ಸತ್ಯನಾರಾಯಣ, ಭಾಗ್ಯಶ್ರೀ ಭಟ್, ಎಂ.ಎಸ್.ಪ್ರಶಾಂತ್, ಕೆ.ಎನ್.ಭೂಷಣ್, ಮಂಡ್ಯದಿಂದ ಶಂಕರನಾರಾಯಣ ಶಾಸ್ತ್ರಿ, ಶ್ರೀರಂಗಪಟ್ಟಣದ ಮಹಾಬಲೇಶ್ವರ ಭಟ್. ಹಾಸನದಿಂದ ಡಾ.ಎಂ.ಎನ್.ಪಾಂಡುರಂಗ, ಕೆ.ಎಸ್.ನಾಗರಾಜ್, ಡಿ.ಎನ್. ವೆಂಕಟೇಶ್‌ಮೂರ್ತಿ, ಚನ್ನರಾಯಪಟ್ಟಣದ ಬನಶಂಕರಿ, ಅರಸಿಕೆರೆಯ ಜಿ.ರವಿಕುಮಾರ್ ಸೇರಿದಂತೆ ಒಟ್ಟು 119 ಮಂದಿ ರಾಜ್ಯ ಜಂಟಿಕಾರ್ಯದರ್ಶಿಗಳ ಹೆಸರನ್ನು ಪ್ರಕಟಿಸಿದ್ದಾರೆ.

ಕೊಳಚೆ ನೀರು ಸಮರ್ಪಕ ನಿರ್ವಹಣೆ ಜಾಲ ರೂಪಿಸಲು

ಪರಿಸರ ಪರಿಹಾರ ನಿಧಿ ಅಡಿಯಡಿ ಮೈಸೂರಿಗೆ 75.40 ಕೋಟಿ ಬಿಡುಗಡೆ



ಮೈಸೂರು, ಜೂ.21(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕೊಳಚೆ ನೀರಿನ ಸಮರ್ಪಕ ನಿರ್ವಹಣೆ ಜಾಲ ರೂಪಿಸಲು(ಯುಜಿಡಿ ಉನ್ನತೀಕರಣ) ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ(ಎನ್‌ಜಿಟಿ)ಯು ಪರಿಸರ ಪರಿಹಾರ ನಿಧಿ ಅಡಿಯಲ್ಲಿ 75.40 ಕೋಟಿ ರೂ. ಅನುದಾನ ನೀಡಿದೆ.

ಯುಜಿಡಿ ಪೈಪ್‌ಲೈನ್ ಉನ್ನತೀಕರಿಸುವ ಮೂಲಕ ಬಳಸಿದ ನೀರನ್ನು ಶುದ್ಧೀಕರಣ ಘಟಕಗಳಲ್ಲಿ ಸಂಗ್ರಹಿಸಿ, ನಂತರ ಸಂಗ್ರಹಿಸಿದ ಕೊಳಚೆ ನೀರನ್ನು ಶುದ್ಧೀಕರಿಸುವ ಮೂಲಕ ಕೊಳಚೆ ನಿರ್ಮೂಲನೆ ಜೊತೆಗೆ ನೀರಿನ ಸದ್ಬಳಕೆ ಮಾಡುವ ಉದ್ದೇಶವುಳ್ಳ ಮಹತ್ವದ ಯೋಜನೆ ಇದಾಗಿದೆ.

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ (ಕೆಯುಐಡಿಎಫ್‌ಸಿ)ಕ್ಕೆ ಎನ್‌ಜಿಟಿ ಪರಿಸರ ಪರಿಹಾರ ನಿಧಿಯಿಂದ ಈಗಾಗಲೇ ಅನುದಾನ ಬಿಡುಗಡೆಯಾಗಿದ್ದು, ಮೈಸೂರು ನಗರಪಾಲಿಕೆ ನೀಡುವ ಮಾಹಿತಿ ಆಧಾರದ ಮೇಲೆ ಯುಜಿಡಿ ಉನ್ನತೀಕರಣ ಯೋಜನೆ ಸಿದ್ಧಪಡಿಸಿ, ಕಾಮಗಾರಿ ಆರಂಭಿಸಲಾಗುತ್ತದೆ. ಅದರಂತೆ ಈಗಾಗಲೇ ಯುಜಿಡಿ ಉನ್ನತೀಕರಣ ಪ್ಲಾನ್ ಸಿದ್ಧವಾಗಿದ್ದು, ಸದ್ಯದಲ್ಲಿಯೇ ಕಾಮಗಾರಿ ಆರಂಭವಾಗಲಿದೆ.

ವಿದ್ಯಾರಣ್ಯಪುರಂನ ನೀರು ಶುದ್ಧೀಕರಣ ಘಟಕದಲ್ಲಿ 67.5 ಎಂಎಲ್‌ಡಿ, ರಾಯನಕೆರೆ ಶುದ್ಧೀಕರಣ ಘಟಕದಲ್ಲಿ 60 ಎಂಎಲ್‌ಡಿ, ಕೆಸರೆ ಶುದ್ಧೀಕರಣ ಘಟಕದಲ್ಲಿ 45 ಹಾಗೂ ಹೆಬ್ಬಾಳ ಶುದ್ಧೀಕರಣ ಘಟಕದಲ್ಲಿ 8 ಎಂಎಲ್‌ಡಿ ಸೇರಿ 180.5 ಎಂಎಲ್‌ಡಿ ಬಳಸಿದ ನೀರಿನ ಸಂಗ್ರಹ ಸಾಮರ್ಥ್ಯ ಇದ್ದು, ಯುಜಿಡಿ ಪೈಪ್‌ಲೈನ್ ಮೂಲಕ ವ್ಯವಸ್ಥಿತವಾಗಿ ಬಳಸಿದ ನೀರು ಸಂಗ್ರಹಿಸುವ ಕಾಮಗಾರಿ ನಡೆಯಬೇಕಿದೆ.

ನಗರದೆಲ್ಲೆಡೆ ಇರುವ ಯುಜಿಡಿ ಪೈಪ್‌ಲೈನ್ ಬಹುತೇಕ ಮಳೆ ನೀರು ಹರಿಸುವ ಮೋರಿಗಳಿಗೆ ಕನೆಕ್ಟ್ ಆಗಿದೆ. ಅಲ್ಲದೆ ಹಲವೆಡೆ ಪೈಪ್‌ಲೈನ್ ಮುಚ್ಚಿ ಹೋಗಿವೆ. ಇದರಿಂದ ಒಂದೆಡೆ ಮಳೆ ನೀರಿಗೆ ಕೊಳಚೆ ನೀರು ಸೇರಿದರೆ, ಮತ್ತೊಂದೆಡೆ ಬಳಸಿದ ನೀರು ಅಲ್ಲಲ್ಲೇ ನಿಂತು ಕೊಳಚೆ ಪ್ರದೇಶ ಹೆಚ್ಚಾಗುತ್ತಿದೆ. ಪರಿಣಾಮ ನದಿಗಳಿಗೆ ಸೇರುವ ಮಳೆ ನೀರನ್ನು ಶುದ್ಧೀಕರಿಸಿದರೂ ಕುಡಿಯಲು ಯೋಗ್ಯವಾಗುತ್ತಿಲ್ಲ. ಹಾಗೆಯೇ ಎಲ್ಲೆಂದರಲ್ಲಿ ಕೊಳಚೆ ಹೆಚ್ಚಾಗಿ ನಗರದ ಸೌಂದರ್ಯವೂ ಹಾಳಾಗುತ್ತಿದೆ.

ಕೊಳಚೆ ನೀರಿನ ಹರಿವು ಹಾಗೂ ಸಂಸ್ಕರಣೆಯ ನಡುವಿನ ಅಂತರ ಕಡಿಮೆ ಮಾಡುವ ಸಲುವಾಗಿ ಎನ್‌ಜಿಟಿ ಪರಿಸರ ಪರಿಹಾರ ನಿಧಿ ಅಡಿಯಲ್ಲಿ ಒಳಚರಂಡಿ ವ್ಯವಸ್ಥೆಯ ನಿರ್ಮಾಣ, ಉನ್ನತೀಕರಣ ಹಾಗೂ ಒಳಚರಂಡಿ ಸಂಸ್ಕರಣಾ ಘಟಕಗಳ ದುರಸ್ತಿ ಕಾಮಗಾರಿಗಳಿಗೆ ಅನುದಾನ ನೀಡಲಾಗಿದೆ. ಈ ಕಾಮಗಾರಿಯಿಂದ ಕೊಳಚೆ ನೀರಿನ ಮರು ಬಳಕೆ ಅನುಕೂಲವಾಗುವುದರ ಜೊತೆಗೆ ಯುಜಿಡಿ ಪೈಪ್‌ಲೈನ್ ಸಮಸ್ಯೆಗಳು ಬಗೆಹರಿಯಲಿವೆ ಎಂದು ನಗರಪಾಲಿಕೆ ವಾಣಿವಿಲಾಸ ವಾಟರ್ ವರ್ಕ್ಸ್‌ನ ಇಂಜಿನಿಯರ್‌ಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಯೋಜನೆ ಸಿದ್ಧವಾಗಿದೆ: ಬಳಸಿದ ನೀರಿನ ಸಂಗ್ರಹಣೆಗೆ 10 ಯುಜಿಡಿ ಮಾರ್ಗಗಳ ಉನ್ನತೀಕರಣಕ್ಕೆ ಯೋಜನೆ ಸಿದ್ಧವಾಗಿದೆ. ಯೋಜನೆಗೆ ಅನುಮತಿ ದೊರೆತ ಕೂಡಲೇ ಕಾಮಗಾರಿ ಆರಂಭವಾಗಲಿದೆ. ಈ ಯೋಜನೆಯಿಂದ ಸಾಕಷ್ಟು ಅನುಕೂಲತೆ ಜೊತೆಗೆ ಮೈಸೂರಿನಲ್ಲಿ ನೈರ್ಮಲ್ಯತೆ ಕಡಿಮೆಯಾಗಲಿದೆ ಎಂದು ಮಾಹಿತಿ ನೀಡಿದರು.

ನಗರಸಭೆ ಸೇರಿ ಜಿಲ್ಲೆಯ 2 ತಾಲೂಕುಗಳಿಗೆ ಅನುದಾನ...!

ಮೈಸೂರು ನಗರ ಮಾತ್ರವಲ್ಲದೆ ನಗರಸಭೆ ಸೇರಿ ಜಿಲ್ಲೆಯ 2 ತಾಲೂಕುಗಳಿಗೆ ಎನ್‌ಜಿಟಿ ಪರಿಸರ ಪರಿಹಾರ ನಿಧಿ ಅಡಿಯಲ್ಲಿ ಯುಜಿಡಿ ಉನ್ನತೀಕರಣಕ್ಕೆ ಅನುದಾನ ನೀಡಲಾಗಿದೆ. ಹೂಟಗಳ್ಳಿ ನಗರಸಭೆಗೆ 57.69 ಕೋಟಿ ರೂ., ಕೆ.ಆರ್.ನಗರಕ್ಕೆ 26.48 ಕೋಟಿ ರೂ. ಹಾಗೂ ಟಿ.ನರಸೀಪುರಕ್ಕೆ 13.08 ಕೋಟಿ ರೂ. ಅನುದಾನ ನೀಡಲಾಗಿದೆ.

ನಕ್ಕರೆ ಅದೇ ಸ್ವರ್ಗ

ಗುಂಡ : ನಮ್ಮದು ಪರಮಾಶ್ಚರ್ಯ ದೇಶ
ರಂಗ : ಅದ್ಹೇಗೆ ಹೇಳ್ತಿ?
ಗುಂಡ : ದುಡ್ಡಿಲ್ಲ ಅನ್ನೋ ಕಾರಣಕ್ಕೆ ಓದು ಮುಂದುವರಿಸಲಾಗದೆ ಶಾಲೆ ಬಿಟ್ಟವರು ಬಹಳಷ್ಟು ಜನ ಸಿಗ್ತಾರೆ. ಆದ್ರೆ, ದುಡ್ಡಿಲ್ಲ ಅಂತ ಕುಡಿತ, ಗುಟ್ಕಾ, ಧೂಮಪಾನ ಬಿಟ್ಟವರು ಒಬ್ರೂ ಸಿಗೋಲ್ಲಾ!

ಮೈಸೂರು ಮಿತ್ರ
ಭಾನುವಾರ, 22 ಜೂನ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

'ಆದಷ್ಟು ಒಬ್ಬರೇ ಬದುಕುವುದನ್ನು ಕಲಿಯಬೇಕು. ಏಕೆಂದರೆ ಜನರು ಸಮಾಧಿವರೆಗೂ ಮಾತ್ರ ಬರುತ್ತಾರೆ. ಸಮಾಧಿ ಒಳಗಲ್ಲ...'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಆಳಾಗಿ ದುಡಿ, ಅರಸನಾಗಿ ಉಣ್ಣು'

ನಿಮ್ಮ ಪತ್ರಗಳು

ತಾಲೂಕು ಕಚೇರಿಗಳು ಹಣ ಲೂಟಿ ಮಾಡುವ ಕೇಂದ್ರಗಳು

ಮಾನ್ಯರೆ,

ಕಂದಾಯ ಸಚಿವ ಕೃಷ್ಣ ಬೈರೇಗೌಡರು ಇತ್ತೀಚೆಗೆ ಬೆಂಗಳೂರು ದಕ್ಷಿಣ ತಾಲೂಕು ಕಚೇರಿಗೆ ದಿಡೀರ್ ಭೇಟಿ ನೀಡಿದಾಗ ಅಲ್ಲಿನ ಸಿಬ್ಬಂದಿಯ ಕಾರ್ಯ ವೈಖರಿಯನ್ನು ನೋಡಿ, ತೀವ್ರ ಅಸಮಾಧಾನ ಗೊಂಡು, ಯಾವ– ಯಾವ ಕೆಲಸಕ್ಕೆ ಎಷ್ಟು ಹಣ ಕೊಡಬೇಕೆಂದು, ರೇಟ್‌ಗಳ ಬೋರ್ಡ್ ಹಾಕಿ ಬಿಡಿ ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾನ್ಯ ಸಚಿವರೇ, ಇದು ರಾಜ್ಯದ ಎಲ್ಲಾ ತಾಲೂಕು ಕಚೇರಿಗಳ, ರೆವೆನ್ಯೂ ಕಚೇರಿಗಳ ಹಣೆಬರಹವೇ ಇಷ್ಟು. ಒಂದು ಕೆಲಸಕ್ಕೆ ಹತ್ತಾರು ಬಾರಿ ಸಾರ್ವಜನಿಕರನ್ನು ಅಲೆಯುವಂತೆ ಮಾಡುವ ಉದ್ದೇಶ ಹಣ ಕೊಡಲಿ ಎಂದು. ಒಂದು ಫೈಲ್, ಒಬ್ಬ ಕೇಸ್ ವರ್ಕರ್‌ರಿಂದ ಇನ್ನೊಂದು ಟೇಬಲ್‌ಗೆ ಹೋಗಲು ಹಣ ಕೊಟ್ಟರೆ ಮಾತ್ರ ಸಾಧ್ಯ. ಒಂದು ಜಮೀನಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ತಾಲೂಕು ಆಫೀಸ್‌ನಲ್ಲೇ ದೊರೆಯುತ್ತವೆ (ಪಹಣಿ, ಆರ್‌ಆರ್ ಕಾಪಿ, ಚೆಕ್‌ಬಂದಿ...) ಆದರೆ ಅವುಗಳನ್ನು ತರಲು ರೈತರಿಗೆ ಹೇಳುತ್ತಾರೆ. ಇದೊಂದು ರೀತಿಯಲ್ಲಿ ದುಡ್ಡು ಮಾಡುವ ದಂಧೆಯಷ್ಟೇ. ಜಡ್ಡು ಗಟ್ಟಿಯಾದ ಆಡಳಿತ ಯಂತ್ರ, ಯಾರು ಬಂದರೂ ರಿಪೇರಿಯಾಗದ ಸ್ಥಿತಿ ನಿರ್ಮಾಣವಾಗಿದೆ.

ಇದಕ್ಕೊಂದು, ಉದಾಹರಣೆ ಎಂದರೆ ನನ್ನ ಸ್ವಂತ ಅನುಭವವನ್ನೇ ಹೇಳುತ್ತೇನೆ. ನಮ್ಮ ತಂದೆ ನಿಧನರಾದ ನಂತರ, ನಾವು ನಮ್ಮ ಜಮೀನಿನ ಪೌತಿ ಖಾತೆ ಮಾಡಿಸಿಕೊಳ್ಳಲು ಕೆ.ಆರ್.ಪೇಟೆ ತಾಲೂಕು ಕಚೇರಿಗೆ ಒಂದು ವರ್ಷದಿಂದ ಎಲ್ಲಾ ದಾಖಲೆಗಳು ಸರಿ ಇದ್ದರೂ ಅಲೆಯುತ್ತಿದ್ದೇನೆ. ಇದಕ್ಕೆ ಅಲ್ಲಿನ ಸಿಬ್ಬಂದಿಯೊಬ್ಬರು ಹೇಳುವುದು, ಆ ಕೇಸ್ ವರ್ಕರ್ ಅನ್ನು 'ಸ್ವಲ್ಪ ನೋಡಿ' ಸಾರ್ ಎಲ್ಲಾ ಸರಿಯಾಗುತ್ತದೆ ಎನ್ನುತ್ತಾನೆ. ತಾಲೂಕು ಕಚೇರಿಗಳು ಭ್ರಷ್ಟಾಚಾರದ ಹಣ ಮಾಡುವ ದಂಧೆ ಕೇಂದ್ರಗಳಾಗಿವೆ. ಯಾರು ಬಂದರೂ, ಸರಿಪಡಿಸಲಾಗದಷ್ಟು ಹಾಳಾಗಿವೆ. ರಾಜ್ಯ ಸರ್ಕಾರದಲ್ಲಿ ಪ್ರಾಮಾಣಿಕ ಹಾಗೂ ದಕ್ಷ ಸಚಿವರೆಂದೇ ಹೇಳಲಾಗುತ್ತಿರುವ ಕೃಷ್ಣ ಬೈರೇಗೌಡ ಅವರು, ಇದರ ಶುದ್ಧೀಕರಣಕ್ಕೆ ಹೊಸ ಕಾನೂನನ್ನೇ ತಂದು ಅನ್ನದಾತರಿಗೆ ಅನುಕೂಲ ಮಾಡಿಕೊಡಬೇಕು.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

■ ಸಾರ್ವಜನಿಕ ರಸ್ತೆ, ಪ್ರದೇಶಗಳಲ್ಲಿ ಹಸು ಕರು ಕಟ್ಟಿ ಜನರಿಗೆ ತೊಂದರೆ



ಮಾನ್ಯರೆ,

ಮೈಸೂರಿನ 22ನೇ ವಾರ್ಡಿನಲ್ಲಿ ದೇವಾಲಯವೊಂದಿದ್ದು, ಸದರಿ ದೇವಸ್ಥಾನದ ಸುತ್ತಲಿನ ಪ್ರದೇಶದಲ್ಲಿ ಹಾಗೂ ಸಾರ್ವಜನಿಕ ರಸ್ತೆಗಳಲ್ಲಿ ಹಸು, ಕರುಗಳನ್ನು ಕಟ್ಟುವುದು, ದೇವಸ್ಥಾನದ ಪಕ್ಕದಲ್ಲಿ ಎತ್ತಿನ ಗಾಡಿಯನ್ನು ನಿಲ್ಲಿಸುವುದು ಹಾಗೂ ತಿಪ್ಪೆ ಗುಂಡಿಯನ್ನು ನಿರ್ಮಿಸಿ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡುತ್ತಿದ್ದಾರೆ. ಇದರಿಂದಾಗಿ ದೇವಸ್ಥಾನದ ಶುಚಿತ್ವವನ್ನು ಕಾಪಾಡದೇ ಇರುವುದರಿಂದ ದೇವಸ್ಥಾನಕ್ಕೆ ಬರುವ ಭಕ್ತಾದಿಗಳ ಸಂಖ್ಯೆ ಕಡಿಮೆಯಾಗಿದ್ದು ಹಾಗೂ ಸುತ್ತಮುತ್ತಲಿನ ನಿವಾಸಿಗಳು ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ. ಸಾರ್ವಜನಿಕರು ತಿರುಗಾಡಲು ಸಮಸ್ಯೆ ಉಂಟಾಗಿ ಸುಮಾರು ಮೂರ್‍ನಾಲ್ಕು ಜನರು ನಿವಾಸಿಗಳು ಬಿದ್ದು ತೊಂದರೆ ಅನುಭವಿಸುತ್ತಿದ್ದಾರೆ. ತಿಪ್ಪೆ ಗುಂಡಿಯನ್ನು ತೆರವು ಮಾಡುವ ಬಗ್ಗೆ ಕೇಳಲು ಹೋದ ಸಂದರ್ಭದಲ್ಲಿ ದೈಹಿಕವಾಗಿ ಹಲ್ಲೆ ನಡೆಸಿ ಅವಾಚ್ಯ ಶಬ್ದಗಳಿಂದ ನಿಂಧಿಸಿದ್ದಾರೆ. ಇದರಿಂದಾಗಿ ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ, ಸಾರ್ವಜನಿಕರಿಗೆ ಹಾಗೂ ಖಾಯಂ ನಿವಾಸಿಗಳಿಗೆ ತುಂಬಾ ತೊಂದರೆ ಉಂಟಾಗಿದೆ. ಈ ಸಮಸ್ಯೆಯನ್ನು ನಿಯಮಾನುಸಾರ ಬಗೆಹರಿಸುವಂತೆ ನಗರಪಾಲಿಕೆ ಆಯುಕ್ತರು, ಶಾಸಕರು, ಆರಕ್ಷಕ ನಿರೀಕ್ಷಕರು, ವಲಯ ಅಭಿವೃದ್ಧಿ ಅಧಿಕಾರಿಗಳು, ವಲಯ ಕಚೇರಿಗೆ ಲಿಖಿತ ಮನವಿಯನ್ನು ಸಹ ನೀಡಲಾಗಿದ್ದು, ಇಲ್ಲಿಯವರೆಗೂ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ. ಇದರಿಂದಾಗಿ ಭಕ್ತಾದಿಗಳು, ಸಾರ್ವಜನಿಕರು ಮತ್ತು ಖಾಯಂ ನಿವಾಸಿಗಳಾದ ನಮಗೆ ಏನು ಮಾಡಬೇಕೆಂಬುದು ತೋಚದಂತಾಗಿದೆ. ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಈ ಮೂಲಕ ಮನವಿ.

–ಆರ್.ಮೇಘನಾ, ವಿನಾಯಕನಗರ (ಪಡುವಾರಹಳ್ಳಿ) ನಿವಾಸಿಗಳು, ಮೈಸೂರು.

ಮಿತವಾಗಿ ಬಳಸಿ

ಎಲ್ಲರ ಸತತ ಪ್ರಯತ್ನದ ಫಲವಾಗಿ
ಹರಿದಿದ್ದಾಳೆ ಕಬಿನಿ
ಸೋಮನಾಥ ನಗರಕ್ಕೆ ಇಂದು
ಹೀಗೆಯೇ ಶಾಶ್ವತವಾಗಿ ಬರಲಿ
ಆಗಿರುತ್ತೇವೆ ನಾವೆಲ್ಲಾ
ಚಿರಋಣಿ ನಿನಗೆ ಎಂದೆಂದೂ
ಪಿಸುಗುಟ್ಟುತ್ತಿದ್ದಾಳೆ ಕಿವಿಯಲ್ಲಿ ಬಂದು. ಮಿತವಾಗಿ ಬಳಸಿ ನನ್ನನ್ನು
ಕಾಪಾಡುತ್ತೇನೆ ನಿಮ್ಮೆಲ್ಲರ ಆರೋಗ್ಯವನ್ನು
ನಿರಂತರವಾಗಿ ಬರುತ್ತೇನೆ
ಮುಂದಿಟ್ಟ ಹೆಜ್ಜೆ ಹಿಂದಕ್ಕೆ ಇಡುವುದಿಲ್ಲ ನನ್ನನ್ನು ನಂಬಿ ಎಂದೆಂದೂ
ಬೋರ್ಗರೆದು ಕೇಳಿಕೊಳ್ಳುತ್ತಿದ್ದಾಳೆ
ಮತ್ತೊಮ್ಮೆ ಮಿತವಾಗಿ ಬಳಸಿ ನನ್ನನ್ನು
ಕಾಪಾಡಿಕೊಳ್ಳಿ ಮುಂದಿನ ಪೀಳಿಗೆಯನ್ನು

–ರೂಪ ಎಂ., ಸೋಮನಾಥನಗರ, ದಟ್ಟಗಳ್ಳಿ, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಎಲೆ ಮರೆಯೇ ಕನ್ನಡ ಕಂಪು ಸೂಸಿದವರು...

ಕನ್ನಡಿಗರ ಸ್ವಭಾವ, ಅವರ ಚತುರತೆ, ಧೈರ್ಯ ಇತ್ಯಾದಿಗಳ ಬಗ್ಗೆ ಬಹಳ ಹಿಂದೆಯೇ ಅಂದರೆ ಸುಮಾರು 9ನೆಯ ಶತಮಾನದ ವೇಳೆಗೇ ಅಮೋಘವರ್ಷ ಅಥವಾ ಶ್ರೀವಿಜಯ ಅವರು ಬಹಳ ಆಪ್ತವಾಗಿ, ಹೆಮ್ಮೆಯಿಂದ ಹೇಳಿರುವುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. ಕನ್ನಡನಾಡಿನಲ್ಲಿ ಜನಪದದಿಂದ ಸಮೃದ್ಧವಾಗಿ ರಚಿತವಾಗಿದ್ದ ತ್ರಿಪದಿಗಳನ್ನು ನೋಡಿದಾಗ ಇದು ಮತ್ತಷ್ಟು ಮನದಟ್ಟಾಗುತ್ತದೆ. ಅಷ್ಟೇ ಏಕೆ ನಮ್ಮ–ನಿಮ್ಮ ಬದುಕಿನಲ್ಲೇ ಅದೆಷ್ಟು ಆಶು ಕವಿಗಳನ್ನು ನೋಡಿಲ್ಲ! ನಿಜಕ್ಕೂ ನಮ್ಮ ಕನ್ನಡಿಗರು, ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್.

ಈಗೊಂದು ತಲೆಮಾರಿನ ಹಿಂದೆಯಷ್ಟೆ, ತಮ್ಮನ್ನು ನಂಬಿದ ಕುಟುಂಬ ಪೋಷಣೆ ಮಾಡಲು ಹಗಲಿರುಳೂ ದುಡಿಯುತ್ತಾ ತಮ್ಮೊಳಗೆ ಹುದುಗಿದ್ದ ಕಾವ್ಯ ಪ್ರತಿಭೆಯನ್ನೂ ಗುಪ್ತವಾಗಿ ಪೋಷಿಸುತ್ತಾ ಇದ್ದಂತಹ ಹಲವಾರು ಕವಿ ಹೃದಯರ ಬಗ್ಗೆ ಕೇಳಿದಾಗ ಮನಸ್ಸು ತುಂಬಿ ಬರುತ್ತದೆ. ಇಂದಿನ ಕುಟುಂಬ ಯೋಜನೆಯ ಗಂಧವನ್ನೂ ಅರಿಯದ ಅಂದಿನವರಿಗೆ 'ಮನೆತುಂಬಾ ಮಕ್ಕಳಿರಲವ್ವ' ಎಂಬುದೇ ಸಹಜವಾಗಿತ್ತು. ಜೊತೆಗೆ ತಮ್ಮನ್ನೇ ಆಶ್ರಯಿಸಿದ ನೆಂಟರಿಷ್ಟರನ್ನೂ ಸ್ವಾಗತಿಸುವ, ಅವಶ್ಯಕತೆಯಿದ್ದ ಗೆಳೆಯರಿಗೆ ಸದಾ ಸಹಾಯಹಸ್ತ ಚಾಚುವ ಉದಾರ ಮನೋಧರ್ಮ. ಸಾಮಾನ್ಯವಾಗಿ ಕನ್ನಡ ಪಂಡಿತ ಪರೀಕ್ಷೆಯನ್ನು ದಾಟಿರುತ್ತಿದ್ದ ಇಂತಹ ಅನೇಕ ಸಹೃದಯರಲ್ಲಿ ಒಬ್ಬರೆನಿಸಿದ್ದ ಇಬ್ಬರು ಗೆಳೆಯರ ಆಪ್ತ ಕತೆ ಇದು.

ಬೆಂಗಳೂರಿನ ಮಾವಳ್ಳಿಯಲ್ಲಿ ಒಂದು ಚಿಕ್ಕ ಮನೆಯಲ್ಲಿ ತಮ್ಮ ಸಂಸಾರವನ್ನು ನಡೆಸುತ್ತಿದ್ದರು ವಿ.ರಾಮಚಂದ್ರನ್. ಐದು ಗಂಡು, ಐದು ಹೆಣ್ಣು ಮಕ್ಕಳು. ಜೊತೆಗೆ ಹೆಂಡತಿಯ ವಿಧವೆ ಅಕ್ಕನಿಗೂ ಆಶ್ರಯದಾತರಾಗಿದ್ದ ಇವರು ಸಂಸಾರವನ್ನು ತೂಗಿಸಲು ಸದಾ ಒಂದಲ್ಲ ಒಂದು ಕೆಲಸವನ್ನು ಮಾಡುತ್ತಲೇ ಇದ್ದ ಜವಾಬ್ದಾರಿಯುತ ತಂದೆ–ಗಂಡ. ಮಕ್ಕಳೊಡನೆ ಎಂದೂ ಸಲುಗೆಯ ಮಾತಿಲ್ಲ. ಓದಿದ್ದು–ಕನ್ನಡ ಪಂಡಿತ ಪರೀಕ್ಷೆ. ಜೊತೆಗೆ ಇಂಗ್ಲೀಷ್ ಜ್ಞಾನ. ಮೈಸೂರಿನಲ್ಲಿ, ಮಡಿಕೇರಿಯಲ್ಲಿ ಶಾಲೆಗಳಲ್ಲಿ ಶಿಕ್ಷಕ ವೃತ್ತಿ ಮಾಡಿ ಕೊನೆಯಲ್ಲಿ ಬೆಂಗಳೂರಿನಲ್ಲಿ ನೆಲೆಸಿದ್ದರು. ಬೆಂಗಳೂರಿನ ಕ್ರಿಶ್ಚಿಯನ್ ಶಾಲೆ 'ಮಿತ್ರಾಲಯ'ದಲ್ಲಿಯೂ ಕೆಲಸ ಮಾಡುತ್ತಿದ್ದ ಇವರ ತರಗತಿಗಳಿಗೆ ಬೇರೆ ತರಗತಿಯವರೂ ಬಂದು ಕುಳಿತು ಪಾಠ ಕೇಳುತ್ತಿದ್ದರೆಂಬುದು ನಾನು ಕೇಳಿದ ಸಂಗತಿ. ಅಷ್ಟು ಚೆನ್ನಾಗಿ ಪಾಠ ಮಾಡುತ್ತಿದ್ದರಂತೆ. ಮುಂದೆ ಅವರು ಕಾರ್ಯನಿರ್ವಹಿಸಿದುದು 'ಥಿಯಾಲಜಿಕಲ್ ಕಾಲೇಜು'. ಕ್ರಿಶ್ಚಿಯನ್ ಧರ್ಮವನ್ನು ಮುಖ್ಯವಾಗಿ ಬೋಧಿಸುತ್ತಿದ್ದ ಈ ಕಾಲೇಜಿಗೆ ವಿದೇಶೀಯರು ಓದಲು ಬರುವುದು ಸಾಮಾನ್ಯವಾಗಿತ್ತು. ಅವರಿಗೆ ಕನ್ನಡ ಕಲಿಸುವ ಜವಾಬ್ದಾರಿ ರಾಮಚಂದ್ರನ್ ಅವರದು. ಅದಕ್ಕಾಗಿ ಅವರು ಒಂದು ವಿಶೇಷ ರೀತಿಯ ಕಲಿಕಾ ಪದ್ಧತಿಯನ್ನು ತಾವೇ ರೂಪಿಸಿಕೊಂಡಿದ್ದರು. ಅದರಿಂದ ವಿದೇಶೀಯರಿಗೆ ಕನ್ನಡವನ್ನು ಬಹು ಸುಲಭವಾಗಿ ಕಲಿಸಬಹುದಿತ್ತು. ಇದರಿಂದ ಅವರ ಜನಪ್ರಿಯತೆ ಹೆಚ್ಚಾಗಿ, ಬಂದ ವಿದೇಶೀಯರೆಲ್ಲರೂ ಇವರ ಬಳಿಯೇ ಕಲಿಯಲು ಇಚ್ಛಿಸುತ್ತಿದ್ದರು. ಹೀಗೆ ತಮ್ಮದೇ ಆದ ಶೈಲಿಯಲ್ಲಿ ಕನ್ನಡದ ಕಂಪು ವಿದೇಶದಲ್ಲೂ ಪಸರಿಸಲು ಕಾರಣರಾಗಿದ್ದರು.. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದಿ ವಿಭಾಗದ ಸ್ಥಾಪಕರಲ್ಲೊಬ್ಬರಾದ ಶ್ರೀ ನಾಗಪ್ಪ ಅವರು ಇವರ ಗೆಳೆಯ. ಅವರು ರಾಮಚಂದ್ರನ್ ಅವರನ್ನು ವಿಶೇಷ ಉಪನ್ಯಾಸ ನೀಡಲು ಕರೆಸುತ್ತಿದ್ದುದೂ ಉಂಟು.

> “ ಕನ್ನಡ ನಾಡಿನಲ್ಲಿ ಜನಪದದಿಂದ ಸಮೃದ್ಧವಾಗಿ ರಚಿತವಾಗಿದ್ದ ತ್ರಿಪದಿಗಳನ್ನು ನೋಡಿದಾಗ ಇದು ಮತ್ತಷ್ಟು ಮನದಟ್ಟಾಗುತ್ತದೆ. ಅಷ್ಟೇ ಏಕೆ ನಮ್ಮ–ನಿಮ್ಮ ಬದುಕಿನಲ್ಲೇ ಅದೆಷ್ಟು ಆಶು ಕವಿಗಳನ್ನು ನೋಡಿಲ್ಲ! ನಿಜಕ್ಕೂ ನಮ್ಮ ಕನ್ನಡಿಗರು, ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್.



ನೀಲಕಂಠಂ



ರಾಮಚಂದ್ರನ್

ಎಷ್ಟೇ ದುಡಿದರೂ ಆ ದೊಡ್ಡ ಸಂಸಾರವನ್ನು ತೂಗಿಸಿಕೊಂಡು ಹೋಗುವುದು ಸುಲಭದ ಮಾತೇನೂ ಆಗಿರಲಿಲ್ಲ. ಕ್ರಿಶ್ಚಿಯನ್ನರು ಹೊರಡಿಸುತ್ತಿದ್ದ 'ಏಸುವಿನ ಸುವಾರ್ತೆ' ಎಂಬ ಪತ್ರಿಕೆಗೆ ಲೇಖನಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ತರ್ಜುಮೆ ಮಾಡಿದರೆ ಸಿಗುತ್ತಿದ್ದ ನಲವತ್ತು ರೂಪಾಯಿಗಳು ಅದನ್ನು ಅವರಿಂದ ನಿರಂತರ ಮಾಡಿಸುವಂತೆ ನೋಡಿಕೊಂಡವು. ಮನೆಯಲ್ಲಿ ಬಹುಶಃ ತಮ್ಮ ಮನದ ಅನಿಸಿಕೆಗಳನ್ನು ಹಂಚಿಕೊಳ್ಳಲು ಸರಿಯಾದ ಜೊತೆಗಾರರು ಇಲ್ಲವೆಂದೋ ಏನೋ ಗಂಭೀರವದನರಾಗಿರುತ್ತಿದ್ದ ಅವರಿಗೆ ಜಿ.ನೀಲಕಂಠಂ ಎಂಬ ಗೆಳೆಯರು ಇದ್ದರು. ಇವರಿಗೂ ಅಪಾರವಾದ ಕನ್ನಡ ಪ್ರೀತಿ. ಮಧ್ಯಮ ವರ್ಗದ ಈರ್ವರಿಗೂ ಬಡತನವೇ ನಡುವಿನ ಸೇತುವೆ. ಸರಸ್ವತಿ ಇದ್ದಲ್ಲಿ, ಲಕ್ಷ್ಮಿ ಇರಲಾರಳಲ್ಲ! ಚನ್ನಪಟ್ಟಣದಲ್ಲಿ ಪೋಸ್ಟ್ ಮಾಸ್ಟರ್ ಆಗಿ ಕೆಲವು ದಿನ ಕಾರ್ಯನಿರ್ವಹಿಸಿದ ನೀಲಕಂಠಂ ಅವರು ಅದನ್ನು ತ್ಯಜಿಸಿ, ಬಸವನಗುಡಿಯ ಮಹಿಳಾ ಸೇವಾ ಸಮಾಜ ಎಂಬ ಪ್ರೈಮರಿ ಶಾಲೆಯಲ್ಲಿ ಕನ್ನಡ ಉಪಾಧ್ಯಾಯರಾಗಿದ್ದರು. ಅವರನ್ನು ಥಿಯಾಲಾಜಿಕಲ್ ಕಾಲೇಜಿಗೆ ಪರಿಚಯಿಸಿ, ಅಲ್ಲಿ ನೌಕರಿ ಮಾಡುವಂತೆ ಮಾಡಿದರು ರಾಮಚಂದ್ರನ್. ಐದು ಮಕ್ಕಳ ತಂದೆಯಾಗಿದ್ದ ನೀಲಕಂಠಂ ಅವರೊಳಗೆ ಒಬ್ಬ ಗುಪ್ತ ಕವಿ ಅಡಗಿದ್ದ. ರಾಜಾಜಿನಗರ, ಜಯನಗರ, ಕಂಟೋನ್ಮೆಂಟಿಗೆ ಕಾಲುನಡಿಗೆಯಲ್ಲೇ ಓಡಾಡುತ್ತಿದ್ದ ಗೆಳೆಯನಿಗೆ ಒಂದು ಸೈಕಲನ್ನೂ ಕೊಡಿಸಿದ ಉದಾರ ಹೃದಯಿ ರಾಮಚಂದ್ರನ್.

ರಾತ್ರಿ ಎಚ್ಚರವಾದಾಗ ಉಕ್ಕಿ ಬರುತ್ತಿದ್ದ ಕವಿತಾ ಬುಗ್ಗೆ ಹೊರ ಹಾಕುತ್ತಿದ್ದರು ನೀಲಕಂಠಂ ಅವರು. ಹಾಗೆ ಬರೆಯುತ್ತಿದ್ದ ಕವನಗಳು ನೋಡ ನೋಡುತ್ತಿದ್ದಂತೆ ಹೆಚ್ಚಿನ ಸಂಖ್ಯೆಯದಾಯಿತು. ಇಂಗ್ಲೀಷ್ ಸಾಹಿತ್ಯವನ್ನೂ ಚೆನ್ನಾಗಿಯೇ ಓದಿದ್ದ ಅವರ ಕವಿಮನವು ಕೆಲವು ಇಂಗ್ಲೀಷ್ ನೀಳ್ಗವನಗಳ ಅನುವಾದ ಮಾಡಲು ಪ್ರೇರೇಪಿಸಿತ್ತು. ಜಾನ್ ಕೀಟ್ಸನ 'ದಿ ಪಾಟ್ ಆಫ್ ಬೇಸಿಲ್', ರುಸೆಲ್ ಲೊವೆಲನ 'ದಿ ಫೌಂಟನ್', ಹೆನ್ರಿ ಕೇರಿ ಬರೆದ 'ಸ್ಯಾಲಿ ಇನ್ ಅವರ್ ಆಲಿ' ಇವುಗಳ ಸೊಗಸಾದ ಭಾವಾನುವಾದ ಮಾಡಿದರು. ಷೇಕ್ಸ್‌ಪಿಯರ್, ಮಿಲ್ಟನ್, ಕೀಟ್ಸ್, ಅಲೆಕ್ಸಾಂಡರ್ ಪೋಪ್ ಮುಂತಾದವರ ಕಾವ್ಯದ ರಸವತ್ತಾದ ಘಟ್ಟಗಳನ್ನು ತಮ್ಮ ಮಕ್ಕಳೊಡನೆ ಹಂಚಿಕೊಂಡು ಸಂಭ್ರಮಿಸುವ ಸಹೃದಯಿಯಾಗಿದ್ದರು ಆತ.ಇಂತಹ ಅದೆಷ್ಟು ಅಜ್ಞಾತ ಕವಿಗಳು ವನಸುಮಗಳಂತೆ ಮೌನದಿಂದ ಬಿರಿದು ನಿಜ ಸೌರಭವನ್ನು ಸೂಸಿ, ಎಲೆಯ ಮರೆಯಲ್ಲೇ ಇದ್ದು ಅಭಿಮಾನವನ್ನು ತೊರೆದು ಕೃತಕೃತ್ಯೆಯನ್ನು ಪಡೆದು ತಮ್ಮ ಬದುಕನ್ನು ಸವೆಸಿದ್ದಾರೋ ತಿಳಿಯದು. ಅಂತಹವರಿಗೆಲ್ಲ ನಮ್ಮ ಒಂದು ದೊಡ್ಡ ನಮನ ಎಂದಷ್ಟೇ ಹೇಳಲು ಸಾಧ್ಯ. ಅರವತ್ತರ ದಶಕದಲ್ಲಿಯೇ ಅವರ ಕೆಲವು ಕವನಗಳು 'ಪ್ರಬುದ್ಧ ಕರ್ನಾಟಕ'ದಲ್ಲಿ ಪ್ರಕಟಗೊಂಡಿದ್ದುವು ಎಂಬುದು ಅಗ್ಗಳಿಕೆಯೇ ಸರಿ. ತಾವು ಕಷ್ಟಪಟ್ಟು ಉಳಿಸಿದ ಅಲ್ಪಸ್ವಲ್ಪ ದುಡ್ಡನ್ನು ಶೇಖರಿಸಿ ನೀಲಕಂಠಂ ಅವರು ತಮ್ಮ ಕವನ ಸಂಕಲನ 'ಹಂಬಲ ಹಣತೆ'ಯನ್ನು ಪ್ರಕಟಿಸಿದರು. ಇತ್ತೀಚೆಗೆ ಮರು ಪ್ರಕಟಣೆಯ ಭಾಗ್ಯವನ್ನು ಕಂಡಿರುವ ಈ ಸಂಕಲನದ ಪದ್ಯಗಳನ್ನು ಓದುವುದೇ ಒಂದು ಸೊಗಸಾದ ಅನುಭವ. ಬದುಕಿನ ಬವಣೆಗಳ ನಡುವೆಯೂ ಅವರಲ್ಲಿ ಉಳಿದಿದ್ದ ಆಶಾ ಮನೋಭಾವ ಮತ್ತು ಆ ಭಗವಂತನಲ್ಲಿ ಅವರಿಗೆ ಇದ್ದ ಅಚಲ ನಿಷ್ಠೆಯು ಅವರ ಕವನಗಳಲ್ಲಿ ಎದ್ದು ಕಾಣುತ್ತದೆ. ಕನ್ನಡದಲ್ಲಿ ಅವರಿಗೆ ಇದ್ದ ಸುಭಗತೆ, ಸುಲಲಿತವಾಗಿ ಒದಗಿ ಬಂದಿರುವ ಶಬ್ದ ಬಾಹುಳ್ಯ ಓದುಗರಿಗೆ ಆಪ್ತ ಭಾವವನ್ನು ತಂದು ಕೊಡುವ ಸೊಗಸಾದ ಶೈಲಿಯನ್ನು ಮರೆಯುವಂತೆಯೇ ಇಲ್ಲ.

ಭರದಿ ಏರಿಸಿ ಸಿರಿಯ ಕರುಣಿಸಿ
ಮೆರೆಸಿ ಜಾರಿಸಿ ಕೊರಗ ಕೆರಳಿಸಿ
ಅರಿತು ನಡೆವೊಡೆ ಹರುಷದೊಳಿರಿಸಿ
ಪೊರೆವ ಸಮತೆಯನು ಕಲಿಸಿ

ಎಷ್ಟು ಸರಳವಾಗಿ, ಭಗವಂತನು ನಮ್ಮ ಬದುಕಿನಲ್ಲಿ ಸುಖದುಃಖಗಳನ್ನು ಸಮನಾಗಿ ಸ್ವೀಕರಿಸುವ ಮನೋಭಾವವನ್ನು ಕಲಿಸುವ ಪರಿಯನ್ನು ಕೆಲವೇ ಶಬ್ದಗಳಲ್ಲಿ ಹಿಡಿದಿಟ್ಟಿದ್ದಾರೆ! ಮೂರು–ನಾಲ್ಕು ಮಾತ್ರೆಗಳ ಲಯ ಕಿವಿಗೆ ತಾಗುತ್ತದೆ ಇಲ್ಲಿ. ಇಂತಹ ಅದೆಷ್ಟು ಕವಿಗಳನ್ನು ನಾವು ಗುರುತಿಸದೆಯೇ ಹೋಗಿದ್ದೇವೆಯೋ?

ಈ ಗೆಳೆಯರೀರ್ವರ ನಡುವೆ ಅದೆಷ್ಟು ಸಾಹಿತ್ಯದ ಸರಸ ಸಂಭಾಷಣೆಗಳು ನಡೆದಿದ್ದುವೋ ಏನೋ. ತಮ್ಮ ಸಾಧನೆಗಳ ಯಾವ ತಮಟೆಯನ್ನೂ ಹೊಡೆಯದೆ ಇದ್ದೂ ಇಲ್ಲದಂತೆ ಅವರೀರ್ವರ ಬದುಕು ಮರೆಗೆ ಸರಿಯಿತು. 1975–76ರಲ್ಲಿ ವಿ.ರಾಮಚಂದ್ರನ್ ಅವರು ತೀರಿಕೊಂಡರೆ, ನೀಲಕಂಠಂ ಅವರು 1996ರಲ್ಲಿ ನಿಧನರಾದರು.

ರಾಜ್ಯಪಾಲ ಗೆಹ್ಲೋಟ್, ಆರೋಗ್ಯ ಸಚಿವರಿಂದ ಯೋಗ ಪ್ರದರ್ಶನ

ಬೆಂಗಳೂರು, ಜೂ.21–11ನೇ ಅಂತರ ರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಶನಿವಾರ ಬೆಳಿಗ್ಗೆ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಆರೋಗ್ಯ ಸಚಿವ ದಿನೇಶ್ ಗುಂಡೂ ರಾವ್ ಸೇರಿದಂತೆ ಹಲವರು ಇಲ್ಲಿನ ವಿಧಾನಸೌಧದ ಮುಂದೆ ಯೋಗ ಪ್ರದರ್ಶನ ಮಾಡಿದರು.

ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗ' ವಿಷಯದ ಮೇಲೆ ಕೇಂದ್ರದ ಆಯುಷ್ ಸಚಿವಾಲಯದ 'ಯೋಗ ಸಂಗಮ' ಉಪಕ್ರಮದ ಅಡಿಯಲ್ಲಿ ಸಾಮೂಹಿಕ ಯೋಗ ಪ್ರದರ್ಶನ ನಡೆಯಿತು.

ರಾಜ್ಯಪಾಲರು, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮತ್ತು ಇತರ ಗಣ್ಯರು ಈ ಕಾರ್ಯಕ್ರಮದಲ್ಲಿ ವಿವಿಧ ಯೋಗ ಆಸನಗಳನ್ನು ಪ್ರದರ್ಶಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ದಿನೇಶ್ ಗುಂಡೂರಾವ್, ಯೋಗವನ್ನು ಹೆಚ್ಚಿನ ಜನರಿಗೆ ತಲುಪುವಂತೆ ಮಾಡಲು ರಾಜ್ಯಾದ್ಯಂತ ಸರ್ಕಾರಿ ಆಸ್ಪತ್ರೆಗಳಲ್ಲಿ 'ಯೋಗ ಮಂದಿರಗಳನ್ನು (ಕೇಂದ್ರಗಳು)' ಸ್ಥಾಪಿಸಲಾಗುವುದು. ಜಾಗತಿಕ ಮನ್ನಣೆ ಪಡೆದಿರುವ ಯೋಗವನ್ನು ನಾವು ಹೆಚ್ಚಿನ ಜನರಿಗೆ ಪರಿಚಯಿಸಬೇಕು. ರಾಜ್ಯ ಸರ್ಕಾರ ಈ ದೆಸೆಯಲ್ಲಿ ವಿವಿಧ ಉಪಕ್ರಮಗಳನ್ನು ಜಾರಿಗೆ ತರುತ್ತಿದೆ. ರಾಜ್ಯಾದ್ಯಂತ ಎಲ್ಲ ಜಿಲ್ಲಾಸ್ಪತ್ರೆಗಳು, ತಾಲೂಕು ಆಸ್ಪತ್ರೆಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಯೋಗ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು ಎಂದರು.

ಮೈಸೂರು ಜಿಲ್ಲೆಯನ್ನು 'ಯೋಗ ಜಿಲ್ಲೆ' ಎಂದು ಘೋಷಿಸಲು ಈಗಾಗಲೇ ಯೋಜನೆಗಳು ನಡೆಯುತ್ತಿದ್ದು, ಈ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮೈಸೂರಿನ ಪ್ರತಿ ಮನೆಯಲ್ಲಿ ಕನಿಷ್ಠ ಒಬ್ಬ ವ್ಯಕ್ತಿ ಯೋಗ ಮಾಡುವಂತೆ ನೋಡಿಕೊಳ್ಳುವುದು ಗುರಿಯಾಗಿದೆ. ದೇಶದಲ್ಲೇ ಮೊದಲ ಬಾರಿಗೆ, ಒಂದು ರಾಜ್ಯವು ಇಡೀ ಜಿಲ್ಲೆಯನ್ನು ಯೋಗಕ್ಕೆ ಮೀಸಲಿಡುವತ್ತ ಸಾಗುತ್ತಿದೆ. ಸರ್ಕಾರವು ಸಾಂಪ್ರದಾಯಿಕ ಅಷ್ಟಾಂಗ ಯೋಗದ ಮೇಲೆ ವಿಶೇಷ ಒತ್ತು ನೀಡಲಿದೆ ಎಂದರು.

ರಾಜ್ಯದ ಆಯುಷ್ ಇಲಾಖೆಯು ಹಲವಾರು ಸಂಸ್ಥೆಗಳು, ಯೋಗ ಗುಂಪುಗಳು ಮತ್ತು ನಾಗರಿಕ ಸಮಾಜ ಗುಂಪುಗಳ ಸಹಯೋಗದೊಂದಿಗೆ ಆಯೋಜಿಸಿದ್ದ ಈ ಕಾರ್ಯಕ್ರಮವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಉದ್ಘಾಟಿಸಿದರು.

ಅಧಿಕಾರಿಗಳ ಪ್ರಕಾರ, ವಿಧಾನಸೌಧದ ಮೆಟ್ಟಿಲುಗಳ ಮೇಲೆ 5,000ಕ್ಕೂ ಹೆಚ್ಚು ಜನರು ಯೋಗಾಭ್ಯಾಸ ಮಾಡಿದರು.



ರಾಜ್ಯಪಾಲ ಥಾವರಚಂದ್ ಗೆಹ್ಲೋಟ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೇರಿದಂತೆ ಹಲವರು ಬೆಂಗಳೂರಿನ ವಿಧಾನಸೌಧದ ಮುಂಭಾಗ ಶನಿವಾರ ಯೋಗ ಪ್ರದರ್ಶನ ಮಾಡಿದರು.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಪಕ್ಷದ ಸದಸ್ಯರೊಂದಿಗೆ ಯೋಗ ಪ್ರದರ್ಶಿಸಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ರಾಜ್ಯಪಾಲರು, ನಾಗರಿಕರು ತಮ್ಮ ದೈನಂದಿನ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಳ್ಳುವಂತೆ ಮತ್ತು ಆರೋಗ್ಯಕರ, ಹೆಚ್ಚು ಶಾಂತಿಯುತ ಮತ್ತು ಸಮತೋಲಿತ ಜಗತ್ತನ್ನು ನಿರ್ಮಿಸಲು ಸಾಮೂಹಿಕವಾಗಿ ಶ್ರಮಿಸುವಂತೆ ಒತ್ತಾಯಿಸಿದರು.

ಯೋಗಾಭ್ಯಾಸವು ಸುಸ್ಥಿರ ಅಭಿವೃದ್ಧಿ ಮತ್ತು ನಮ್ಮ ಗ್ರಹದ ಸಂರಕ್ಷಣೆಗೆ ಅಗತ್ಯವಾದ ಅಹಿಂಸೆ, ಕರುಣೆ ಮತ್ತು ಶಾಂತಿಯ ಮೌಲ್ಯಗಳ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ. 'ಒಂದು ಭೂಮಿ, ಒಂದು ಆರೋಗ್ಯ' ಎಂಬ ದೃಷ್ಟಿಕೋನವನ್ನು ಸಾಕಾರಗೊಳಿಸಲು ಯೋಗವನ್ನು ಅಳವಡಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದು ಅವರು ಹೇಳಿದರು.

ಯೋಗವು ಭಾರತದ ಪ್ರಾಚೀನ ಸಂಪ್ರದಾಯದ ಅಮೂಲ್ಯ ಕೊಡುಗೆಯಾಗಿದೆ. ಇದು ದೇಹ ಮತ್ತು ಆತ್ಮ, ಚಿಂತನೆ ಮತ್ತು ಕ್ರಿಯೆ, ಶಿಸ್ತು ಮತ್ತು ನೆರವೇರಿಕೆಯ ನಡುವಿನ ಸೇತುವೆಯಾಗಿದೆ. ಇದು ಸ್ವಯಂ ಸಂಯಮ, ಸಮತೋಲನ ಮತ್ತು ಪ್ರಕೃತಿಯ ಬಗ್ಗೆ ಸೂಕ್ಷ್ಮತೆಯನ್ನು ಬೆಳೆಸುತ್ತದೆ. ಯೋಗವು ದೇಹ, ಮನಸ್ಸು ಮತ್ತು ಭಾವನೆಗಳನ್ನು ಸಮನ್ವಯಗೊಳಿಸುತ್ತದೆ. ಇದು ನಮ್ಮ ಋಷಿಮುನಿಗಳ ಕಾಲಾತೀತ ಕೊಡುಗೆಯಾಗಿದೆ ಮತ್ತು ಇಂದು ಜಾಗತಿಕ ಯೋಗಕ್ಷೇಮಕ್ಕಾಗಿ ಭರವಸೆಯ ದಾರಿದೀಪವಾಗಿ ನಿಂತಿದೆ. ಜಗತ್ತು ಅದರ ಪರಿವರ್ತನಾ ಶಕ್ತಿಯನ್ನು ಒಪ್ಪಿಕೊಂಡಿದೆ ಮತ್ತು ಸ್ವೀಕರಿಸಿದೆ ಎಂದು ಹೇಳಿದರು.

ಜೂ.21ರಂದು ವರ್ಷದ ಸುದೀರ್ಘ ದಿನದಂದು ಜಗತ್ತು ಸೂರ್ಯೋದಯವನ್ನು ಸ್ವಾಗತಿಸುತ್ತಿದ್ದಂತೆ, ನಾವು ಯೋಗದ ಮೂಲಕ ನಮ್ಮೊಳಗಿನ ಆಂತರಿಕ ಬೆಳಕನ್ನು ಜಾಗೃತಗೊಳಿಸುತ್ತೇವೆ. ಇದು ಒತ್ತಡದಿಂದ ಸಮತೋಲನಕ್ಕೆ, ಆತಂಕದಿಂದ ಶಾಂತಿಗೆ ಮತ್ತು ಅಸ್ವಸ್ಥತೆಯಿಂದ ಸಮಗ್ರ ಆರೋಗ್ಯಕ್ಕೆ ಪರಿವರ್ತನೆಗೊಳ್ಳಲು ನಮಗೆ ಸಹಾಯ ಮಾಡುತ್ತದೆ ಎಂದರು.

ಬಿಜೆಪಿ ಕಚೇರಿಯಲ್ಲಿ ಯೋಗ: ರಾಜ್ಯ ಬಿಜೆಪಿ ಮುಖ್ಯಸ್ಥ ಬಿ.ವೈ.ವಿಜಯೇಂದ್ರ ಬಿಜೆಪಿ ಕಚೇರಿಯಲ್ಲಿ ಪಕ್ಷದ ಸದಸ್ಯರೊಂದಿಗೆ ಯೋಗ ಪ್ರದರ್ಶನ ನೀಡಿದರು. ಮೈಸೂರು ಅರಮನೆ ಮೈದಾನದಲ್ಲಿ ನಡೆದ ಯೋಗ ಮಹಾಕುಂಭದಲ್ಲಿಯೂ ಹೆಚ್ಚಿನ ಸಂಖ್ಯೆಯ ಜನರು ಭಾಗವಹಿಸಿದ್ದರು.

ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ರಾಜ್ಯದಾದ್ಯಂತ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಸಹ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಅಧಿಕೃತ ಹೇಳಿಕೆಯ ಪ್ರಕಾರ, ರಾಜ್ಯದಾದ್ಯಂತ 10,000 ಸ್ಥಳಗಳಲ್ಲಿ 5 ಲಕ್ಷಕ್ಕೂ ಹೆಚ್ಚು ಜನರು ಯೋಗಾಭ್ಯಾಸ ನಡೆಸಿದ್ದಾರೆ. ಈ ಕಾರ್ಯಕ್ರಮದ ಭಾಗವಾಗಿ 45 ನಿಮಿಷಗಳ ಯೋಗ ಪ್ರದರ್ಶನವನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಆಯುಷ್ ಇಲಾಖೆಯು 'ಯೋಗ ಪಾರ್ಕ್', 'ಯೋಗ ಧನುಷ್', 'ಗ್ರೀನ್ ಯೋಗ', 'ಯೋಗ ಮಹಾಕುಂಭ', 'ಯೋಗ ಸಂಯೋಗ' ಮತ್ತು 'ಯೋಗ ಅನ್‌ಪ್ಲಗ್ಡ್' ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿತ್ತು. 'ಗ್ರೀನ್ ಯೋಗ' ಕಾರ್ಯಕ್ರಮದಡಿಯಲ್ಲಿ 1 ಲಕ್ಷ ಸಸಿಗಳನ್ನು ನೆಡಲಾಗುವುದು. 'ಯೋಗ ಧನುಷ್' ಕಾರ್ಯಕ್ರಮದ ಮೂಲಕ, ರಾಜ್ಯಾದ್ಯಂತ 5 ಲಕ್ಷ ಜನರಿಗೆ ಯೋಗ ಶಿಷ್ಟಾಚಾರವನ್ನು ಕಲಿಸಲಾಗಿದೆ ಮತ್ತು 5,000 ಶಾಲೆಗಳಲ್ಲಿ ಯೋಗ ಶಿಷ್ಟಾಚಾರವನ್ನು ಜಾರಿಗೆ ತರಲು ವ್ಯವಸ್ಥೆ ಮಾಡಲಾಗಿದೆ ಎಂದು ಅದು ತಿಳಿಸಿದೆ.

ರಕ್ಷಣಾ ಸಿಬ್ಬಂದಿ ಮತ್ತು ಅವರ ಕುಟುಂಬಗಳು ರಾಜ್ಯಾದ್ಯಂತ ನಡೆದ ಯೋಗ ದಿನಾಚರಣೆಯಲ್ಲಿ ಭಾಗವಹಿಸಿದ್ದರು. ಮರಾಠಾ ಲೈಟ್ ಇನ್‌ಫೆಂಟ್ರಿ ರೆಜಿಮೆಂಟಲ್ ಸೆಂಟರ್ ಬೆಳಗಾವಿಯಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಿದೆ. 460ಕ್ಕೂ ಹೆಚ್ಚು ಐಎಎಫ್ ಸಿಬ್ಬಂದಿ ಮತ್ತು ಜಾಲಹಳ್ಳಿ ವಾಯುಪಡೆ ನಿಲ್ದಾಣದ ಕುಟುಂಬಗಳು ಅಂತರರಾಷ್ಟ್ರೀಯ ಯೋಗ ದಿನದಂದು ಭಾಗವಹಿಸಿದ್ದವು ಎಂದು ರಕ್ಷಣಾ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಭಾನುವಾರ 22 ಜೂನ್ 2025

ಇದೇ ಮೊದಲೇನಲ್ಲ, ಈ ಹಿಂದೆಯೂ 10, 11 ದಿನ ದಸರಾ ಉತ್ಸವ ನಡೆದಿದೆ

ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸ್ಪಷ್ಟನೆ



ಮೈಸೂರು, ಜೂ.21(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವವನ್ನು ಈ ಹಿಂದೆಯೂ 11 ದಿನ ಆಚರಿಸಲಾಗಿದೆ ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಸ್ಪಷ್ಟಪಡಿಸಿದ್ದಾರೆ.

ಈ ಬಾರಿ ಎರಡು ದಿನ ಪಂಚಮಿ ತಿಥಿಯಾದ್ದರಿಂದ ಮೊದಲ ಬಾರಿಗೆ 11 ದಿನ ದಸರಾ ಆಚರಿಸಲಾಗುವುದು ಎಂದು ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿದ್ದಕ್ಕೆ ಪತ್ರಿಕಾ ಹೇಳಿಕೆ ಮೂಲಕ ಅವರು, ದಸರಾ ಹಬ್ಬವನ್ನು ಸಾಮಾನ್ಯವಾಗಿ ಒಂಬತ್ತು ದಿನಗಳವರೆಗೆ ಆಚರಿಸಲಾಗುತ್ತದೆ ಯಾದರೂ, ಅಷ್ಟರಾತ್ರಿ–ಒಂಬತ್ತು ದಿನಗಳು, ನವರಾತ್ರಿ–10 ದಿನಗಳು ಹಾಗೂ ದಶರಾತ್ರಿ–11 ದಿನಗಳ ಕಾಲ ನಡೆಸಿರುವ ಹಲವಾರು ನಿದರ್ಶನಗಳಿವೆ ಎಂದು ತಿಳಿಸಿದ್ದಾರೆ.

ಅರಮನೆಯು ಲೂನಾರ್ ಕ್ಯಾಲೆಂಡರ್(ಪಂಚಾಂಗ) ಅನ್ನು ಅನುಸರಿಸುತ್ತದೆ. ದಸರಾ ಸೇರಿದಂತೆ ಎಲ್ಲಾ ಹಬ್ಬಗಳನ್ನು ಈ ಕ್ಯಾಲೆಂಡರ್ ಆಧಾರದಲ್ಲಿ ಆಚರಿಸಲಾಗುತ್ತದೆ. ಸೂರ್ಯ ಮತ್ತು ಚಂದ್ರನ ಚಲನೆಯಲ್ಲಿನ ವ್ಯತ್ಯಾಸದನ್ವಯ ಲೂನಾರ್ ಪಂಚಾಂಗದಲ್ಲಿ ದಿನಗಳನ್ನು ಗುರುತಿಸಲಾಗುತ್ತದೆ. ವಾಸ್ತವವಾಗಿ 1920, 1929, 1953, 1962, 1980, 1990, 1998, 2000, 2015 ಮತ್ತು 2016ನೇ ವರ್ಷಗಳಲ್ಲಿ ಲೂನಾರ್ ಕ್ಯಾಲೆಂಡರ್ ಆಧರಿಸಿದ ಸಾಂಪ್ರದಾಯಿಕವಾಗಿ 11 ದಿನ ದಸರಾ ಆಚರಿಸಲಾಗಿದೆ ಎಂದು ವಿವರಿಸಿದ್ದಾರೆ.

ನಿರಂತರ ಉಕ್ಕಿ ಹರಿಯುತ್ತಿರುವ ಮ್ಯಾನ್‌ಹೋಲ್; ವೃದ್ಧೆ ಹಿಡಿಶಾಪ



ಮ್ಯಾನ್‌ಹೋಲ್ ಉಕ್ಕಿ ಹರಿಯುತ್ತಿರುವುದು

ಮೈಸೂರು,ಜೂ.21(ಎಸ್‌ಪಿಎನ್)– ಕಳೆದ ಮೂರು ತಿಂಗಳಿಂದ ಮೈಸೂರು–ಹುಣಸೂರು ರಸ್ತೆ ಪಡುವಾರಹಳ್ಳಿ ಸಿಗ್ನಲ್ ಬಳಿ ಮ್ಯಾನ್‌ಹೋಲ್ ಉಕ್ಕಿ ಹರಿಯುತ್ತಿರುವುದನ್ನು ಎಲ್ಲಾ ಅಧಿಕಾರಿಗಳು, ಜನಪ್ರತಿನಿಧಿಗಳು ನಿಂತು ನೋಡಿಕೊಂಡು ಹೋಗುತ್ತಾರೆ. ಆದರೆ, ಒಬ್ಬರೂ ಸರಿಪಡಿಸುತ್ತಿಲ್ಲ ಎಂದು ಇಲ್ಲಿನ ನಿವಾಸಿಗಳು ಛೀಮಾರಿ ಹಾಕಿದ್ದಾರೆ.

ಮೈಸೂರು ನಗರಪಾಲಿಕೆ ಆಯುಕ್ತರು, ಈ ಭಾಗದ ಶಾಸಕರಾದ ಕೆ.ಹರೀಶ್‌ಗೌಡ, ಜಯಲಕ್ಷ್ಮೀಪುರಂ ಠಾಣೆ ಪೊಲೀಸರು, ಪೌರಕಾರ್ಮಿಕರು ಬಂದು ನೋಡಿಕೊಂಡು ಹೋಗುತ್ತಾರೆ ವಿನಃ, ಈ ಮ್ಯಾನ್‌ಹೋಲ್ ಸರಿಪಡಿಸುತ್ತಿಲ್ಲ. ಈ ಸಮಸ್ಯೆ ಬಗ್ಗೆ ಕೇಳಿದರೆ ನಾಳೆ ಬಂದು ಸರಿಪಡಿಸುತ್ತೇವೆ ಎಂದು ಹೇಳಿ ಹೋಗುತ್ತಾರೆ. ನಂತರ ಯಾರೂ ಬರುವುದಿಲ್ಲ. ಮಲತ್ಯಾಜ್ಯ ನೀರು ರಸ್ತೆಯಲ್ಲಿ ಹರಿದು ಪಾದಚಾರಿಗಳು, ವಾಹನ ಸವಾರರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದ್ದರೂ ಯಾರೂ ತಲೆಕೆಡಿಸಿಕೊಳ್ಳುತ್ತಿಲ್ಲ ಎನ್ನುತ್ತಾರೆ 80 ವರ್ಷದ ಅಜ್ಜಿ.

ಮಲತ್ಯಾಜ್ಯ ದರ್ಶನ: ನಿತ್ಯ ಬೆಳಗ್ಗೆ 6ರಿಂದ 11 ಗಂಟೆಯವರೆಗೆ ಮ್ಯಾನ್‌ಹೋಲ್‌ನಲ್ಲಿ ಎಲ್ಲರ ಮನೆಯ ಮಲತ್ಯಾಜ್ಯ ಉಕ್ಕಿ ರಸ್ತೆಗೆ ಹರಿಯುತ್ತದೆ. ಆ ವೇಳೆ ಈ ಜಾಗದಲ್ಲಿ ಓಡಾಡಲು ಸಾಧ್ಯವಾಗುವುದಿಲ್ಲ. ಈ ದುರ್ವಾಸನೆಯಿಂದ ಸುತ್ತಮುತ್ತಲಿನ ನಿವಾಸಿಗಳ ಮನೆಬಿಟ್ಟು ಹೊರಬರಲು ಸಾಧ್ಯವಾಗುವುದಿಲ್ಲ. ಕೆಲವರ ಆರೋಗ್ಯದಲ್ಲಿ ಏರುಪೇರಾಗುತ್ತಿದೆ. ಕೆಲವರಿಗೆ ಚಳಿಜ್ವರ, ಕಾಲರಾದಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿದ್ದಾರೆ. ಇವೆಲ್ಲಾ ಯಾರ ಬಳಿ ಹೇಳಿದರೂ ಪ್ರಯೋಜನವಿಲ್ಲ ಎಂದು ಬೇಸರ ಹೊರಹಾಕಿದರು.

ಪಡುವಾರಹಳ್ಳಿ ಸಿಗ್ನಲ್ ಬಿಟ್ಟ ತಕ್ಷಣ, ವಾಹನಗಳು ಮಲತ್ಯಾಜ್ಯ ನೀರಿನ ಮೇಲೆ ಓಡಿಸುವುದರಿಂದ ಆ ನೀರು ಪಾದಚಾರಿಗಳಿಗೆ ಸಿಡಿದು ಬಟ್ಟೆಗಳೆಲ್ಲಾ ಗಲೀಜು ಆಗಿರುವ ಪ್ರಕರಣಗಳಿವೆ. ಈ ಸಂಬಂಧ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರು' ಪತ್ರಿಕೆಯ ಜೂ. 8 ಮತ್ತು 17 ರಂದು ವಿಸ್ತೃತ ವರದಿಯಾಗಿತ್ತು. ಅಲ್ಲದೆ, 112 ಪೊಲೀಸ್ ಕಾರು ದಿನನಿತ್ಯ ಬೆಳಗ್ಗೆ 8ರಿಂದ 10 ಗಂಟೆ, ಸಂಜೆ 5ರಿಂದ 7ರವರೆಗೆ ಓರ್ವ ಎಎಸ್‌ಐ ಸೇರಿದಂತೆ ಇಬ್ಬರು ಪೊಲೀಸರು ಇಲ್ಲಿ ನಿಂತು ಈ ಸ್ಥಳದಲ್ಲಿ ಯಾರಾದರೂ ಗುಂಪು ಸೇರುತ್ತಾರೋ ಎಂದು ಕಾವಲು ಕಾಯುತ್ತ ನಿಲ್ಲುತ್ತಾರೆ.

ಆದರೂ ಕಣ್ಣು, ಕಿವಿ ಇಲ್ಲದ ಅಧಿಕಾರಿಗಳು ಈ ಸಮಸ್ಯೆ ಸರಿಪಡಿಸುವ ಗೋಜಿಗೆ ಹೋಗುತ್ತಿಲ್ಲ. ಈ ಸರ್ಕಾರದ ಬಂದ ಮೇಲೆ ನಮ್ಮ ಬದುಕು ಇಷ್ಟೇ ಅಂತ ಹೇಳಿ ಅಜ್ಜಿ ಮೂಕ ಪ್ರೇಕ್ಷಕರಾದರು.

ಲಾಭದ ಆಸೆಗೆ ಬಿದ್ದು 22 ಲಕ್ಷ ಕಳೆದುಕೊಂಡ ನಿವೃತ್ತ ಅಧಿಕಾರಿ!

ಮೈಸೂರು, ಜೂ.21(ಎಸ್‌ಬಿಡಿ)– ಮೈಸೂರಿನ ನಿವೃತ್ತ ಅಧಿಕಾರಿಯೊಬ್ಬರು ಆನ್‌ಲೈನ್ ಮೂಲಕ ನಕಲಿ ಕಂಪನಿಗೆ ಹೂಡಿಕೆ ಮಾಡಿ, 22 ಲಕ್ಷಕ್ಕೂ ಹೆಚ್ಚು ಹಣ ಕಳೆದುಕೊಂಡಿದ್ದಾರೆ.

ಕೃಷ್ಣಮೂರ್ತಿಪುರಂನ 68 ವರ್ಷದ ವ್ಯಕ್ತಿ, ಫೇಸ್‌ಬುಕ್‌ನಲ್ಲಿ ಟ್ರೇಡಿಂಗ್ ಕುರಿತ ಜಾಹೀರಾತು ನೋಡಿದ್ದಾರೆ ಬಳಿಕ ಅದರಲ್ಲಿದ್ದ ಮೊಬೈಲ್ ಸಂಖ್ಯೆಗೆ ಕರೆ ಮಾಡಿದಾಗ, ಅವರಿಗೆ ಹೂಡಿಕೆ ಬಗ್ಗೆ ವಿವರಿಸಲಾಗಿದೆ. ನಿಮಗೆ ಫಿನ್‌ಬ್ರಿಡ್ಜ್ ಫೈನಾನ್ಸ್ ಸಂಸ್ಥೆಯ ಮ್ಯಾನೇಜರ್ ಆದರ್ಶ್‌ರೆಡ್ಡಿ ಕರೆ ಮಾಡಿ, ಮತ್ತಷ್ಟು ವಿವರಣೆ ನೀಡುತ್ತಾರೆ ಎಂದಿದ್ದಾನೆ.

ಕೆಲ ಹೊತ್ತಿನಲ್ಲಿ ವಾಟ್ಸಾಪ್ ಕಾಲ್ ಮೂಲಕ ಸಂಪರ್ಕಿಸಿದ ವ್ಯಕ್ತಿ ತನ್ನನ್ನು ಆದರ್ಶ್ ರೆಡ್ಡಿ ಎಂದು ಪರಿಚಯಿಸಿಕೊಂಡು ಆಪ್ ಒಂದನ್ನು ಡೌನ್‌ಲೋಡ್ ಮಾಡಿಸಿದ್ದಾನೆ ಬಳಿಕ ಆತ ತಿಳಿಸಿದ ಬ್ಯಾಂಕ್ ಖಾತೆಗೆ ಹಂತ ಹಂತವಾಗಿ 22.40 ಲಕ್ಷ ರೂ. ವರ್ಗಾವಣೆ ಮಾಡಿದ್ದಾರೆ. ನಂತರ ವಂಚಕರು ಸಂಪರ್ಕ ಕಳೆದುಕೊಂಡಿದ್ದಾರೆ. ಇತ್ತ ಹೂಡಿಕೆ ಮಾಡಿದ ಹಣವನ್ನೂ ವಿತ್‌ಡ್ರಾ ಮಾಡಲು ಸಾಧ್ಯವಾಗಿಲ್ಲ. ಈ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇ-ಸ್ವತ್ತು ಮಾಡಿಕೊಡಲು ಲಂಚಕ್ಕೆ ಬೇಡಿಕೆ

ಮೈಸೂರು ಪಾಲಿಕೆ ಕಂದಾಯಾಧಿಕಾರಿ, ಬಿಲ್ ಕಲೆಕ್ಟರ್ ಲೋಕಾಯುಕ್ತ ಬಲೆಗೆ

ಮೈಸೂರು, ಜೂ.21(ಬಿಎಲ್‌ಯು)– ಇ–ಸ್ವತ್ತು ಮಾಡಿಕೊಡಲು ಲಂಚ ಸ್ವೀಕರಿಸುತ್ತಿದ್ದ ಮೈಸೂರು ನಗರಪಾಲಿಕೆಯ ಕಂದಾಯಾಧಿಕಾರಿ ಹಾಗೂ ಬಿಲ್ ಕಲೆಕ್ಟರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಮೈಸೂರು ನಗರಪಾಲಿಕೆಯ ವಲಯ ಕಚೇರಿ–4ರ ಕಂದಾಯಾಧಿಕಾರಿ ಎಂ.ಎನ್.ನಂದೀಶ್ ಮತ್ತು ಬಿಲ್ ಕಲೆಕ್ಟರ್ ರಜಾಕ್, ಇ–ಸ್ವತ್ತು ಮಾಡಿಕೊಡಲು 25 ಸಾವಿರ ರೂಪಾಯಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ಈ ಸಂಬಂಧ ಫಿರ್ಯಾದುದಾರರು ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಜೂನ್ 21 ರಂದು ಲಂಚ ಪಡೆಯುವಾಗ ನಂದೀಶ್ ಹಾಗೂ ರಜಾಕ್ ಲೋಕಾಯುಕ್ತ ಅಧಿಕಾರಿಗಳ ಕೈಗೆ ಸಿಕ್ಕಿ ಬಿದ್ದಿದ್ದಾರೆ.

ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ಪಿ.ಉಮೇಶ್, ಲೋಕೇಶ್, ರವಿಕುಮಾರ್, ಸಿಬ್ಬಂದಿಗಳಾದ ಆರ್.ಎನ್.ಲೋಕೇಶ್, ಹೆಚ್.ಎನ್.ಗೋಪಿ, ಲೋಕೇಶ್ ರಾಜೇ ಅರಸ್, ಕಾಂತರಾಜು, ಮೋಹನ್ ಗೌಡ, ಮೋಹನ್ ಕುಮಾರ್, ಲೋಕೇಶ್, ದಿನೇಶ್ ಕಾರ್ಯಚರಣೆ ನಡೆಸಿದ್ದರು.

ಕನಿಷ್ಠ ಬೆಂಬಲ ಬೆಲೆಯಡಿ ರಾಗಿ ಖರೀದಿ

ಮೈಸೂರು, ಜೂ.21(ಎಸ್‌ಪಿಎನ್)–2024–25ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮೈಸೂರು ಜಿಲ್ಲೆ ಖರೀದಿ ಕೇಂದ್ರಗಳ ಮೂಲಕ ಎಫ್‌ಎಕ್ಯೂ ಗುಣಮಟ್ಟದ ರಾಗಿಯನ್ನು ನೀಡಲು ನೋಂದಾಯಿಸಿದ ರೈತರು ಖರೀದಿ ಕೇಂದ್ರಗಳಲ್ಲಿ ಈಗಾಗಲೇ ರಾಗಿಯನ್ನು ನೀಡುತ್ತಿದ್ದು, ರಾಗಿ ಖರೀದಿಗೆ ಜೂ.30ರಂದು ಕೊನೆಯ ದಿನವಾಗಿದೆ.

ಹಾಗಾಗಿ ಸದರಿ ಸಾಲಿನಲ್ಲಿ ರಾಗಿಯನ್ನು ನೀಡಲು ಖರೀದಿ ಕೇಂದ್ರಗಳಲ್ಲಿ ನೋಂದಣಿ ಮಾಡಿಕೊಂಡು ಇದುವರೆಗೂ ರಾಗಿಯನ್ನು ನೀಡದಿರುವ ರೈತ ಬಾಂಧವರು ಆದಷ್ಟು ಶೀಘ್ರವಾಗಿ ಖರೀದಿ ಕೇಂದ್ರಗಳಿಗೆ ತಂದು ನೀಡುವಂತೆ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಜಿಲ್ಲಾ ವ್ಯವಸ್ಥಾಪಕರು ರೈತರಲ್ಲಿ ಮನವಿ ಮಾಡಿದ್ದಾರೆ. ಹೆಚ್ಚಿನ ವಿವರಗಳಿಗೆ ದೂ: 0821–2512303 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಜಿ ಸಂಸದ ಆರ್.ಧ್ರುವನಾರಾಯಣ್ ನೆನಪಿನೋತ್ಸವ

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ; ನೋಟ್‌ಬುಕ್ ವಿತರಣೆ

ಮೈಸೂರು, ಜೂ.21(ಎಂಕೆ)– ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್(ಐಎನ್‌ಟಿಯುಸಿ), ಯೂತ್ ವಿಂಗ್ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವತಿಯಿಂದ ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ್ ಅವರ ನೆನಪಿನೋತ್ಸವದ ಅಂಗವಾಗಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 25 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ 750 ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಕಿಟ್ ವಿತರಿಸಲಾಯಿತು.



ನಗರದ ಕಾಂಗ್ರೆಸ್ ಕಚೇರಿಯಲ್ಲಿ ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ್ ನೆನಪಿನೋತ್ಸವದ ಅಂಗವಾಗಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 25 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ 750 ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಕಿಟ್ ವಿತರಿಸಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನೋಟ್‌ಬುಕ್ ಕಿಟ್ ವಿತರಿಸಿ ಅಭಿನಂದಿಸಿದರು. ಇದಕ್ಕೂ ಮುನ್ನ ಮಾತನಾಡಿದ ಅವರು, ಮನುಷ್ಯ ತಾನು ಅಳಿದ ಮೇಲು ಇತರರ ನೆನಪಿನಲ್ಲಿ ಉಳಿಯುವಂತೆ ಬದುಕಬೇಕು. ಬಡತನವನ್ನೇ ಬಂಡವಾಳ ಮಾಡಿಕೊಂಡು ಬೆಳೆಯಬೇಕು ಎಂದು ತಿಳಿಸಿದರು.

ಹಸಿವಿದ್ದವನು ಮಾತ್ರ ಮುಂದೆ ಬರಲು ಸಾಧ್ಯ. ಬಡತನ ಕಲಿಸುವ ಪಾಠ ಅರಿತವರಿಂದ ಸಮಾಜ ನಿರ್ಮಾಣಕ್ಕೆ ಅಡಿಗಲ್ಲು ಹಾಕಲು ಸಾಧ್ಯ. ಇದಕ್ಕೆ ಪ್ರತಿಭೆ, ಶ್ರಮ ಹಾಗೂ ಸಮಾಜಮುಖಿ ಕಾಳಜಿ ಅಗತ್ಯವಾಗಿದ್ದು, ಏನಾದರೂ ಸಾಧನೆ ಮಾಡಿ. ಸಾಧನೆ ಧೈರ್ಯವೇ ಅಸ್ತ್ರವಾಗಿದ್ದು, ಅದೊಂದಿದ್ದರೆ ಗೆಲುವು ಸಾಧ್ಯ ಎಂದರು.

ರಾಜಕಾರಣ ಎಂದರೆ ಕೆಟ್ಟದು ಎಂಬ ಭಾವನೆ ವಿದ್ಯಾರ್ಥಿಗಳಲ್ಲಿ ಮೂಡಿದೆ. ಎಲ್ಲ ಕ್ಷೇತ್ರಗಳಲ್ಲೂ ಒಳಿತು ಮತ್ತು ಕೆಡುಕು ಎಂಬುದು ಮಿಶ್ರಣವಾಗಿರುತ್ತದೆ. ನಾವು ಯಾವುದನ್ನೂ ಆಯ್ದುಕೊಳ್ಳುತ್ತೇವೆ ಎಂಬುದರ ಮೇಲೆ ನಮ್ಮ ದೃಷ್ಟಿಕೋನ ನಿರ್ಧಾರಿತವಾಗುತ್ತದೆ. ಉತ್ತಮ ಗುರಿಯನ್ನು ಹೊಂದಿ, ಉನ್ನತ ಸ್ಥಾನ ತಲುಪಲು ಪ್ರಯತ್ನಿಸಿ, ಒಳಿತನ್ನೇ ಆಲೋಚಿಸಿ ಎಂದು ಕಿವಿಮಾತು ಹೇಳಿದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಧ್ರುವನಾರಾಯಣ್ ಅವರು ಈ ಭಾಗದಲ್ಲಿ ಸಂಸದ, ಶಾಸಕರಾಗಿ ತಮ್ಮದೇ ಕೊಡುಗೆ ನೀಡಿದ್ದಾರೆ, ಏಕಲವ್ಯ ಶಾಲೆ, ಆದರ್ಶ ವಿದ್ಯಾ ಶಾಲೆ, ಕೇಂದ್ರೀಯ ವಿದ್ಯಾಲಯ ಸೇರಿದಂತೆ ಚಾಮರಾಜನಗರದಲ್ಲಿ ಕಾನೂನು ಕಾಲೇಜು ತರಲು ಶ್ರಮಿಸಿದ್ದಾರೆ. ಅವರ ದೂರದೃಷ್ಟಿಯಂತೆ ಹೊಂದಿ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು ಟ್ರಸ್ಟ್ ಆರಂಭಿಸಲಾಗಿದೆ. ನೀಟ್, ಸಿಇಟಿ ಪರೀಕ್ಷೆಗೆ ತರಬೇತಿ ನೀಡಲಾಗುತ್ತಿದೆ. ನಂಜನಗೂಡಿನಲ್ಲಿ ಉದ್ಯೋಗ ಮೇಳವನ್ನೂ ಆಯೋಜಿಸಿದ್ದೇವೆ ಎಂದರು.

ವಿಧಾನ ಪರಿಷತ್ ಸದಸ್ಯ ಡಿ.ಟಿ.ಶ್ರೀನಿವಾಸ್ ಹಾಗೂ ಐಎನ್‌ಟಿಯುಸಿ ರಾಜ್ಯಾಧ್ಯಕ್ಷ ಲಕ್ಷ್ಮಿ ವೆಂಕಟೇಶ್ ಮಾತನಾಡಿ, ಎಸ್‌ಎಸ್ ಎಲ್‌ಸಿ ಮತ್ತು ಪಿಯುಸಿ ಪ್ರಮುಖ ಘಟ್ಟವಾಗಿದೆ. ವಿದ್ಯಾರ್ಥಿಗಳು ಮೊಬೈಲ್ ಬಳಕೆಯನ್ನು ಉತ್ತಮ ಕಾರ್ಯಕ್ಕೆ ಬಳಸಿಕೊಳ್ಳಿ. ತಂದೆ–ತಾಯಿಯ ಶ್ರಮವನ್ನು ಅರಿತು ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಇದೇ ವೇಳೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ನೂತನ ಪದಾಧಿಕಾರಿಗಳಾದ ಎನ್.ಸಿ.ಶಿವಕುಮಾರ್, ಪುಟ್ಟಸ್ವಾಮಿ, ಜೆ.ಶ್ವೇತಾ, ನಂಜುಂಡಮೂರ್ತಿ ಅವರಿಗೆ ನೇಮಕಾತಿ ಪತ್ರ ನೀಡಲಾಯಿತು.

ಮೈಸೂರು ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಯೂತ್ ವಿಂಗ್ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ರಾಜ್ಯಾಧ್ಯಕ್ಷ ಟಿ.ವೈ.ಕುಮಾರ್, ಉಪಾಧ್ಯಕ್ಷ ನಾಗರಾಜ್, ಕಾರ್ಯದರ್ಶಿ ಪುಟ್ಟರಾಜ್ ಯಾದವ್, ನಗರಾಧ್ಯಕ್ಷ ಮದನ್ ಮತ್ತಿತರರಿದ್ದರು.

ಆರ್.ಧ್ರುವನಾರಾಯಣ್ ಜನಪರ ವ್ಯಕ್ತಿ...

ದಿವಂಗತ ಆರ್.ಧ್ರುವನಾರಾಯಣ್ ಅವರು ಜನಪರ ವ್ಯಕ್ತಿಯಾಗಿದ್ದರು. ಅವರ ವ್ಯಕ್ತಿತ್ವವು ಸಜ್ಜನಿಕೆಯನ್ನು ಪ್ರತಿನಿಧಿಸುತ್ತಿತ್ತು. ಹಾಗಾಗಿ ಜನರು ಇಂದಿಗೂ ಅವರನ್ನು ಸ್ಮರಿಸುತ್ತಿದ್ದಾರೆ. ಅವರ ಹೆಸರಿನಿಂದಾಗಿ ದರ್ಶನ್ ಧ್ರುವನಾರಾಯಣ್ ಅವರನ್ನು ಶಾಸಕರನ್ನಾಗಿ ಪಕ್ಷ ಹಾಗೂ ಜನರು ಆಯ್ಕೆ ಮಾಡಿದ್ದಾರೆ. ತಂದೆಯಂತೆ ಇವರು ಕೂಡ ಆದರ್ಶ ರಾಜಕಾರಣಿಯಾಗುತ್ತಾರೆ ಎಂಬ ವಿಶ್ವಾಸವಿದೆ.

– ಜಿ.ಸಿ.ಚಂದ್ರಶೇಖರ್, ಕೆಪಿಸಿಸಿ ಕಾರ್ಯಾಧ್ಯಕ್ಷ

ಮೈಸೂರು ವಿವಿ ಒಡೆಯರ್ ಕ್ರೀಡಾಂಗಣದಲ್ಲಿ ನೂರಾರು ಮಂದಿ ಯೋಗ ಪ್ರದರ್ಶನ



ಮೈಸೂರು ವಿಶ್ವವಿದ್ಯಾನಿಲಯದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಶನಿವಾರ ಬೆಳಗ್ಗೆ ಆಯೋಜಿಸಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಕುಲಸಚಿವೆ ಸವಿತಾ, ಯೋಗಗುರು ಶ್ರೀಹರಿ ನೇತೃತ್ವದಲ್ಲಿ ಯೋಗ ಪ್ರದರ್ಶಿಸಲಾಯಿತು.

ಮೈಸೂರು,ಜೂ.21(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಶನಿವಾರ ಬೆಳಗ್ಗೆ ಆಯೋಜಿಸಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಬೋಧಕ, ಬೋಧಕೇತರ ಸಿಬ್ಬಂದಿ ವರ್ಗ ಪಾಲ್ಗೊಂಡು ಸಾಮೂಹಿಕವಾಗಿ ಯೋಗ ಪ್ರದರ್ಶಿಸಿದರು.

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕರ ಸಂಘ ಹಾಗೂ ವಿವಿಧ ಘಟಕಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮಕ್ಕೆ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಚಾಲನೆ ನೀಡಿ ಮಾತನಾಡಿ, ಇಂದು ವಿಶ್ವದೆಲ್ಲೆಡೆ ಯೋಗದ ಮಹತ್ವ ಪಸರಿಸಿದೆ. ಜನರ ಆರೋಗ್ಯ ಕಾಪಾಡುವಲ್ಲಿ ಯೋಗ ಮಹತ್ತರ ಪಾತ್ರವಹಿಸುತ್ತಿದೆ. ಆರೋಗ್ಯವಂತರಾಗಿ ಜೀವನ ನಡೆಸುವುದಕ್ಕೆ ಯೋಗ ಮಾಡುವುದು ಅಗತ್ಯ. ಅಂತರರಾಷ್ಟ್ರೀಯ ಯೋಗ ದಿನವನ್ನು ಹಮ್ಮಿಕೊಳ್ಳುವ ಮೂಲಕ ಎಲ್ಲೆಡೆ ಯೋಗದ ಮಹತ್ವ ಸಾರಲಾಗುತ್ತಿದೆ ಎಂದರು.

ಯೋಗ ಪ್ರದರ್ಶನದಲ್ಲಿ 500ಕ್ಕೂ ಹೆಚ್ಚು ಮಂದಿ ಪಾಲ್ಗೊಂಡು ಪ್ರಾಣಾಯಾಮ, ಸೂರ್ಯನಮಸ್ಕಾರ, ಚಕ್ರಾಸನ, ವೃಕ್ಷಾಸನ ಸೇರಿದಂತೆ ವಿವಿಧ ಆಸನ ಗಳನ್ನು ಪ್ರದರ್ಶಿಸಿದರು. ಈ ಸಂದರ್ಭದಲ್ಲಿ ಜೆಎಸ್‌ಎಸ್ ಸಂಸ್ಥೆ ಮುಖ್ಯಸ್ಥ ಯೋಗ ಗುರು ಶ್ರೀಹರಿ, ಮೈಸೂರು ವಿವಿ ಕುಲ ಸಚಿವೆ ಎಂ.ಕೆ. ಸವಿತಾ, ಕುಲಸಚಿವ (ಪರೀಕ್ಷಾಂಗ) ಪ್ರೊ.ಎನ್. ನಾಗರಾಜು, ಎಂಎಂಟಿಟಿಸಿ ನಿರ್ದೇಶಕ ಪ್ರೊ.ಹೆಚ್. ಪಿ.ಜ್ಯೋತಿ, ಐಕ್ಯುಎಸಿ ನಿರ್ದೇಶಕ ಪ್ರೊ.ಕೆ.ಎನ್.ಅಮೃತೇಶ್, ಡಿಎಸ್ ಡಬ್ಲ್ಯೂ ನಿರ್ದೇಶಕ ಪ್ರೊ.ಸಿ.ಗುರುಸಿದ್ದಯ್ಯ, ಸಿಡಿಸಿ ನಿರ್ದೇಶಕ ಪ್ರೊ.ಕೆ.ಮಂಟೇಲಿಂಗು, ಇಎಂಆರ್‌ಸಿ ನಿರ್ದೇಶಕರಾದ ಪ್ರೊ.ಎಂ.ಎಸ್.ಸಪ್ನ, ಎಂಎಂಟಿಎ ಅಧ್ಯಕ್ಷ ಪ್ರೊ.ಎಂ.ಪಿ.ಸದಾಶಿವ, ಪ್ರೊ.ಲೋಹಿತ್ ಇನ್ನಿತರರು ಉಪಸ್ಥಿತರಿದ್ದರು.

ಅಂತರಾಷ್ಟ್ರೀಯ ಯೋಗ ದಿನಾಚರಣೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ಮಹಾಬೋದಿ ಶಾಲೆಯಲ್ಲಿ 11ನೇ ಅಂತರರಾಷ್ಟ್ರೀಯ ಯೋಗ ದಿನ(ಯೋಗ ಸಂಗಮ್) ಆಚರಿಸಲಾಯಿತು. ಶೋಭನ ಭಂತೇಜಿ, ಶಿಕ್ಷಣ ಸಂಯೋಜಕ ವೆಂಕಟೇಶ್ವರುಲು, ಪ್ರಾಂಶುಪಾಲರಾದ ಅನ್ನಪೂರ್ಣ, ದ್ವಾರಕೀಶ್, ಮಾಲಿನಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ವಿಜಯ ವಿಠಲ ಶಾಲೆಯಲ್ಲಿ ಯೋಗ ದಿನಾಚರಣೆ



ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ವಿಜಯ ವಿಠಲ ವಿದ್ಯಾಶಾಲೆಯ ಆವರಣದಲ್ಲಿ ವಿದ್ಯಾರ್ಥಿಗಳು ಯೋಗಾಸನ ಪ್ರದರ್ಶಿಸಿದರು. ಈ ವೇಳೆ ಶಿಕ್ಷಕರು, ದೈಹಿಕ ಹಾಗೂ ಮಾನಸಿಕ ಸದೃಢತೆ ಜೊತೆಗೆ ಭಾವನಾತ್ಮಕ ಸಮತೋಲನಕ್ಕೆ ನೆರವಾಗುವ ಯೋಗವನ್ನು ದಿನಚರಿಯಾಗಿ ರೂಢಿಸಿಕೊಳ್ಳುವಂತೆ ಸಲಹೆ ನೀಡಿದರು.

ಯೋಗ ದಿನಾಚರಣೆ; ಶಿಕ್ಷಕರಿಗೆ ಅಭಿನಂದನೆ



ಮೈಸೂರಿನ ಶ್ರೀ ನಟರಾಜ ಶಿಕ್ಷಣ ಸಂಸ್ಥೆ ಆವರಣದಲ್ಲಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ವೇಳೆ ಯೋಗ ಶಿಕ್ಷಕರಾದ ಆಯುರ್ವೇದ ವೈದ್ಯೆ ಡಾ.ಪೂರ್ಣ ತೇಜಸ್ವಿ, ಸುಪ್ರಿಯಾ ಹಾಗೂ ಶ್ರೀಹರಿ ಅವರನ್ನು ಅಭಿನಂದಿಸಲಾಯಿತು. ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಶ್ರೀ ಬಸವೇಶ್ವರ ಮಂದಿರದ ಶ್ರೀಮಾತೆ ಬಸವಾಂಜಲಿ, ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ, ಬಸವಮಾರ್ಗ ಫೌಂಡೇಷನ್ ಸಂಸ್ಥಾಪಕ ಎಸ್.ಬಸವರಾಜು, ಹಿರಿಯ ಪತ್ರಕರ್ತ ಎಂ.ಆರ್.ಸತ್ಯನಾರಾಯಣ, ನಟರಾಜ ಕಾಲೇಜಿನ ಪ್ರಾಂಶುಪಾಲೆ ಡಾ.ಎಂ.ಶಾರದಾ, ಯೋಗ ಶಿಕ್ಷಕ ಹೆಚ್.ಪಿ.ನವೀನ್ ಕುಮಾರ್ ಚಿತ್ರದಲ್ಲಿದ್ದಾರೆ.

ವಿ.ಕೆ. ಪಬ್ಲಿಕ್ ಶಾಲೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ



ಮೈಸೂರು ವಿಜಯನಗರದ 3ನೇ ಹಂತದಲ್ಲಿರುವ ವಿ.ಕೆ. ಪಬ್ಲಿಕ್ ಶಾಲೆಯಲ್ಲಿ 11ನೇ ಅಂತರರಾಷ್ಟ್ರೀಯ ಯೋಗ ದಿನ ಮತ್ತು ವಿಶ್ವ ಸಂಗೀತ ದಿನವನ್ನು ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಶಾಲೆಯ ಧರ್ಮದರ್ಶಿ ರಮಾನಾಯಕ್, ಕಾರ್ಯದರ್ಶಿ ರವಿಕುಮಾರ್, ನಿರ್ವಾಹಕಿ ರೂಪಶ್ರೀ, ಸಹಾಯಕ ಮುಖ್ಯೋಪಾಧ್ಯಾಯರಾದ ಶೃತಿ.ಟಿ.ಎಸ್, ಯೋಗ ತರಬೇತುದಾರರಾದ ನೇತ್ರಾವತಿ, ಶಿಕ್ಷಕರು ಹಾಗೂ 500ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮರ್ಚೆಂಟ್ಸ್ ಕೋ ಆಪರೇಟಿವ್ ಬ್ಯಾಂಕ್ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಜೂ.21(ಎಸ್‌ಪಿಎನ್)– ಇಂಜಿನಿಯರ್, ವೈದ್ಯರು ಹಾಗೂ ವಿಜ್ಞಾನಿಗಳು ಉತ್ತಮ ದೇಶಕಟ್ಟಲು ಅವರ ಶ್ರಮ ಅಪಾರ ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ 46ಕ್ಕೂ ಹೆಚ್ಚು ಬ್ಯಾಂಕ್ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ, ನಂತರ ಮಾತನಾಡಿದರು.



ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ಬ್ಯಾಂಕ್ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಪ್ರತಿಭಾವಂತರನ್ನು, ಸರ್ಕಾರ ಗುರುತಿಸುವುದಕ್ಕಿಂತ ಸಂಘ–ಸಂಸ್ಥೆಗಳು ಹೆಚ್ಚಾಗಿ ಗುರುತಿಸಿ, ಪ್ರೋತ್ಸಾಹಿಸುತ್ತಿವೆ. ಅಂತೆಯೇ ಸರ್ಕಾರಕ್ಕಿಂತ ಹೆಚ್ಚಿನ ಸಮಾಜಮುಖಿ ಕಾರ್ಯಗಳನ್ನು ಸಂಘ–ಸಂಸ್ಥೆಗಳು ಮಾಡುತ್ತಿವೆ. ಹಾಗೂ ಇಂತಹ ಅವಕಾಶಗಳನ್ನು ಪ್ರತಿಭಾವಂತರು ಬಳಸಿಕೊಂಡು ವಿವಿಧ ಕ್ಷೇತ್ರದಲ್ಲಿ ತೊಡಗಿಸಿಕೊಂಡು ದೇಶದ ಉನ್ನತಿಗೆ ಶ್ರಮಿಸುವಂತೆ ಕರೆ ನೀಡಿದರು.

ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸುವುದರಿಂದ ಅವರ ಉನ್ನತ ವಿದ್ಯಾಭ್ಯಾಸ ಅಧ್ಯಯನ ನಡೆಸಲು ಪ್ರೋತ್ಸಾಹಿಸಿದಂತೆ. ಮುಂದಿನ ಪೀಳಿಗೆಯ ಇಂಜಿನಿಯರ್, ಡಾಕ್ಟರ್, ವಿಜ್ಞಾನಿಗಳು ತಮ್ಮ ಕ್ಷೇತ್ರದಲ್ಲಿ ಕೊಡುಗೆ ನೀಡಲು ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಯುವ ಪೀಳಿಗೆಗೆ ಮುಂದಾಲೋಚನೆ ಮುಖ್ಯ ಎಂದರು.

ನೀವು ಸಾಧಿಸಬೇಕಾದ ಗುರಿ ತಲುಪಲು ಒಮ್ಮೆ ವಿಫಲವಾದಲ್ಲಿ ಮತ್ತೆ ಆ ಕ್ಷೇತ್ರದಲ್ಲಿ ನಿಮಗೆ ಅವಕಾಶ ಇಲ್ಲ ಎಂದು ಭಾವಿಸಬಾರದು. ಸತತ ಪ್ರಯತ್ನದಿಂದ ಗುರಿ ತಲುಪಲು ಪ್ರಯತ್ನಿಸಬೇಕು. ಗುರಿ ಸ್ಪಷ್ಟಪಡಿಸಿಕೊಂಡು ಯಾವುದೇ ಅಡೆ–ತಡೆ ಬಂದರೂ ಲೆಕ್ಕಿಸದೇ ಗುರಿ ಸಾಧನೆಗೆ ಗಮನವಿರಬೇಕು ಎಂದು ಸಲಹೆ ನೀಡಿದರು.

ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಾದ ಕೀರ್ತನಾ ಆರ್. ನಾಯಕ್, ವೈದಯಾಶಂಕರ್, ಎಂ.ಎನ್. ಅರ್ಜಿತ್, ಜೆ.ಛಾಯ, ಧ್ರುವಿ.ಪಿ. ಕುಮಾರ್, ಛತ್ರಶ್ರೀ ಎಜ್ಜೈನ್, ಎಂ.ವರ್ಷ, ನೇಹ ಉಮೇಶ್, ಪ್ರಹಾಸ್ ಬಾಲಾಜಿ, ಪಿ.ಚೇತನ, ಸಂಜಿತ ತೇಜಸ್ವಿ, ಸಿ.ವರ್ಷಿಣಿ, ಎಂ.ಆರ್ಯನ್, ಎಂ.ಅನಘ ಸ್ವಾಮಿ, ಎ.ಎಸ್.ಆಕಾಶ್, ಎಂ. ಚಿರಂತ್ ಗೌಡ, ಸಾನ್ವಿ ಸ್ವರೂಪ್, ಆರ್. ಎಸ್.ಬಿಪಿನ್, ಎನ್.ಆದಿತಿ, ಎಸ್.ಧನುಷ್, ಶ್ರೀಶಾಂತ್ ವಿಕ್ರಮ್ ಅವರನ್ನು ಸನ್ಮಾನಿಸಲಾಯಿತು. **ಪಿಯುಸಿಯಲ್ಲಿ** ಅಧಿಕ ಅಂಕ ಗಳಿಸಿದ ಎಸ್.ಪ್ರಣವ್, ಎತಿಶ್ ಗೌತಮ್ ಪತಂಗೆ, ಟಿ.ವಿ.ಹಿಮಂತ್, ಆರ್.ವರ್ಷ, ಆರ್. ಎಸ್. ವಚನ, ಎ.ಅರ್ಪಿತ ಗೌಡ, ಎಂ. ಅರ್ಜುನಗೌಡ, ಎಸ್.ನಿತ್ಯಶ್ರೀ, ಎಂ.ಮಾನಸ, ರಿಯಾ ಕುಮಾರ್, ಕೀರ್ತಿ ಗಣೇಶ್, ಎಂ. ವೈಶಾಖ್, ಆರ್.ಆರ್.ಭುವನ, ಮೋಹಿತ್ ವಿ.ಗೌಡ, ಎಂ.ಶಿವಾನಿ, ಶ್ರೇಯಾ ಎಸ್. ಮಠ್, ಸಿ.ಎಸ್.ಯಶಸ್ವಿನಿ, ಬಿ.ಸ್ಫೂರ್ತಿ, ಎನ್. ತನ್ಮಯಿ, ಎನ್.ಕೆ.ಮೋಹಿತ್‌ಗೌಡ್ ಹಾಗೂ ಕ್ರೀಡಾಪಟುಗಳಾದ ಎ.ಭುವನ, ವಿಹಾನ್ .ಕೆ.ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಸಿ.ವಿ ಸೋಮಶೇಖರ್, ಉಪಾಧ್ಯಕ್ಷ ಎಂ.ಎನ್. ಮಹೇಶ, ನಿರ್ದೇಶಕ ಬಿ.ಆರ್. ನಂದೀಶ್, ಪ್ರೇಮಕುಮಾರ್, ಕೋದಂಡ ರಾಮ, ಆರ್. ಆನಂದ್, ಆರ್.ಪಿ.ಕೃಷ್ಣಮೂರ್ತಿ, ಕಣ್ಣನ್, ರಾಘವ್, ಸಿ.ಎಸ್. ಗಂಗಾಭಿಕ, ಅನುರಾಧ, ವಿಜಯಲಕ್ಷ್ಮಿ, ರಾಜ್ಯಶ್ರಾಜಿ, ಸುಧಾ, ಪ್ರಭು ಪ್ರಸಾದ್, ಎಂ.ಎಸ್. ಭವ್ಯ, ಗೀತ ವಿಕ್ರಂ ಮತ್ತಿತರರಿದ್ದರು.

ಮೈಸೂರು ಮಿತ್ರ ಭಾನುವಾರ 22 ಜೂನ್ 2025

ಪಾಂಡವಪುರದಲ್ಲಿ ಸಾವಿರಾರು ಮಕ್ಕಳಿಂದ ಯೋಗಾಭ್ಯಾಸ



ಪಾಂಡವಪುರ ಪಟ್ಟಣದ ಬಿಜಿಎಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳು ಸಾಮೂಹಿಕವಾಗಿ ಯೋಗಾಭ್ಯಾಸ ನಡೆಸಿದರು.

ಪಾಂಡವಪುರ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಪಟ್ಟಣದ ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ಸಾವಿರಾರು ಮಕ್ಕಳು ಸಾಮೂಹಿಕ ಯೋಗಾಭ್ಯಾಸ ನಡೆಸಿದರು.

ಸಂಸ್ಥೆಯ ಕಾರ್ಯದರ್ಶಿ ಡಾ.ಜೆ.ಎನ್.ರಾಮಕೃಷ್ಣೇಗೌಡ ಅವರ ನೇತೃತ್ವದಲ್ಲಿ ಯೋಗ ಗುರುಗಳಾದ ಅರುಣ್‌ಗೌಡ ಅವರ ಮಾರ್ಗದರ್ಶನದಲ್ಲಿ ಬೆಳಿಗ್ಗೆ 7 ಗಂಟೆಯಿಂದ ಸತತ ಎರಡು ಗಂಟೆಗಳ ಕಾಲ ಯೋಗಾಭ್ಯಾಸ ನಡೆಸಿದರು.

ಡಾ.ಜೆ.ಎನ್.ರಾಮಕೃಷ್ಣೇಗೌಡ ಮಾತನಾಡಿ, ಪ್ರತಿಯೊಬ್ಬ ಮನುಷ್ಯ ಆರೋಗ್ಯವಂತರಾಗಿ ಸದೃಢ ದೇಹ ಹೊಂದಬೇಕಾದರೆ ಕಡ್ಡಾಯವಾಗಿ ನಿತ್ಯ ಯೋಗಾಭ್ಯಾಸ ಮಾಡಬೇಕು. ನಿರಂತರ ಯೋಗಾಭ್ಯಾಸ ಮಾಡುವುದರಿಂದ ದೈಹಿಕ ಹಾಗೂ ಮಾನಸಿಕ ಮತ್ತು ಆಧ್ಯಾತ್ಮಿಕ ಬದಲಾವಣೆಯಾಗುತ್ತದೆ ಎಂದರು.

ಇದೇ ವೇಳೆ ಶಾಲೆಯ ಮುಖ್ಯಶಿಕ್ಷಕ ರಘು, ಪ್ರಾಂಶುಪಾಲ ಮಹದೇವು ಸೇರಿದಂತೆ ಶಾಲಾ ಶಿಕ್ಷಕ, ಶಿಕ್ಷಕಿಯರು ಭಾಗವಹಿಸಿದ್ದರು

ಯೋಗಕ್ಕೆ ಭಾರತವೇ ವಿಶ್ವಗುರು

ಮಂಡ್ಯ, ಜೂ.21– ಯೋಗ ಎಂದರೆ ಇಡೀ ವಿಶ್ವವೇ ಭಾರತ ದೇಶವನ್ನು ತಿರುಗಿ ನೋಡುವ ರೀತಿ ಭಾರತ ದೇಶ ಸಾಧನೆ ಮಾಡಿದೆ. ಯೋಗಕ್ಕೆ ಭಾರತ ದೇಶವೇ ವಿಶ್ವಗುರು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದರು.

ಶನಿವಾರ ಪಿಇಟಿ ಕ್ರಿಕೆಟ್ ಮೈದಾನದಲ್ಲಿ ಆಯೋಜಿಸಲಾಗಿದ್ದ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಯೋಗ ಎನ್ನುವುದು ಭಾರತ ದೇಶದ ಸಂಸ್ಕೃತಿಯ ಪ್ರತೀಕ. ಪ್ರತಿಯೊಬ್ಬರು ಯೋಗ ಕಲಿತು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಯೋಗ ಎಂಬುದು ಕೇವಲ ದೈಹಿಕವಾದ ವ್ಯಾಯಾಮ ಮಾತ್ರವಲ್ಲ, ಪ್ರತಿಯೊಬ್ಬರ ಜೀವನ ಕ್ರಮ ಮತ್ತು ಆರಾಧನೆಯ ಭಾಗವಾಗಬೇಕು. ಜನರು ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಲು ಯೋಗದ ಅವಶ್ಯಕತೆ ಇದೆ ಎಂದರು.



ಮಂಡ್ಯದ ಪಿಇಟಿ ಕ್ರಿಕೆಟ್ ಮೈದಾನದಲ್ಲಿ ನಡೆದ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡಿರುವ ಜನರು.

ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ ಮಾತನಾಡಿ, ಯೋಗಾಸನವನ್ನು ಕೇವಲ ಒಂದು ದಿನಕ್ಕೆ ಮೀಸಲಿಡದೆ ಪ್ರತಿದಿನ ಅಭ್ಯಾಸ ಮಾಡಿ ಆರೋಗ್ಯದ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಿ. ಎಲ್ಲಾ ವಯೋಮಿತಿ ಅವರು ಯೋಗಾಭ್ಯಾಸವನ್ನು ಮಾಡಬಹುದು ಎಂದು ಕಿವಿಮಾತು ಹೇಳಿದರು. ಚಂದ್ರವನ ಆಶ್ರಮದ ಬೇಬಿ ಮಠದ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ಮಾತನಾಡಿದರು.

ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್, ಜಿ.ಪಂ. ಸಿಇಓ ಕೆಆರ್.ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಉಪಸ್ಥಿತರಿದ್ದರು.

ಸಾಮೂಹಿಕ ಯೋಗ ಪ್ರದರ್ಶನ



ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಕೆ.ಆರ್.ಪೇಟೆ ಪಟ್ಟಣದ ಆರ್.ಟಿ.ಒ ಮಲ್ಲಿಕಾರ್ಜುನ ಚಾರಿಟೇಬಲ್ ಟ್ರಸ್ಟ್ ಕಚೇರಿಯ ಆವರಣದಲ್ಲಿ ಯೋಗ ಗುರು ಅಲ್ಲಮಪ್ರಭು ನೇತೃತ್ವದಲ್ಲಿ ನಡೆದ ಸಾಮೂಹಿಕ ಯೋಗ ಪ್ರದರ್ಶನದಲ್ಲಿ ನೂರಾರು ಯೋಗಪಟುಗಳು ಭಾಗವಹಿಸಿ ಯೋಗ ಪ್ರದರ್ಶನ ಮಾಡಿದರು.

ಇಂದು ಡಾ.ಬೆಸಗರಹಳ್ಳಿ ರಾಮಣ್ಣ ಪ್ರಶಸ್ತಿ ಪ್ರದಾನ

ಮಂಡ್ಯ: ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ವತಿಯಿಂದ 2024ನೇ ಸಾಲಿನ ಡಾ.ಬೆಸಗರಹಳ್ಳಿ ರಾಮಣ್ಣ ಕಥಾ ಸಂಕಲನ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ 'ಅಲೆಮನೆ' ಕೃತಿ ಬಿಡುಗಡೆ ಕಾರ್ಯಕ್ರಮವನ್ನು ಜೂ.22ರ ಬೆಳಗ್ಗೆ 10 ಗಂಟೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ ಎಂದು ಪ್ರತಿಷ್ಠಾನದ ಅಧ್ಯಕ್ಷೆ ಎಚ್.ಆರ್.ಸುಜಾತಾ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಷ್ಠಾನದ ಮೂಲಕ ಡಾ.ಬೆಸಗರಹಳ್ಳಿ ರಾಮಣ್ಣ ಕಥಾಸಂಕಲನ ಪ್ರಶಸ್ತಿಗೆ ಉತ್ತರ ಕರ್ನಾಟಕ ಭಾಗದ ಅನಿಲ್ ಗುನ್ನಾಪೂರ ಅವರ 'ಸರ್ವೆ ನಂಬರ್–97' ಕಥಾಸಂಕಲನ ಆಯ್ಕೆ ಮಾಡಲಾಗಿದೆ ಎಂದರು.

ಪ್ರಶಸ್ತಿ ಆಯ್ಕೆಗೆ 48 ಕಥಾಸಂಕಲನ ಬಂದಿದ್ದು, ಆಯ್ಕೆ ಸಮಿತಿಯ ಡಾ.ಅಶೋಕ್ ಕುಮಾರ್ ರಂಜೇರೆ, ಡಾ.ಗೀತಾ ವಸಂತ ಮತ್ತು ಡಾ.ಕೆ.ಪುಟ್ಟಸ್ವಾಮಿ ಅವರು 'ಸರ್ವೆ ನಂಬರ್–97' ಕಥಾ ಸಂಕಲನವನ್ನು ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಪ್ರಶಸ್ತಿಯೊಂದಿಗೆ 25 ಸಾವಿರ ರೂ ನಗದು ನೀಡಲಾಗುವುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಂಶೋಧಕ ಮತ್ತು ಬರಹಗಾರ ನಾಡೋಜ ಡಾ.ಹಂ.ಪ.ನಾಗರಾಜಯ್ಯ ಪ್ರಶಸ್ತಿ ಪ್ರದಾನ ಮಾಡುವರು, ಹಿರಿಯ ಸ್ತ್ರೀವಾದಿ ಚಿಂತಕಿ ಮತ್ತು ಬರಹಗಾರ್ತಿ ಡಾ.ಎಚ್.ಎಲ್.ಶ್ರೀಮತಿ ಭಾಗವಹಿಸಲಿದ್ದು, ತುಮಕೂರು ವಿ.ವಿಯ ಕನ್ನಡ ಪ್ರಾಧ್ಯಾಪಕಿ ಡಾ.ಗೀತಾ ವಸಂತ ಪ್ರಶಸ್ತಿ ವಿಜೇತ ಕೃತಿಯ ಕುರಿತು ಮಾತನಾಡಲಿದ್ದಾರೆ.

ಅನ್ನದಾನ ಭವನಕ್ಕೆ ಲಕ್ಷ ರೂ. ದೇಣಿಗೆ



ಮೇಲುಕೋಟೆ ಚೆಲುವನಾರಾಯಣಸ್ವಾಮಿಯ ಅನ್ನದಾನ ಭವನ ನಿರ್ವಹಣೆಗಾಗಿ ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿಯವರ ಪತ್ನಿ ಧನಲಕ್ಷ್ಮಿ ಶನಿವಾರ ಒಂದು ಲಕ್ಷ ರೂ. ದೇಣಿಗೆಯ ಚೆಕ್ ನೀಡಿದರು. ಪಾರುಪತ್ತೇಗಾರ್ ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ ಇದ್ದಾರೆ.

ಸಿ.ಎಸ್.ಪುಟ್ಟರಾಜು ದಂಪತಿಗೆ ವಿವಾಹ ವಾರ್ಷಿಕೋತ್ಸವ



ಪಾಂಡವಪುರ ಪಟ್ಟಣದ ಜೆಡಿಎಸ್ ಮುಖಂಡ ಸಾಮಿಲ್ ಚೇತನ್ ಅವರ ಕಚೇರಿಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹಾಗೂ ಪತ್ನಿ ನಾಗಮ್ಮ ಅವರ 42ನೇ ವಿವಾಹ ಮಹೋತ್ಸವದ ಅಂಗವಾಗಿ ಮುಖಂಡರು, ಕಾರ್ಯಕರ್ತರು ಅಭಿನಂದಿಸಿದರು. ಇದೇವೇಳೆ ಜೆಡಿಎಸ್ ಮುಖಂಡರಾದ ಚಿಕ್ಕಾಡೆ ಚೇತನ್, ಪ್ರಕಾಶ್, ಪುರಸಭೆ ಸದಸ್ಯ ಆರ್.ಸೋಮಶೇಖರ್, ಗಿರೀಶ್, ದೇಶವಳ್ಳಿ ಪ್ರಭಾಕರ್, ದಸಂಸ ಮುಖಂಡ ಬೊಮ್ಮರಾಜು, ನಿವೃತ್ತ ಉಪನ್ಯಾಸಕ ರಮೇಶ್, ಗುರು ಸೇರಿದಂತೆ ಹಲವರು ಇದ್ದರು.

ಜಿಪಂ ಮಾಜಿ ಸದಸ್ಯನಿಗೆ ಅಭಿನಂದನೆ



ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ಅಣ್ಣನ ಮಗ ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಅವರನ್ನು ಮುಖಂಡರು ಅಭಿನಂದಿಸಿದರು. ಇದೇ ವೇಳೆ ಮುಖಂಡರಾದ ಸಿ.ಎ.ಲೋಕೇಶ್, ದೇಶಹಳ್ಳಿ ಪ್ರಭಾಕರ್, ಡೇರಿ ಮಾಜಿ ಅಧ್ಯಕ್ಷ ರಮೇಶ್, ಸೊಳ್ಳೆಪುರ ಮಾಜಿ ಅಧ್ಯಕ್ಷ ಮಂಜುನಾಥ್, ಕೆ.ಬಿ.ಬಲರಾಮು, ಚಿಕ್ಕಾಡೆ ಗಿರೀಶ್, ಅರಕನಕೆರೆ ಮಂಜುನಾಥ್, ಯೋಗಣ್ಣ, ಕೆ.ಎನ್.ನಾಗೇಗೌಡ ಸೇರಿದಂತೆ ಹಲವರು ಇದ್ದರು.

ಜೂ.25ರಂದು ರೈತರಿಂದ 'ದೇವನಹಳ್ಳಿ ಚಲೋ'

ಮಂಡ್ಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯ ರೈತರ ವಿರೋಧದ ನಡುವೆಯೂ ಭೂ ಸ್ವಾಧೀನಕ್ಕೆ ಹೊರಡಿಸಿರುವ ಅಧಿಸೂಚನೆಯನ್ನು ರದ್ದುಪಡಿಸುವಂತೆ ಒತ್ತಾಯಿಸಿ ಜೂ.25ರಂದು ದೇವನಹಳ್ಳಿ ತಾಲೂಕು ಕಚೇರಿ ಎದುರು 'ದೇವನಹಳ್ಳಿ ಚಲೋ' ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಈ ನಿರ್ಧಾರವನ್ನು ಖಂಡಿಸಿ ರೈತ, ದಲಿತ, ಕಾರ್ಮಿಕ, ವಿದ್ಯಾರ್ಥಿ, ಯುವಜನ, ಮಹಿಳಾ ಹಾಗೂ ಪ್ರಗತಿಪರ ಸಂಘಟನೆಗಳು ಸಂಯುಕ್ತ ಹೋರಾಟ–ಕರ್ನಾಟಕದ ಅಡಿಯಲ್ಲಿ ಈ ಹೋರಾಟ ರೂಪಿಸಲಾಗಿದೆ ಎಂದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳಲ್ಲಿ ಬಲವಂತವಾಗಿ ಕೆಐಎಡಿಬಿ ಭೂ ಸ್ವಾಧೀನಕ್ಕೆ ಸರ್ಕಾರ ಅಧಿಸೂಚನೆ ಹೊರಡಿಸಿರುವುದು ಹೀನಾಯ ಕೃತ್ಯವಾಗಿದ್ದು, ರಾಜ್ಯ ಸರ್ಕಾರದ ಹೇಡಿತನಕ್ಕೆ ಸಾಕ್ಷಿಯಾಗಿದೆ ಎಂದು ಖಂಡಿಸಿದರು.

ಚನ್ನರಾಯಪಟ್ಟಣ ಹೋಬಳಿಯ 13 ಗ್ರಾಮಗಳ 1777 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಅಲ್ಲಿನ ರೈತರ ಒಪ್ಪದೇ 1180 ದಿನ ಗಳಿಂದ ನಿರಂತರವಾಗಿ ಚನ್ನರಾಯಪಟ್ಟಣದ ನಾಡಾ ಕಚೇರಿ ಬಳಿ ಅನಿರ್ದಿಷ್ಟ ಪ್ರತಿಭಟನೆ ನಡೆಸುತ್ತಿದ್ದು, ಸದರಿ ಸ್ವಾಧೀನ ಪ್ರಕ್ರಿಯೆಗೆ ಶೇ 80ರಷ್ಟು ರೈತರು ವಿರೋಧ ವ್ಯಕ್ತಪಡಿಸಿದ್ದರೂ, ಬಲವಂತವಾಗಿ ಸ್ವಾಧೀನಕ್ಕೆ ಮುಂದಾಗಿದ್ದು, ಇದು ಭೂಸ್ವಾಧೀನ ಕಾಯ್ದೆ–2013ರ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ದೂರಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಎನ್.ಎಲ್.ಭರತ್‌ರಾಜ್ ಮಾತನಾಡಿ, ವಿಧಾನಸಭಾ ಚುನಾವಣೆಗೂ ಮುನ್ನ ಭೂಸ್ವಾಧೀನಕ್ಕೆ ಅವಕಾಶ ನೀಡುವುದಿಲ್ಲ ಎಂದು ಹೇಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅಲ್ಲಿನ ಉಸ್ತುವಾರಿ ಮಂತ್ರಿಗಳು ಭೂ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸುವ ಮೂಲಕ ವಚನ ಭ್ರಷ್ಟ ನಡೆವಳಿಕೆಯನ್ನು ತೋರಿದ್ದಾರೆ ಎಂದು ಕಿಡಿ ಕಾರಿದರು.

ಸಿದ್ದಲಿಂಗಪ್ಪ ನಿಧನ

ಭಾರತೀನಗರ.ಜೂ.21–ಇಲ್ಲಿಗೆ ಸಮೀಪದ ಎಸ್.ಐ.ಹಾಗಲಹಳ್ಳಿ ಗ್ರಾಮದ ನಿವೃತ್ತ ಕಾರ್ಖಾನೆಗಳ ಬಾಯ್ಲರ್ ಇನ್ಸ್‌ಪೆಕ್ಟರ್ ಸಿದ್ದಲಿಂಗಪ್ಪ(82) ಅನಾರೋಗ್ಯದಿಂದ ಬೆಂಗಳೂರಿನಲ್ಲಿ ಶುಕ್ರವಾರ ನಿಧನ ಹೊಂದಿದ್ದಾರೆ.



ಮೃತರು, ಪತ್ನಿ ರತ್ನಮ್ಮ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮವಾದ ಎಸ್.ಐ.ಹಾಗಲಹಳ್ಳಿಯ ಜಮೀನಿನಲ್ಲಿ ಶನಿವಾರ ಬೆಳಿಗ್ಗೆ ನೆರವೇರಿಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಮೈಸೂರಲ್ಲಿ ಯೋಗ ಸಂಭ್ರಮ

ಮುಂಜಾನೆ 5 ಗಂಟೆಯಿಂದಲೇ ಆಗಮಿಸಿದರಾದರೂ 6.30ರವರೆಗೂ ಯೋಗ ಮಾಡಲು ಮ್ಯಾಟ್ ಹಾಸಿಕೊಂಡು ಕುಳಿತಿದ್ದರು. ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಿದ್ದಂತೆ ಯೋಗ ದಿನ ಪ್ರೊಟೋಕಾಲ್‌ನಂತೆ ಯೋಗ ಪ್ರದರ್ಶನ ಆರಂಭವಾಯಿತು.

ಅರಮನೆ ಆವರಣದಲ್ಲಿ ಎಲ್ಇಡಿ ಪರದೆಯುಳ್ಳ 40X25 ಅಡಿಯ ಮುಖ್ಯ ವೇದಿಕೆ ಹಾಗೂ ಯೋಗಾಸನದ ವಿವಿಧ ಯೋಗ ಭಂಗಿಯ ಚಿತ್ರವುಳ್ಳ ಬ್ಯಾಕ್‌ಡ್ರಾಪ್‌ವುಳ್ಳ 20X15 ಅಡಿಯ ಮತ್ತೊಂದು ವೇದಿಕೆಯಲ್ಲಿ ಯೋಗಪಟುಗಳಿಗಳಿಗೆ ಯೋಗ ಶಿಕ್ಷಕರು ಮಾರ್ಗದರ್ಶನ ನೀಡಿದರು.

ಮೊದಲಿಗೆ ನಾಲ್ಕು ನಿಮಿಷಗಳ ಕಾಲ ಚಲನೆಗೆ ಸಂಬಂಧಿಸಿದ ವ್ಯಾಯಾಮ, ಯೋಗ ಪ್ರದರ್ಶನಕ್ಕೆ ಅಗತ್ಯವಾದ ಕುತ್ತಿಗೆ, ಭುಜ, ಸೊಂಟ, ಮಂಡಿಯ ಚಲನ ಪ್ರಕ್ರಿಯೆ ನಡೆಸಿದ ಬಳಿಕ, ಬೆಳಗ್ಗೆ 7 ಗಂಟೆಗೆ ಯೋಗಾಸನ ಪ್ರದರ್ಶನ ಆರಂಭವಾಯಿತು. 25 ನಿಮಿಷ ತಾಡಾಸನ, ಹಸ್ತಾಸನ, ಶಲಭಾಸನ, ಪಾದ ಹಸ್ತಾಸನ, ಅರ್ಧ ಚಕ್ರಾಸನ, ತ್ರಿಕೋಣಾಸನ, ಭದ್ರಾಸನ, ವಜ್ರಾಸನ, ಅರ್ಧ ಉಷ್ಟ್ರಾಸನ, ಉಷ್ಟ್ರಾಸನ, ಶಶಂಕಾಸನ, ಉತ್ಥಾನ ಮಂಡೂಕಾಸನ, ವಕ್ರಾಸನ, ಮಕರಾಸನ, ಭುಜಂಗಾಸನ, ಶಲಭಾಸನ, ಸೇತುಬಂದಾಸನ, ಉತ್ಥಾನ ಪಾದಾಸನ, ಅರ್ಧ ಹಲಾಸನ, ಪವನ ಮುಕ್ತಾಸನ, ಶವಾಸನಗಳನ್ನು ಯೋಗಪಟುಗಳು ಪ್ರದರ್ಶಿಸಿದರು. ನಂತರ 15 ನಿಮಿಷಗಳ ಕಾಲ ಕಪಾಲಭಾತಿ, ನಾಡಿ ಶೋಧನ ಪ್ರಾಣಾಯಮ, ಶೀತಲಿ, ಭ್ರಾಮರಿ, ಧ್ಯಾನ ಮಾಡುವ ಮೂಲಕ ಯೋಗ ಪ್ರದರ್ಶನ ನೆರವೇರಿಸಿ ಯೋಗ ದಿನದ ಕಾರ್ಯಕ್ರಮ ಸಮಾಪ್ತಿಯಾಯಿತು.



ಯೋಗ ಪ್ರದರ್ಶನದಲ್ಲಿ ವಿದೇಶಿಗರ ಉತ್ಸಾಹ

ವಿಶೇಷ ಮಕ್ಕಳು, ವಿದೇಶಿಗರೂ ಭಾಗಿ: ಇಂದು ನಡೆದ ಅಂತರರಾಷ್ಟ್ರೀಯ ಯೋಗ ದಿನದ ಕಾರ್ಯಕ್ರಮದಲ್ಲಿ ಮೈಸೂರಿನ ವಿವಿಧ ವಿಶೇಷ ಮಕ್ಕಳ ಶಾಲೆಗಳಿಂದ ವಿಶೇಷ ಮಕ್ಕಳು ಪೋಷಕರೊಂದಿಗೆ ಆಗಮಿಸಿದ್ದರು. ಯೋಗ ಮಾರ್ಗದರ್ಶಕರು ನೀಡುತ್ತಿದ್ದ ಸೂಚನೆ ಮೇರೆಗೆ ಪೋಷಕರು ತಮ್ಮ ವಿಶೇಷ ಮಕ್ಕಳಿಗೆ ಯೋಗಾಸನ ಮಾಡಲು ಸಹಕರಿಸುತ್ತಿದ್ದರು. ಅಲ್ಲದೆ, ಮೈಸೂರಿನ ವಿವಿಧ ಯೋಗ ಶಾಲೆಗಳಲ್ಲಿ ಯೋಗ ಕಲಿಯುತ್ತಿರುವ ವಿದೇಶಿಗರೂ ಯೋಗ ಪ್ರದರ್ಶನ ನೀಡುವ ಮೂಲಕ ಗಮನ ಸೆಳೆದರು.

ಭದ್ರತೆ: ಯೋಗ ಪ್ರದರ್ಶನ ನೀಡಲು ಸಾವಿರಾರು ಯೋಗಪಟುಗಳು ಆಗಮಿಸಿದ ಹಿನ್ನೆಲೆಯಲ್ಲಿ ಅರಮನೆ ಬಳಿ ಬಿಗಿ ಭದ್ರತೆ ಏರ್ಪಡಿಸಲಾಗಿತ್ತು. ಪ್ರವೇಶ ದ್ವಾರಗಳಲ್ಲಿ ಅರಮನೆಗೆ ಬರುವವರನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಪೊಲೀಸರು, ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಿದ್ದರು.

ನಗರ ಸಾರಿಗೆ ಬಸ್ ಸಂಚಾರ: ವಿವಿಧ ಬಡಾವಣೆಗಳಿಗೆ ಅರಮನೆಗೆ ಯೋಗ ಪಟುಗಳು ಸಕಾಲದಲ್ಲಿ ಆಗಮಿಸಲು ನಗರ ಸಾರಿಗೆ ಸಂಸ್ಥೆ ಬಸ್ ವ್ಯವಸ್ಥೆ ಮಾಡಿತ್ತು. ಕುವೆಂಪುನಗರ, ವಿಜಯ ನಗರ, ವಿವೇಕಾನಂದನಗರ, ಹೆಬ್ಬಾಳ್, ಬನ್ನಿಮಂಟಪ, ಸಿದ್ಧಾರ್ಥನಗರ ಸೇರಿದಂತೆ ವಿವಿಧ ಬಡಾವಣೆಗಳಿಂದ ಮುಂಜಾನೆಯಿಂದಲೇ ಬಸ್ ಸಂಚಾರದ ವ್ಯವಸ್ಥೆ ಮಾಡಲಾಗಿತ್ತು. ಕೆಲವು ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳನ್ನು ಕರೆತರಲು ಶಾಲಾ ಬಸ್‌ಗಳ ವ್ಯವಸ್ಥೆ ಮಾಡಲಾಗಿತ್ತು.

ಸೌಲಭ್ಯ: ಅರಮನೆ ಆವರಣದಲ್ಲಿ ಯೋಗಪಟುಗಳಿಗೆ ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೆ, ಯೋಗ ಪ್ರದರ್ಶನ ಮುಗಿದ ನಂತರ ಲಘು ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಯದುವೀರ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿ.ಪಂ. ಸಿಇಓ ಯುಕೇಶ್‌ಕುಮಾರ್, ಸಿಐಐಎಲ್ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಎಸ್ಪಿ ಡಾ.ವಿಷ್ಣುವರ್ಧನ್, ಎಡಿಸಿ ಡಾ.ಪಿ.ಶಿವರಾಜು, ಜಿಲ್ಲಾ ಆಯುಷ್ ಇಲಾಖೆ ಅಧಿಕಾರಿ ಡಾ.ಸಿ.ರೇಣುಕಾ ದೇವಿ ಹಾಗೂ ಯೋಗ ಸಂಸ್ಥೆಗಳ ಮುಖ್ಯಸ್ಥರೂ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಯೋಗದಿಂದ ಜಗತ್ತಿನಲ್ಲಿ ಶಾಂತಿ: ನರೇಂದ್ರ ಮೋದಿ

ದೇಶದೊಂದಿಗೆ ನಿಂತವು. ಇಂದಿನ ಜಗತ್ತಿನಲ್ಲಿ ಈ ಏಕತೆ ಮತ್ತು ಬೆಂಬಲವು ಸಾಮಾನ್ಯ ಘಟನೆಯಲ್ಲ ಎಂದು ನರೇಂದ್ರ ಮೋದಿ ಹೇಳಿದರು.

ಯೋಗದಿಂದ ಶಾಂತಿ: ದುರದೃಷ್ಟವಶಾತ್, ಇಂದು ಇಡೀ ಜಗತ್ತು ಕೆಲವು ಪ್ರದೇಶಗಳಲ್ಲಿ ಸ್ವಲ್ಪ ಉದ್ವಿಗ್ನತೆ, ಅಶಾಂತಿ ಮತ್ತು ಅಸ್ಥಿರತೆಯನ್ನು ಎದುರಿಸುತ್ತಿದೆ. ಅಂತಹ ಸಮಯದಲ್ಲಿ, ಯೋಗವು ನಮಗೆ ಶಾಂತಿಯ ದಿಕ್ಕನ್ನು ನೀಡುತ್ತದೆ. ಯೋಗವು ಮಾನವೀಯತೆಯು ಉಸಿರಾಡಲು, ಸಮತೋಲನಗೊಳಿಸಲು ಮತ್ತು ಮತ್ತೆ ಸಂಪೂರ್ಣವಾಗಲು ಅಗತ್ಯವಿರುವ ವಿರಾಮ ಬಟನ್ ಆಗಿದೆ. ನಮ್ಮ ದಿವ್ಯಾಂಗ ಸ್ನೇಹಿತರು ಬ್ರೈಲ್‌ನಲ್ಲಿ ಯೋಗ ಶಾಸ್ತ್ರಗಳನ್ನು ಅಧ್ಯಯನ ಮಾಡುವುದನ್ನು ನೋಡಿದಾಗ ನನಗೆ ಹೆಮ್ಮೆ ಅನ್ನಿಸುತ್ತದೆ. ವಿಜ್ಞಾನಿಗಳು ಬಾಹ್ಯಾಕಾಶದಲ್ಲಿ ಯೋಗವನ್ನು ಅಭ್ಯಾಸ ಮಾಡುತ್ತಾರೆ. ಯುವ ಸ್ನೇಹಿತರು ಹಳ್ಳಿಗಳಲ್ಲಿ ಯೋಗ ಒಲಿಂಪಿಯಾಡ್‌ಗಳಲ್ಲಿ ಭಾಗವಹಿಸುತ್ತಾರೆ.

ಈ ಎಲ್ಲಾ ನೌಕಾಪಡೆಯ ಹಡಗುಗಳಲ್ಲಿ ಅತ್ಯುತ್ತಮ ಯೋಗ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಅದು ಒಪೇರಾ ಹೌಸ್‌ನ ಮೆಟ್ಟಿಲುಗಳಾಗಲಿ, ಎವರೆಸ್ಟ್ ಶಿಖರವಾಗಲೀ ಅಥವಾ ಸಮುದ್ರದ ವಿಸ್ತಾರವಾಗಲೀ–ಎಲ್ಲೆಡೆಯಿಂದ ಒಂದೇ ಸಂದೇಶ ಬರುತ್ತದೆ. ಯೋಗವು ಎಲ್ಲರಿಗೂ, ಗಡಿಗಳು, ಹಿನ್ನೆಲೆ ಮತ್ತು ಸಾಮರ್ಥ್ಯವನ್ನು ಮೀರಿದ್ದಾಗಿದೆ.

ಈ ವರ್ಷದ ಅಂತರರಾಷ್ಟ್ರೀಯ ಯೋಗ ದಿನದ ಧ್ಯೇಯವಾಕ್ಯ ಒಂದು ಭೂಮಿಗಾಗಿ, ಒಂದು ಆರೋಗ್ಯಕ್ಕಾಗಿ ಯೋಗ. ಈ ಧ್ಯೇಯವಾಕ್ಯವು ಆಳವಾದ ಸತ್ಯವನ್ನು ಪ್ರತಿಬಿಂಬಿಸುತ್ತದೆ. ಭೂಮಿಯ ಮೇಲಿನ ಪ್ರತಿಯೊಂದು ಜೀವಿಯ ಆರೋಗ್ಯವು ಪರಸ್ಪರ ಸಂಬಂಧ ಹೊಂದಿದೆ. ಮಾನವನ ಯೋಗಕ್ಷೇಮವು ನಮ್ಮ ಆಹಾರವನ್ನು ಬೆಳೆಸುವ ಮಣ್ಣಿನ ಆರೋಗ್ಯ, ನಮಗೆ ನೀರು ನೀಡುವ ನದಿಗಳು, ನಮ್ಮ ಪರಿಸರ ವ್ಯವಸ್ಥೆಗಳನ್ನು ಹಂಚಿಕೊಳ್ಳುವ ಪ್ರಾಣಿಗಳ ಆರೋಗ್ಯ ಮತ್ತು ನಮ್ಮನ್ನು ಪೋಷಿಸುವ ಸಸ್ಯಗಳ ಆರೋಗ್ಯವನ್ನು ಅವಲಂಬಿಸಿರುತ್ತದೆ. ಯೋಗವು ನಮ್ಮನ್ನು ಈ ಪರಸ್ಪರ ಸಂಬಂಧಕ್ಕೆ ಜಾಗೃತಗೊಳಿಸುತ್ತದೆ, ಪ್ರಪಂಚದೊಂದಿಗೆ ಏಕತೆಯತ್ತ ಪ್ರಯಾಣಕ್ಕೆ ಕರೆದೊಯ್ಯುತ್ತದೆ ಮತ್ತು ನಾವು ಪ್ರತ್ಯೇಕ ವ್ಯಕ್ತಿಗಳಲ್ಲ, ಆದರೆ ಪ್ರಕೃತಿಯ ಭಾಗ ಎಂದು ನಮಗೆ ಕಲಿಸುತ್ತದೆ ಎಂದು ಮೋದಿ ಹೇಳಿದರು.

ಜಗತ್ತಿನಲ್ಲಿ ಯೋಗದ ವಿಸ್ತರಣೆಗಾಗಿ, ಭಾರತವು ಆಧುನಿಕ ಸಂಶೋಧನೆಯ ಮೂಲಕ ಯೋಗ ವಿಜ್ಞಾನವನ್ನು ಸಬಲೀಕರಣಗೊಳಿಸುತ್ತಿದೆ... ನಾವು ಯೋಗ ಕ್ಷೇತ್ರದಲ್ಲಿ ಪುರಾವೆ ಆಧಾರಿತ ಚಿಕಿತ್ಸೆಯನ್ನು ಸಹ ಪ್ರೋತ್ಸಾಹಿಸುತ್ತಿದ್ದೇವೆ. ದೆಹಲಿ ಏಮ್ಸ್ ಈ ವಿಷಯದಲ್ಲಿ ಉತ್ತಮ ಕೆಲಸ ಮಾಡಿದೆ. ಹೃದಯ ಮತ್ತು ನರವೈಜ್ಞಾನಿಕ ಅಸ್ವಸ್ಥತೆಗಳ ಚಿಕಿತ್ಸೆಯಲ್ಲಿ ಯೋಗವು ನಿರ್ಣಾಯಕ ಪಾತ್ರವನ್ನು ಹೊಂದಿದೆ ಎಂದು ಅದರ ಸಂಶೋಧನೆ ತೋರಿಸಿದೆ ಮತ್ತು ಇದು ಮಹಿಳೆಯರ ಆರೋಗ್ಯ ಮತ್ತು ಮಾನಸಿಕ ಆರೋಗ್ಯದಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು.

ಭಾರತದ ಮೃದು ಶಕ್ತಿಯ ದೊಡ್ಡ ಗುರುತುಗಳಲ್ಲಿ ಒಂದಾಗಿರುವ ಶಿಸ್ತನ್ನು ಆಚರಿಸಲು ಸಾವಿರಾರು ಯೋಗ ಸಂಬಂಧಿತ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಇದು ಲಕ್ಷಾಂತರ ಜನರು ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಪ್ರಪಂಚಗಳ ನಡುವೆ ಸಮತೋಲನವನ್ನು ತರಲು ಸಹಾಯ ಮಾಡುತ್ತದೆ.

5 ಲಕ್ಷ ಯೋಗಪಟುಗಳೊಂದಿಗೆ ಮೋದಿ ಯೋಗ

ವಿಶಾಖಪಟ್ಟಣಂ, ಜೂ.21–ಕರಾವಳಿಯ ವಿಶಾಖಪಟ್ಟಣಂನಲ್ಲಿ ಏರ್ಪಡಿಸಿದ್ದ 11ನೇ ಅಂತರ ರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದರು. ಈ ಕಾರ್ಯಕ್ರಮ ವಿಶ್ವ ದಾಖಲೆಯ ಸ್ಥಾಪನೆಯತ್ತ ದಾಪುಗಾಲಿರಿಸಿದೆ. 'ಒಂದು ಭೂಮಿ–ಒಂದು ಆರೋಗ್ಯಕ್ಕಾಗಿ ಯೋಗ' ಘೋಷದೊಂದಿಗೆ ಪ್ರಾರಂಭವಾದ ಈ ಕಾರ್ಯಕ್ರಮವನ್ನು ಆಂಧ್ರಪ್ರದೇಶ ಸರ್ಕಾರದ ಆಶ್ರಯದಲ್ಲಿ ಯೋಗ ಆಂಧ್ರ 2025 ಎಂಬ ಹೆಸರಿನಲ್ಲಿ ಆಯೋಜಿಸಲಾಗುತ್ತಿದೆ. ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಉಪಮುಖ್ಯಮಂತ್ರಿ ಪವನ್ ಕಲ್ಯಾಣ್, ಸಚಿವ ನಾರಾ ಲೋಕೇಶ್, ಇತರ ಜನಪ್ರತಿನಿಧಿಗಳು, ಕೇಂದ್ರ ಸಚಿವರು, ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಸರ್ಕಾರಿ ನೌಕರರು, ಶಾಲಾ ವಿದ್ಯಾರ್ಥಿಗಳು, ಎನ್‌ಸಿಸಿ, ಎನ್‌ಎಸ್‌ಎಸ್ ಸ್ವಯಂಸೇವಕರು, ಯೋಗ ಸಂಘಗಳು, ನೌಕಾಪಡೆ, ಕೋಸ್ಟ್ ಗಾರ್ಡ್ ಸದಸ್ಯರು ಮತ್ತು ಕೈಗಾರಿಕೋದ್ಯಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಆಂಧ್ರ ಪ್ರದೇಶ ಸರ್ಕಾರವು ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಅದ್ಧೂರಿಯಾಗಿ ಆಚರಿಸುತ್ತಿದ್ದು, ಗಿನ್ನೆಸ್ ವಿಶ್ವ ದಾಖಲೆ ಸೇರಿದಂತೆ ಹಲವು ದಾಖಲೆಗಳನ್ನು ಸ್ಥಾಪಿಸುವ ಗುರಿಯೊಂದಿಗೆ ಈ ಆಚರಣೆಯನ್ನು ವಿಶ್ವದ ಅತಿದೊಡ್ಡ ಯೋಗ ಕೂಟಗಳಲ್ಲಿ ಒಂದೆಂದು ಬಿಂಬಿಸಲಾಗುತ್ತಿದೆ. ಇಂದು ಬೆಳಿಗ್ಗೆ 6 ಗಂಟೆ ಸುಮಾರಿಗೆ ವಿಶಾಖಪಟ್ಟಣಂನ ರಾಮಕೃಷ್ಣ ಬೀಚ್‌ನಿಂದ ಭೋಗಪುರಂವರೆಗಿನ ಸುಮಾರು 26 ಕಿಲೋಮೀಟರ್ ವ್ಯಾಪ್ತಿಯಲ್ಲಿ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಸುಮಾರು 5 ಲಕ್ಷ ಜನರು ಏಕಕಾಲದಲ್ಲಿ ಯೋಗ ಮಾಡಿದರು. 326 ಗೊತ್ತುಪಡಿಸಿದ ವಿಭಾಗಗಳಲ್ಲಿ ತಲಾ ಸುಮಾರು 1,000 ಯೋಗದಲ್ಲಿ ಭಾಗವಹಿಸಿದ್ದರು. ಅಂತೆಯೇ ಯೋಗ ಭಾಗವಹಿಸುವವರನ್ನು ಕಾರ್ಯಕ್ರಮದ ಸ್ಥಳಕ್ಕೆ ಕರೆತರಲು 3,000ಕ್ಕೂ ಹೆಚ್ಚು ಬಸ್‌ಗಳನ್ನು ನಿಯೋಜಿಸಲಾಗಿತ್ತು.

ಬಿಗಿ ಭದ್ರತೆ: ಈ ಬೃಹತ್ ಕಾರ್ಯಕ್ರಮಕ್ಕೆ ಬೃಹತ್ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿದ್ದು, 10,000ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಇಡೀ ಮಾರ್ಗದಲ್ಲಿ 1,200 ಸಿಸಿಟಿವಿ ಕ್ಯಾಮರಾಗಳು ಮತ್ತು ಡ್ರೋನ್ ಮೇಲ್ವಿಚಾರಣೆಯ ಮೂಲಕ ಕಣ್ಗಾವಲು ನಿರ್ವಹಿಸಲಾಗಿತ್ತು. ವಿಶೇಷವಾಗಿ ಪ್ರಧಾನಿಯವರ ಉಪಸ್ಥಿತಿಯ ಹಿನ್ನೆಲೆಯಲ್ಲಿ, ಕಾರ್ಯಕ್ರಮದ ಭದ್ರತೆಯನ್ನು ಸಂಘಟಿಸಲು ಅತ್ಯಾಧುನಿಕ ನಿಯಂತ್ರಣ ಕೊಠಡಿಯನ್ನು ಸಹ ಸ್ಥಾಪಿಸಲಾಗಿತ್ತು.

ಅಕ್ರಮ ಗಣಿಗಾರಿಕೆ ತನಿಖೆ ನನೆಗುದಿಗೆ; ಸಚಿವರ ಬೇಸರ

ನಡೆದಿವೆ. ಅಲ್ಲದೆ, ತಮ್ಮ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ವರದಿ ನೀಡಿದ್ದರೂ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸಿಎಂಗೆ ಪಾಟೀಲ್, 7 ಪುಟಗಳ ಸುದೀರ್ಘ ಪತ್ರ ಬರೆದಿದ್ದಾರೆ. ರಾಜಕಾರಣಿಗಳು ಮತ್ತು ಅಧಿಕಾರಿಗಳ ಅಕ್ರಮದಿಂದ ಸರ್ಕಾರಕ್ಕೆ 1.57 ಲಕ್ಷ ಕೋಟಿ ರೂ. ಆದಾಯ ನಷ್ಟವಾಗಿದೆ. ಅಕ್ರಮ ಗಣಿ ಗಾರಿಕೆಯ ಶೇ.7ರಷ್ಟು ಪ್ರಕರಣ ಮಾತ್ರ ತನಿಖೆಗೆ ಒಳಪಟ್ಟಿದೆ. ಆದರೆ, ಶೇ.92ರಷ್ಟು ಪ್ರಕರಣಗಳು ತನಿಖೆಗೆ ಒಳಪಟ್ಟಿಲ್ಲ. ಅಧಿಕಾರಶಾಹಿಯ ಮನೋಭಾವದಿಂದ ಕೆಲವು ಪ್ರಕರಣಗಳು ತನಿಖೆಯೇ ಆಗಿಲ್ಲ, ಎಸ್‌ಐಟಿಗೆ ವಹಿಸಿದ ಪ್ರಕರಣಗಳಲ್ಲೂ ಪ್ರಗತಿ ಸಾಧಿಸಿಲ್ಲ. ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ 12 ಸಾವಿರಕ್ಕೂ ಹೆಚ್ಚು ಪ್ರಕರಣ ದಾಖಲಾಗಿದ್ದರೂ ಅದರಲ್ಲಿ ಕೇವಲ ಶೇ.7ರಷ್ಟು ಮಾತ್ರ ತನಿಖೆ ನಡೆಯುತ್ತಿವೆ. ಅದರಲ್ಲೂ, ಶೇ.0.2ರಷ್ಟು ತೀರ್ಪು ಬಂದಿದೆ. ಇದಕ್ಕೆ ತಾರ್ಕಿಕ ಅಂತ್ಯ ನೀಡಬೇಕಿದ್ದು, ರಾಜ್ಯದ ಬೊಕ್ಕಸಕ್ಕೆ ಆಗಿರುವ ನಷ್ಟ ಭರಿಸಲು ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ವಸೂಲಿ ಆಯುಕ್ತರನ್ನು ನೇಮಿಸಿ, ಪೊಲೀಸ್ ಇಲಾಖೆಯಡಿ ವಿಶೇಷ ತನಿಖಾ ತಂಡ ರಚನೆ ಮಾಡಬೇಕು ಹಾಗೂ ಆರೋಪಿಗಳಿಗೆ ತ್ವರಿತಗತಿಯಲ್ಲಿ ಶಿಕ್ಷೆ ವಿಧಿಸಲು ವಿಶೇಷ ಕೋರ್ಟ್ ಸ್ಥಾಪಿಸುವಂತೆ ಒತ್ತಾಯಿಸಿದ್ದಾರೆ. ಅಕ್ರಮ ಗಣಿಗಾರಿಕೆ ವಿರುದ್ಧ ನಾವು 15 ವರ್ಷಗಳ ಹಿಂದೆ ಬೆಂಗಳೂರಿನಿಂದ ಬಳ್ಳಾರಿಗೆ 302 ಕಿಲೋ ಮೀಟರ್ ಪಾದಯಾತ್ರೆ ಮಾಡಿದ್ದೆವು. ಇಷ್ಟಾದರೂ ಯಾವುದೇ ಪರಿಣಾಮ ಬೀರಿಲ್ಲ. 2013ರಿಂದ 15ರವರೆಗೆ ನಿಮ್ಮ ನೇತೃತ್ವದಲ್ಲೇ ಕಾಂಗ್ರೆಸ್ ಅಧಿಕಾರದಲ್ಲಿತ್ತು. ಆ ವೇಳೆ ನೀವು ನನ್ನ ಅಧ್ಯಕ್ಷತೆಯಲ್ಲಿ ಅಕ್ರಮ ಗಣಿಗಾರಿಕೆ ಪತ್ತೆ ಹಚ್ಚಿ ವರದಿ ನೀಡಲು ಸಚಿವ ಸಂಪುಟ ಉಪಸಮಿತಿ ರಚಿಸಿದ್ದೀರಿ. ತನಿಖಾ ಸಂಸ್ಥೆಗಳು ನಡೆಸುತ್ತಿರುವ ತನಿಖೆ ಭಾಗ ಹೊರತುಪಡಿಸಿ ನಾವು ವರದಿ ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಹಗರಣಕ್ಕೆ ಸಂಬಂಧಿಸಿದಂತೆ 9 ಪ್ರಕರಣಗಳನ್ನು ಸಿಬಿಐಗೆ ವಹಿಸಲಾಗಿತ್ತು. ಅದರಲ್ಲಿ 3ರಲ್ಲಿ ತನಿಖೆ ನಡೆಸಿ ಉಳಿದ 6ರಲ್ಲಿ ತನಿಖೆ ನಡೆಸಲಾಗದು ಎಂದು ಹಿಂತಿರುಗಿಸಲಾಗಿದೆ. ಹಗರಣಗಳ ಬಗ್ಗೆ ಎಸ್‌ಐಟಿ ರಚನೆ ಮಾಡಿ ತನಿಖೆಗೆ ವಹಿಸಿದ್ದರೂ ಬಹುಭಾಗ ತನಿಖೆಯೇ ಆಗಿಲ್ಲ. 2ನೇ ಬಾರಿ ನಿಮ್ಮ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದರೂ ನಮ್ಮ ಹೋರಾಟಕ್ಕೆ ಫಲ ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅಕ್ರಮ ಗಣಿಗಾರಿಕೆ ತನಿಖೆಯಲ್ಲಿ ಅಧಿಕಾರಶಾಹಿಯ ವಿಳಂಬ ನೀತಿ ಹಾಗೂ ನಡಾವಳಿಗಳು ರಾಜ್ಯ ಬೊಕ್ಕಸಕ್ಕೆ ಭಾರೀ ನಷ್ಟ ಉಂಟು ಮಾಡಿದ್ದು, ಸಂಪುಟ ಉಪಸಮಿತಿಯ ವರದಿಯೇ ಒಂದು ರೀತಿ ಕುಹಕಕ್ಕೆ ಒಳಗಾಗಿದೆ. ಈ ಕುರಿತು ಗಮನಹರಿಸಿ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಮುಖ್ಯಮಂತ್ರಿ ಅವರನ್ನು ಆಗ್ರಹಿಸಿದ್ದಾರೆ.

ನಾನು ಸತ್ಯ ಹೇಳಿದ್ದೇನೆ

ಹಂಚಿಕೆ ನನ್ನ ಕ್ಷೇತ್ರದಲ್ಲಿ ಮಾತ್ರ ನಡೆದಿಲ್ಲ. ಅನೇಕ ಕಡೆಗಳಲ್ಲಿ ನಡೆದಿದೆ. ಗ್ರಾಪಂ ಮಟ್ಟದಲ್ಲಿ ಇಂತಹ ಘಟನೆಗಳು ನಡೆದಿರಬಹುದು ಮತ್ತು ಅದರ ಬಗ್ಗೆ ತಮಗೆ ತಿಳಿದಿಲ್ಲ ಎಂಬ ವಸತಿ ಸಚಿವರ ಸ್ಪಷ್ಟನೆ ಬಗ್ಗೆ ಪ್ರತಿಕ್ರಿಯಿಸಿದ ಪಾಟೀಲ್, ಅವರು (ಸಚಿವರು) ಅದರ ಬಗ್ಗೆ ತನಿಖೆ ಮಾಡಲಿ ಎಂದರು. ಬಿ.ಆರ್.ಪಾಟೀಲ್ ಅವರ ಹೇಳಿಕೆ ಪ್ರತಿಪಕ್ಷ ಬಿಜೆಪಿಗೆ ದೊಡ್ಡ ಅಸ್ತ್ರ ಒದಗಿಸಿದ್ದು, ಈ ವಿಚಾರದಲ್ಲಿ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಬಿಜೆಪಿ ನಾಯಕರು ಮುಗಿಬಿದ್ದಿದ್ದಾರೆ. ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆ ಶಿವಕುಮಾರ್, ಆಡಿಯೋ ಕ್ಲಿಪ್ ವೈರಲ್ ಆಗಿದ್ದು, ಯಾವುದೇ ಕಾರಣಕ್ಕೂ ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಪಾಟೀಲ್ ಏನು ಹೇಳಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಈ ವಿಚಾರ ಸಿಎಂ ಗಮನಕ್ಕೆ ಬಂದಿದೆ. ಅವರು ಕ್ರಮ ತೆಗೆದುಕೊಳ್ಳುತ್ತಾರೆ. ಪಾರದರ್ಶಕವಾಗಿ ಮನೆ ಮಂಜೂರಾತಿ ಆಗುತ್ತಿರುವಾಗ ಫಲಾನುಭವಿಗಳು ಹೇಗೆ ಹಣ ಪಾವತಿಸುತ್ತಾರೆ. ಪಂಚಾಯಿತಿ, ಸ್ಥಳೀಯ ಸಂಸ್ಥೆಗಳೇ ಎಂದು ಪ್ರಶ್ನಿಸಿದ ಅವರು, ಈ ಹಣದ ವಿಚಾರ ಸರ್ಕಾರದಲ್ಲಿರುವ ಸಚಿವರಿಗೆ ಹೇಗೆ ಬರುತ್ತದೆ, ಯಾವ ಉದ್ದೇಶದಿಂದ ಹೀಗೆ ಮಾತನಾಡಿದ್ದಾರೆ ಎಂಬುದು ಗೊತ್ತಿಲ್ಲ ಎಂದರು.

ಕೌನ್ಸಿಲಿಂಗ್ ಮತ್ತಷ್ಟು ವಿಳಂಬ

ಹೊರತುಪಡಿಸಿದರೆ ಇತರೆ ಕೋರ್ಸ್‌ಗಳಲ್ಲಿ ಲಭ್ಯವಿರುವ ಸೀಟುಗಳ ಪಟ್ಟಿಯೂ ಅಂತಿಮಗೊಂಡಿಲ್ಲ. ಎಂಜಿನಿಯರಿಂಗ್‌ನಲ್ಲಿ ಲಭ್ಯವಿರುವ 1.35 ಲಕ್ಷ ಸೀಟುಗಳ ಕರಡು ಪಟ್ಟಿಯನ್ನು ಬಿಡುಗಡೆ ಮಾಡಿದೆ. ಆದರೆ, ಯೋಗ, ನ್ಯಾಚುರೋಪಥಿ, ಬಿ.ಎಸ್‌ಸಿ ಕೃಷಿ, ಬಿ.ಎಸ್‌ಸಿ ನರ್ಸಿಂಗ್ ಕೋರ್ಸ್‌ಗಳ ಸೀಟುಗಳ ಪಟ್ಟಿಯೂ ಪ್ರಕಟವಾಗಿಲ್ಲ. ವೈದ್ಯಕೀಯ ಸೀಟುಗಳ ಪಟ್ಟಿಗಾಗಿ ಕಾಯುತ್ತಿದ್ದೇವೆ. ಪಟ್ಟಿ ಪ್ರಕಟವಾದ ತಕ್ಷಣ ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆ ಮಾಡಲಾಗುತ್ತದೆ. ನಂತರ ಒಂದೆರಡು ದಿನಗಳಲ್ಲೇ ಸಿಇಟಿ ಕೌನ್ಸೆಲಿಂಗ್ ಆರಂಭಿಸಲಾಗುವುದು. ಇದಕ್ಕೆಲ್ಲ ವಾರಕ್ಕೂ ಹೆಚ್ಚು ಸಮಯ ಬೇಕಾಗುತ್ತದೆ ಎಂದು ಕೆಇಎ ಇಡಿ ಪ್ರಸನ್ನ ಹೇಳಿದರು.

‘ಪಯಣ’ದಲ್ಲಿ ಅಂತರರಾಷ್ಟ್ರೀಯ ಯೋಗ ದಿನ ಆಚರಣೆ

ಶಾಂತಿ-ಆರೋಗ್ಯ ಮರಳಿ ಪಡೆಯಲು ಯೋಗ ಸಹಕಾರಿ


● ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದಜೀ ಕಿವಿಮಾತು ● ವಿವಿಧ ಶಾಲಾ-ಕಾಲೇಜು ವಿದ್ಯಾರ್ಥಿಗಳಿಂದ ಯೋಗ ಪ್ರದರ್ಶನ



ಪಯಣ ಕಾರು ಸಂಗ್ರಹಾಲಯದ ಆವರಣದಲ್ಲಿ ವಿಶ್ವ ಯೋಗ ದಿನದ ಅಂಗವಾಗಿ ನಡೆದ ಯೋಗ ಪ್ರದರ್ಶನ.

ಡಾ.ಡಿ.ವೀರೇಂದ್ರ ಹೆಗ್ಗಡೆ ಸಂದೇಶ

ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ.ವೀರೇಂದ್ರ ಹೆಗ್ಗಡೆ ವರ್ಚ್ಯುಯಲ್ ಮೂಲಕ ಮಾತನಾಡಿ, ಯೋಗಕ್ಕೆ ಈಗ ಅಂತಾರಾಷ್ಟ್ರೀಯ ಮಾನ್ಯತೆ ಸಿಕ್ಕಿದೆ. ಪ್ರಪಂಚವೆಲ್ಲ ಒಂದು, ನಾವೆಲ್ಲ ಒಂದೇ ಭೂಮಿಯ ಮಕ್ಕಳು ಎಂಬ ಐಕ್ಯತಾ ಮನೋಭಾವ ಮೂಡುತ್ತಿದೆ. ಯೋಗ ಕೇವಲ ವ್ಯಾಯಾಮವಲ್ಲ, ಯೋಗದಿಂದ ಆಂತರಿಕ ವೈರಾಗ್ಯ ಸಾಧಿಸಬಹುದು. ಯೋಗವು ಯುವಜನಾಂಗವನ್ನು ದುಶ್ಚಟದಿಂದ ದೂರ ಮಾಡಿ ಉತ್ತಮ ಸಮಾಜ ನಿರ್ಮಿಸುವ ಶಕ್ತಿ ಹೊಂದಿದೆ ಎಂದು ಸಂದೇಶ ಸಾರಿದರು.



ಮೈಸೂರು,ಜೂ.21(ಎಂಟಿವೈ)- ಮೈಸೂರು-ಬೆಂಗಳೂರು ಮುಖ್ಯರಸ್ತೆಯಲ್ಲಿರುವ ‘ಪಯಣ’ ಕಾರು ಸಂಗ್ರಹಾಲಯದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಯೋಗ ದಿನ ಕಾರ್ಯಕ್ರಮದಲ್ಲಿ ವಿವಿಧ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಸಾಮೂಹಿಕ ಯೋಗ ಪ್ರದರ್ಶನ ನೀಡಿ ಗಮನ ಸೆಳೆದರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನಗಳ ಮಹಾವಿದ್ಯಾಲಯ ಮತ್ತು ಆಯುಷ್ ಮಂತ್ರಾಲಯದ ಸಹಯೋಗದೊಂದಿಗೆ ಆಯೋಜಿಸಿದ್ದ 11ನೇ ಅಂತಾರಾಷ್ಟ್ರೀಯ ಯೋಗದ ದಿನಾಚರಣೆ ಕಾರ್ಯಕ್ರಮಕ್ಕೆ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಜನ ಆಧುನಿಕ ಜೀವನ ಶೈಲಿಗೆ ಮಾರುಹೋಗುತ್ತಿರುವುದರಿಂದ ಶಾಂತಿ, ನೆಮ್ಮದಿ, ಸಂತೋಷ ಮತ್ತು ಆರೋಗ್ಯ ಕಳೆದುಕೊಳ್ಳುತ್ತಿದ್ದಾರೆ. ಇವುಗಳನ್ನು ಮರಳಿ ಕೊಡುವ ಶಕ್ತಿ ಯೋಗಕ್ಕಿದೆ. ಆ ಕಾರಣದಿಂದ ಎಲ್ಲರೂ ಯೋಗಾಭ್ಯಾಸ ಮಾಡಬೇಕು. ಆ ಮೂಲಕ ಆರೋಗ್ಯವಂತರಾಗಬೇಕು ಎಂದು ಸಲಹೆ ನೀಡಿದರು.

ಯುವ ಜನಾಂಗ ಮೊಬೈಲ್, ಟಿವಿ, ಗ್ಯಾಜೆಟ್ ಸೇರಿದಂತೆ ವಿವಿಧ ಆಧುನಿಕ ಮಾಧ್ಯಮಗಳಿಗೆ ದಾಸರಾಗಿ ಮಾನಸಿಕ ಶಾಂತಿ ಕಳೆದುಕೊಳ್ಳುತ್ತಿದೆ. ಮನುಷ್ಯ ತನ್ನ ಜೀವನವನ್ನು ನಿರಂತರವಾಗಿ ಆನಂದಮಯ, ಶಾಂತಿಯುತವಾಗಿ ಕಳೆಯಬೇಕಾದರೆ ಯೋಗದ ಮೊರೆ ಹೋಗಬೇಕು. ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಅರ್ಧ ಗಂಟೆ ಕ್ರಮಬದ್ಧವಾಗಿ ಯೋಗಾಸನ ಮಾಡಿದರೆ ನಮ್ಮ ದೇಹದಲ್ಲಿ ಬದಲಾವಣೆ ಕಾಣಬಹುದು. ದೈಹಿಕ ಆರೋಗ್ಯದೊಂದಿಗೆ ಮಾನಸಿಕ ಶಾಂತಿ ಪಡೆಯಬಹುದು. ಈ ನಿಟ್ಟಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಶಿಕ್ಷಣ ಸಂಸ್ಥೆಗಳು ಈ ಬೃಹತ್ ಯೋಗ ಕಾರ್ಯಕ್ರಮ ಏರ್ಪಡಿಸಿ ಜನರಲ್ಲಿ ಜಾಗೃತಿ ಮೂಡಿಸುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಕೆ.ಶಿವಕುಮಾರ್ ಮಾತನಾಡಿ, ಮೈಸೂರು ಯೋಗಕ್ಕೆ ಪ್ರಸಿದ್ಧಿಯಾಗಿದೆ, ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಿಂದಲೂ ಯೋಗಕ್ಕೆ ಮೈಸೂರಿನ ಕೊಡುಗೆ ಅಪಾರವಾಗಿದೆ. ಪ್ರಧಾನಿ ನರೇಂದ್ರ ಮೋದಿ ಯೋಗಕ್ಕೆ ಪ್ರೋತ್ಸಾಹ ನೀಡುವ ಮೂಲಕ ಅಂತಾರಾಷ್ಟ್ರೀಯ ಮಾನ್ಯತೆ ದೊರಕುವಂತೆ ಮಾಡಿದ್ದಾರೆ. ದೇಶ, ಭಾಷೆ ಪ್ರಾಂತ್ಯ ಮೀರಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಇಂದು ಯೋಗ ಬೆಳೆದಿದೆ ಎಂದು ತಿಳಿಸಿದರು.

ಇದೇ ವೇಳೆ ಯೋಗಪಟು ಕು.ಚಿನ್ಮಯಿ ಅವರಿಗೆ ಯೋಗರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಡಾ.ಮಹಾರುದ್ರಸ್ವಾಮಿ ಅವರು ಬರೆದಿರುವ ‘ಪ್ರಿನ್ಸಿಪಲ್ ಆಫ್ ಯೋಗ ಪುಸ್ತಕ’ ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು, ಯೋಗ ಮತ್ತು ನೈತಿಕ ಶಿಕ್ಷಣ ಯೋಜನೆ ನಿರ್ದೇಶಕ ಡಾ.ಬಿ.ಶಶಿಕಾಂತ್ ಜೈನ್, ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸಾ ಮತ್ತು ಯೋಗ ವಿಜ್ಞಾನಗಳ ಮಹಾ ವಿದ್ಯಾಲಯದ ಪ್ರಾಂಶುಪಾಲ ಡಾ.ಪ್ರಶಾಂತ್ ಶೆಟ್ಟಿ, ಕ್ಷೇಮವನದ ಮುಖ್ಯಸ್ಥ ಡಾ.ನರೇಂದ್ರ ಕೆ.ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯಲ್ಲಿ ಯೋಗ ದಿನ

ಆಧುನಿಕ ತಂತ್ರಜ್ಞಾನದಿಂದ ಮನುಷ್ಯನ ಮೇಲೆ ಎದುರಾಗುವ ದುಷ್ಪರಿಣಾಮ ಎದುರಿಸಲು ಯೋಗ ಬ್ರಹ್ಮಾಸ್ತ್ರ; ಯೋಗಪಟು ಶಶಿರೇಖಾ ಅಭಿಪ್ರಾಯ



ಮೈಸೂರಿನ ಕನಕದಾಸನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಯೋಗಪಟು ಶಶಿರೇಖಾ ಉದ್ಘಾಟಿಸಿದರು.

ಮೈಸೂರು, ಜೂ.21(ಬಿಎಲ್‌ಯು)- ಆಧುನಿಕ ತಂತ್ರಜ್ಞಾನದಿಂದ ಮನುಷ್ಯನ ದೇಹದ ಮೇಲೆ ವ್ಯಕ್ತವಾಗುವ ದುಷ್ಪರಿಣಾಮಗಳನ್ನು ಎದುರಿಸಲು ಯೋಗ ಬ್ರಹ್ಮಾಸ್ತ್ರವಾಗಿದೆ ಎಂದು ಯೋಗಪಟು ಶಶಿರೇಖಾ ಅಭಿಪ್ರಾಯಪಟ್ಟರು.


ಮೈಸೂರಿನ ಕನಕದಾಸನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆ ಆವರಣದಲ್ಲಿ ಆಯೋಜಿಸಿದ್ದ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸ್ವಾಸ್ಥ್ಯ ಆರೋಗ್ಯ ಕಾಪಾಡಲು ಯೋಗ ರಾಮಬಾಣವಾಗಿರುವ ಹಿನ್ನೆಲೆಯಲ್ಲಿ ವಯಸ್ಸಿನ ಭೇದವಿಲ್ಲದೆ ಪ್ರತಿಯೊಬ್ಬರು ಯೋಗವನ್ನು ಅಪ್ಪಿ, ಒಪ್ಪಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

> “ಭಾರತೀಯ ಪರಂಪರೆಯ ಹೆಗ್ಗುರುತಾಗಿ ಇಂದು ವಿಶ್ವ ಮಾನ್ಯವಾಗಿರುವ ಯೋಗ ನಮ್ಮ ದೇಶದ ಹೆಮ್ಮೆಯ ಸಂಕೇತವಾಗಿದೆ. ಪ್ರತಿಯೊಬ್ಬರು ಯೋಗವನ್ನು ಜೀವನ ಕ್ರಮದ ಪ್ರಮುಖ ಭಾಗ ಎಂದು ಪರಿಗಣಿಸಬೇಕು. ಈ ಹಿನ್ನೆಲೆ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಯೋಗ ಕಲಿಕೆಗೆ ಉತ್ತೇಜನ ನೀಡಬೇಕು.
>
> -ಶಶಿರೇಖಾ, ಯೋಗಪಟು

ಯೋಗವನ್ನು ಸಾಕಾರಗೊಳಿಸಿಕೊಂಡರೆ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಸಮತೋಲನವನ್ನು ಕಾಯ್ದುಕೊಳ್ಳಬಹುದು. ಈ ಮೂಲಕ ಉತ್ತಮ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಕೊಡುಗೆ ನೀಡಬಹುದು ಎಂದು ಶಶಿರೇಖಾ ಹೇಳಿದರು.

ವಿಶ್ವದಲ್ಲಿ ಇಂದು ಯೋಗ ವ್ಯಾಪಕವಾಗಿ ಪಸರಿಸುತ್ತಿದೆ. ಯೋಗ ಮಾಡುವುದರಿಂದ ಎಂತಹ ಬಾಧೆಯಿಂದಲೂ ಮುಕ್ತವಾಗಬಹುದು ಎಂಬುದನ್ನು ವಿಶ್ವದ ಮನುಕುಲ ಅರಿತಿದೆ. ಈ ಕಾರಣದಿಂದ ಯೋಗ ಜೀವನದ ಅವಿಭಾಜ್ಯ ಅಂಗ ಎಂದು ವಿಶ್ವದ ರಾಷ್ಟ್ರಗಳು ಪರಿಗಣಿಸಿವೆ. ಯೋಗ ಮತ್ತು ಪ್ರಾಣಾಯಾಮಗಳಿಗೆ ಭಾರತ ಯೋಗ ಉಗಮ ಸ್ಥಾನವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಆರ್.ರಘು, ಪ್ರಾಂಶುಪಾಲರಾದ ಎಂ.ಎನ್.ಮಹೇಂದ್ರ, ಉಪಪ್ರಾಂಶುಪಾಲರಾದ ಶೀನಾ ಕೆ.ಗುರ್ನಾನಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಯೋಗ ದಿನಾಚರಣೆ



ಯೋಗ ದಿನಾಚರಣೆ ಅಂಗವಾಗಿ ಮೈಸೂರಿನ ಅವಧೂತ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಏರ್ಪಡಿಸಿದ್ದ ಯೋಗ ಕಾರ್ಯಕ್ರಮವನ್ನು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಉದ್ಘಾಟಿಸಿದರು. ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು. ಮೈಸೂರಿನ ವಿವಿಧ ಶಾಲೆಯ ಮಕ್ಕಳು ಈ ಸಂದರ್ಭದಲ್ಲಿ ಯೋಗ ಪ್ರದರ್ಶಿಸಿದರು.

ಮೂವರಿಗೆ ಯೋಗಾಚಾರ್ಯ; ಒಬ್ಬರಿಗೆ ಯೋಗ ಭೂಷಣ ಪ್ರಶಸ್ತಿ ಪ್ರದಾನ



ಯೋಗ ಶಿಕ್ಷಕ ತರಬೇತಿ ಪಡೆದ ಪಿ.ಮರಿಸ್ವಾಮಿ, ಎಚ್.ಆರ್.ಸುಮಾರಾಣಿ, ಎನ್.ದಿವ್ಯಶ್ರೀ ಅವರಿಗೆ ಯೋಗಾಚಾರ್ಯ, ಪ್ರಾಂಶುಪಾಲ ಬಿ.ಜಿ.ವಿಜಯ ಕುಮಾರ್ ಅವರಿಗೆ ಯೋಗಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಜೂ.21- ರಾಮಕೃಷ್ಣ ನಗರದ ಪರಮಹಂಸ ಯೋಗ ಮಹಾ ವಿದ್ಯಾಲಯದಲ್ಲಿ ಶನಿವಾರ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮೂವರಿಗೆ ಯೋಗಾಚಾರ್ಯ, ಒಬ್ಬರಿಗೆ ಯೋಗ ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು.

14ನೇ ತಂಡದ ಅಂತಾರಾಷ್ಟ್ರೀಯ ಯೋಗ ಶಿಕ್ಷಕ ತರಬೇತಿ ಪಡೆದ ಪಿ.ಮರಿಸ್ವಾಮಿ, ಎಚ್.ಆರ್.ಸುಮಾರಾಣಿ, ಎನ್.ದಿವ್ಯಶ್ರೀ ಅವರಿಗೆ ಯೋಗಾಚಾರ್ಯ, ಪ್ರಾಂಶುಪಾಲ ಬಿ.ಜಿ.ವಿಜಯಕುಮಾರ್ ಅವರಿಗೆ ಯೋಗಭೂಷಣ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಪ್ರದಾನ ಮಾಡಿದರು.

ಸಂಸ್ಥೆಯ ಅಧ್ಯಕ್ಷ ಶಿವಪ್ರಕಾಶ್ ಯೋಗದ ಮಹತ್ವ ತಿಳಿಸಿಕೊಟ್ಟರು. ಮೈಸೂರು ಯೋಗ ಅಸೋಸಿಯೇಷನ್ ಉಪಾಧ್ಯಕ್ಷ ಎನ್.ಪಶುಪತಿ ಮಾತನಾಡಿದರು.

ಸಂಸ್ಥೆಯ ಸಂಯೋಜಕಿ ಆರ್. ಭಾವನಾ, ಕಾವ್ಯಾ ಇದ್ದರು. ಚಂದ್ರಶೇಖರ್ ಪ್ರಾರ್ಥಿಸಿದರು. ಇದೇ ಸಂದರ್ಭದಲ್ಲಿ 15ನೇ ತಂಡದ ತರಬೇತಿಗೆ ಚಾಲನೆ ನೀಡಲಾಯಿತು. ಯೋಗ ತರಬೇತಿ ಪಡೆಯುವವರು ಶಿವಪ್ರಕಾಶ್, ಮೊ.70901 57993 ಅನ್ನು ಸಂಪರ್ಕಿಸಬಹುದು.

ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಯೋಗ ಪ್ರದರ್ಶನ...





ಮೈಸೂರು ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರ ಮತ್ತು ಆರ್‌ಕೆವಿಕೆ ಪಿಯು ಕಾಲೇಜಲ್ಲಿ ‘ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ’ ಘೋಷವಾಕ್ಯದೊಂದಿಗೆ ಯೋಗ ಶಿಕ್ಷಕರು, ತರಬೇತುದಾರ ಗಿರೀಶ್ ಮಾರ್ಗದರ್ಶನದಲ್ಲಿ ಶಾಲಾ-ಕಾಲೇಜು ಮಕ್ಕಳು ಮತ್ತು ಶಿಕ್ಷಕ ವೃಂದ ಯೋಗದ ವಿವಿಧ ಆಸನಗಳನ್ನು ಪ್ರದರ್ಶಿಸುವ ಮೂಲಕ ವಿಶ್ವಯೋಗ ದಿನವನ್ನು ಆಚರಿಸಲಾಯಿತು. ಈ ವೇಳೆ ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಉಪಾಧ್ಯಕ್ಷ ಕೆ.ಕೆಂಪಲಿಂಗರಾಜು, ಖಜಾಂಚಿ ಹೆಚ್.ಜಿ.ರಮೇಶ್, ಕಾರ್ಯ ನಿರ್ವಾಹಕ ಅಧಿಕಾರಿ ಪ್ರೊ.ಜಿ.ಚಂದ್ರಶೇಖರ್, ಪ್ರೌಢಶಾಲಾ ಮುಖ್ಯೋಪಾಧ್ಯಾಯ ವಿಶ್ವನಾಥ್, ಪ್ರಾಥಮಿಕ ಶಾಲೆ ಮುಖ್ಯೋಪಾಧ್ಯಾಯಿನಿ ವೀಣಾ ಕೆ.ಹೆಗಡೆ, ಪ್ರಣಾಮ್ಯ ಎಜುಕೇಷನ್, ಚಾರಿಟೆಬಲ್ ಟ್ರಸ್ಟ್‌ನ ಅಧ್ಯಕ್ಷೆ ಸವಿತಾ, ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ಶಿಕ್ಷಕ-ಶಿಕ್ಷಕೇತರರು ಉಪಸ್ಥಿತರಿದ್ದರು.

ಯೋಗ ಕುರಿತು ಚಿತ್ರ-ಲೇಖನ ಪ್ರದರ್ಶನ

ಮೈಸೂರು, ಜೂ.21- ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ನಡೆಯುವ ರಾಜ್ಯಮಟ್ಟದ ದ್ವಿತೀಯ ಯೋಗ ಸಮ್ಮೇಳನ-2025 ರಲ್ಲಿ ಲೇಖಕ ಕಾಳಿಹುಂಡಿ ಶಿವಕುಮಾರ್ ಸಂಗ್ರಹಿಸಿರುವ ಪತ್ರಿಕೆಗಳಲ್ಲಿ ಯೋಗ ಶೀರ್ಷಿಕೆಯಡಿಯಲ್ಲಿ ಬಂದಿರುವ ಯೋಗದ ಕುರಿತಾದ ಚಿತ್ರ, ಲೇಖನಗಳು, ಯೋಗದ ವಿವಿಧ ಭಂಗಿಗಳು, ವಿವಿಧ ಸ್ಥಳಗಳಲ್ಲಿ ನಡೆದಿರುವ ಯೋಗ ಕುರಿತ ಅಪರೂಪದ ಮಾಹಿತಿಗಳ ಪ್ರದರ್ಶನವನ್ನು ಜೂ.22ರ ಭಾನುವಾರ ಬೆಳಿಗ್ಗೆ 9.30 ರಿಂದ ಸಂಜೆ 7 ರವರೆಗೆ ಮೈಸೂರಿನ ಕರ್ನಾಟಕ ಕಲಾಮಂದಿರದ ಆವರಣದಲ್ಲಿ ಪ್ರದರ್ಶಿಸಲಿದ್ದಾರೆ. ಲೇಖಕ, ಸಂಘಟಕ, ಯೋಗಪಟು ಎನ್. ಅನಂತು ಸಾರಥ್ಯದಲ್ಲಿ ಇದನ್ನು ಆಯೋಜಿಸಿದ್ದು, ಈ ಸಮ್ಮೇಳನದಲ್ಲಿ ಭಾಗವಹಿಸುವ ಸಾರ್ವಜನಿಕರು, ಯೋಗಾಸಕ್ತರು ಇವರ ಪ್ರದರ್ಶನವನ್ನು ವೀಕ್ಷಣೆ ಮಾಡಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗಾಗಿ ಮೊ.ನಂ.9844883581 ಅನ್ನು ಸಂಪರ್ಕಿಸಲು ತಿಳಿಸಿದ್ದಾರೆ.

ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಲ್ಲಿ ಯೋಗ ದಿನಾಚರಣೆ




ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಲ್ಲಿ ಯೋಗ ದಿನಾಚರಣೆ.

ಮೈಸೂರು, ಜೂ.21- ಮೈಸೂರು ಸರ್ಕಾರಿ ನ್ಯಾಚುರೋಪಥಿ, ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಭಾವಪೂರ್ಣವಾಗಿ ಶನಿವಾರ ಆಚರಿಸಲಾಯಿತು. ಪ್ರಾಚಾರ್ಯ ಡಾ.ಬಿ.ಸದಾಶಿವೇಗೌಡ, ಉಪಪ್ರಾಚಾರ್ಯರಾದ ಪ್ರೊ.ಶೋಭಾ ಶಂಕರ್ ಅವರ ಮಾರ್ಗದರ್ಶನದಲ್ಲಿ ಹಾಗೂ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ ಬೆಂಬಲದೊಂದಿಗೆ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನಡೆಸಲಾಯಿತು. ಯೋಗದ ಮಹತ್ವವನ್ನು ಎತ್ತಿ ಹಿಡಿಯುವ ಸಾಮೂಹಿಕ ಯೋಗ ಪ್ರದರ್ಶನಗಳು, ಆರೋಗ್ಯ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರಮುಖ ಅಧ್ಯಾಪಕರಾದ ಡಾ.ಸುಮಾ, ಡಾ.ಸುಮನಾ, ಡಾ.ಶಿಲ್ಪಾ, 400ಕ್ಕೂ ಹೆಚ್ಚು ವಿದ್ಯಾರ್ಥಿಗಳು, ರಾಷ್ಟ್ರೀಯ ಸೇವಾ ಯೋಜನೆ, ಅನತುಂಗ ಗ್ರಾಮಾಭಿವೃದ್ಧಿ ಅಭಿಯಾನದ ಸ್ವಯಂಸೇವಕರು, ವಿದ್ಯಾರ್ಥಿಗಳು ಹಾಗೂ ಕಾಲೇಜು ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ದೇಶ - ವಿದೇಶ

ಇರಾನ್‌ನ ಹಮಾಸ್ ಸಂಯೋಜಕನ ಹತ್ಯೆ: ಇಸ್ರೇಲ್ ಸೇನೆ ಮಾಹಿತಿ



ಇಸ್ರೇಲ್: ಇಸ್ರೇಲ್ ಸೇನೆ ತೆಹ್ರಾನ್‌ನ ದಕ್ಷಿಣದಲ್ಲಿರುವ ಕೋಮ್ ಮೇಲೆ ನಡೆಸಿದ ದಾಳಿಯಲ್ಲಿ ಪ್ಯಾಲೆಸ್ಟೀನಿಯನ್ ಉಗ್ರಗಾಮಿ ಗುಂಪು ಹಮಾಸ್ ಜೊತೆ ಮಿಲಿಟರಿ ಸಮನ್ವಯದ ಉಸ್ತುವಾರಿ ವಹಿಸಿದ್ದ ಉನ್ನತ ಇರಾನಿನ ಕಮಾಂಡರ್ ಒಬ್ಬರನ್ನು ಕೊಂದಿದೆ ಎಂದು ಹೇಳಿದೆ. ಇಸ್ರೇಲ್ ಕುಡ್ಸ್ ಫೋರ್ಸ್‌ನ ಪ್ಯಾಲೆಸ್ಟೈನ್ ಕಾರ್ಪ್ಸ್‌ನ ಕಮಾಂಡರ್ ಮತ್ತು ಇರಾನ್ ಆಡಳಿತ ಮತ್ತು ಹಮಾಸ್ ಭಯೋತ್ಪಾದಕ ಸಂಘಟನೆಯ ನಡುವಿನ ಪ್ರಮುಖ ಸಂಯೋಜಕ ಸಯೀದ್ ಇಜಾದಿ ಅವರನ್ನು ಕೋಮ್ ಪ್ರದೇಶದಲ್ಲಿ ಇಸ್ರೇಲ್ ಫೈಟರ್ ಜೆಟ್‌ಗಳು ಹೊಡೆದುರುಳಿಸಿ ನಿರ್ಮೂಲನೆ ಮಾಡಿದೆ ಎಂದು ಸೇನೆ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಕುಡ್ಸ್ ಫೋರ್ಸ್ ಇರಾನ್‌ನ ಪ್ರಬಲ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ನ ವಿದೇಶಿ ಕಾರ್ಯಾಚರಣೆ ವಿಭಾಗವಾಗಿದೆ. ಇಜಾದಿ ಲೆಬನಾನ್‌ನಿಂದ ಕಾರ್ಯನಿರ್ವಹಿಸುತ್ತಿರುವ ಹಮಾಸ್ ಪಡೆಗಳನ್ನು ನಿರ್ದೇಶಿಸಿದ್ದಾರೆ ಮತ್ತು ಗಾಜಾದಲ್ಲಿ ಹಮಾಸ್ ತನ್ನ ಸಶಸ್ತ್ರ ವಿಭಾಗವನ್ನು ಪುನರ್ನಿರ್ಮಿಸಲು ಸಹಾಯ ಮಾಡಿದ್ದಾರೆ ಎಂದು ಸೇನೆ ಹೇಳಿದೆ.

ಹಿರಿಯ ನಾಗರಿಕರು, ವಿಧವೆಯರು, ಅಂಗವಿಕಲರಿಗೆ ಪಿಂಚಣಿ ಹೆಚ್ಚಳ



ಪಾಟ್ನಾ: ವಿಧಾನಸಭೆ ಚುನಾವಣೆಗೂ ಮುನ್ನ ಬಿಹಾರ ಮುಖ್ಯಮಂತ್ರಿ ನಿತೀಶ್‌ಕುಮಾರ್ ಹಿರಿಯ ನಾಗರಿಕರು, ವಿಧವೆಯರು ಮತ್ತು ಅಂಗವಿಕಲರಿಗೆ ಸಿಹಿ ಸುದ್ದಿ ನೀಡಿದ್ದು, ಪಿಂಚಣಿಯನ್ನು 700 ರೂ. ಹೆಚ್ಚಿಸಿದ್ದಾರೆ. ಈ ಪಿಂಚಣಿ ಹೆಚ್ಚಳ ಜುಲೈನಿಂದಲೇ ಜಾರಿಗೆ ಬರಲಿದ್ದು, ಮುಂದಿನ ತಿಂಗಳಿಂದ ಫಲಾನುಭವಿಗಳಿಗೆ 1,100 ರೂ.ಗಳ ಪಿಂಚಣಿ ಸಿಗಲಿದೆ ಎಂದು ತಿಳಿಸಿದ್ದಾರೆ. ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಯಡಿಯಲ್ಲಿ ಎಲ್ಲಾ ವೃದ್ಧರು, ಅಂಗವಿಕಲರು ಮತ್ತು ವಿಧವೆಯರು ಈಗ ಪ್ರತಿ ತಿಂಗಳು 400 ರೂ.ಗಳ ಬದಲಿಗೆ 1,100 ರೂ.ಗಳ ಪಿಂಚಣಿ ಪಡೆಯುತ್ತಾರೆ ಎಂದು ನಿಮಗೆ ತಿಳಿಸಲು ನನಗೆ ಸಂತೋಷವಾಗುತ್ತಿದೆ. ಜುಲೈನಿಂದ ಎಲ್ಲಾ ಫಲಾನುಭವಿಗಳಿಗೆ 1100 ಪಿಂಚಣಿ ಸಿಗಲಿದೆ ಎಂದು ನಿತೀಶ್ ಕುಮಾರ್ Xನಲ್ಲಿ ಬರೆದುಕೊಂಡಿದ್ದಾರೆ.

ಪ್ರತಿ ತಿಂಗಳ 10ನೇ ದಿನದಂದು ಎಲ್ಲಾ ಫಲಾನುಭವಿಗಳ ಖಾತೆಗಳಿಗೆ ಪಿಂಚಣಿ ಮೊತ್ತವನ್ನು ಹಾಕಲಾಗುವುದು ಎಂದು ಹೇಳಿದ್ದಾರೆ. ಸರ್ಕಾರದ ಈ ನಿರ್ಧಾರವು ಫಲಾನುಭವಿಗಳಿಗೆ ಸಹಾಯವಾಗಲಿದೆ ಮತ್ತು ಅವರು ಗೌರವಾನ್ವಿತ ಜೀವನ ನಡೆಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಬಂದಾನ ಪ್ರಿಯಾಶಿ ತಿಳಿಸಿದ್ದಾರೆ.

ಇರಾನ್‌ನಿಂದ 800ಕ್ಕೂ ಹೆಚ್ಚು ಭಾರತೀಯರು ವಾಪಸ್



ನವದೆಹಲಿ: ‘ಆಪರೇಷನ್ ಸಿಂಧೂ’ ಕಾರ್ಯಾಚರಣೆ ಮೂಲಕ ಇರಾನ್‌ನಿಂದ ಈವರೆಗೂ 800ಕ್ಕೂ ಹೆಚ್ಚು ಭಾರತೀಯರನ್ನು ಕರೆತರಲಾಗಿದೆ. ವಿದ್ಯಾರ್ಥಿಗಳೂ ಸೇರಿದಂತೆ 800ಕ್ಕೂ ಹೆಚ್ಚು ನಾಗರಿಕರನ್ನು ಶುಕ್ರವಾರ ತಡರಾತ್ರಿ ಮತ್ತು ಶನಿವಾರ ಸಂಜೆವರೆಗೂ ದೆಹಲಿಗೆ ಕರೆತರಲಾಗಿದೆ ಎಂದು ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್ ಎಕ್ಸ್‌ನಲ್ಲಿ ತಿಳಿಸಿದ್ದಾರೆ. ಶನಿವಾರ ಸಂಜೆ 4.30ರ ಸುಮಾರಿಗೆ ಇರಾನ್‌ನ ಮಶ್‌ಹದ್‌ನಿಂದ 310 ನಾಗರಿಕರನ್ನು ಕರೆತಂದ ವಿಮಾನ ದೆಹಲಿ ವಿಮಾನ ನಿಲ್ದಾಣದಲ್ಲಿ ಇಳಿಯಿತು. ಈ ಮೂಲಕ ಶನಿವಾರ ಸಂಜೆವರೆಗೆ 827 ಮಂದಿಯನ್ನು ವಾಪಸ್ ಕರೆತರಲಾಗಿದೆ ಎಂದು ಹೇಳಿದ್ದಾರೆ. ‘ಆಪರೇಷನ್ ಸಿಂಧೂ’ನ ಮೊದಲ ತಂಡದಲ್ಲಿ ಬಂದ 110 ಭಾರತೀಯರನ್ನು ವಿದೇಶಾಂಗ ಖಾತೆಯ ರಾಜ್ಯ ಸಚಿವ ಕೀರ್ತಿವರ್ಧನ ಸಿಂಗ್ ಬರಮಾಡಿಕೊಂಡಿದ್ದರು. ಜೂನ್ 20ರಂದು ವಿದ್ಯಾರ್ಥಿಗಳು, ಯಾತ್ರಾರ್ಥಿಗಳು ಮತ್ತು ನಾಗರಿಕರು ಸೇರಿ 290 ಮಂದಿ ಬಂದಿದ್ದರು. ಇದೇ ವೇಳೆ ಭಾರತೀಯರನ್ನು ಸುರಕ್ಷಿತವಾಗಿ ವಾಪಸ್ ಕರೆಸಿಕೊಳ್ಳಲು ಸಹಕರಿಸಿದ ಇರಾನ್ ಸರ್ಕಾರಕ್ಕೆ ವಿದೇಶಾಂಗ ಇಲಾಖೆ ಧನ್ಯವಾದ ತಿಳಿಸಿದೆ.

ಮೇಡೇ..ಮೇಡೇ: ಬೆಂಗಳೂರಲ್ಲಿ ತುರ್ತು ಭೂಸ್ಪರ್ಶ ಮಾಡಿದ ಇಂಡಿಗೊ ವಿಮಾನ



ಬೆಂಗಳೂರು: ಗುವಾಹಟಿ-ಚೆನ್ನೈ ನಡುವಿನ ಇಂಡಿಗೊ ವಿಮಾನ ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ವಿಮಾನ ಗುವಾಹಟಿಯಿಂದ ಚೆನ್ನೈಗೆ ತೆರಳುತ್ತಿತ್ತು. ಇಂಧನ ಖಾಲಿಯಾಗುತ್ತಿರುವ ಹಿನ್ನೆಲೆಯಲ್ಲಿ ಪೈಲಟ್ ಕಂಟ್ರೋಲ್ ರೂಂಗೆ ಮೇಡೇ ಸಂದೇಶ ರವಾನಿಸಿದ್ದಾರೆ. ಕೂಡಲೇ ಅಧಿಕಾರಿಗಳು ವಿಮಾನವನ್ನು ಬೆಂಗಳೂರಿನಲ್ಲಿ ಸೇಫ್ ಲ್ಯಾಂಡ್ ಮಾಡಲು ಸೂಚಿಸಿದ್ದರು. ಇದರಂತೆ ಪೈಲಟ್ ವಿಮಾನವನ್ನು ತುರ್ತು ಭೂಸ್ಪರ್ಶ ಮಾಡಿದರು ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಘಟನೆ ಜೂ.19ರಂದು ನಡೆದಿದೆ. ಇಂಡಿಗೊ 6ಇ-6764 ವಿಮಾನ ಸಂಜೆ 4.40ಕ್ಕೆ ಗುವಾಹಟಿ ವಿಮಾನ ನಿಲ್ದಾಣದಿಂದ ಟೇಕ್ ಆಫ್ ಆಗಿತ್ತು. ಇದು 7.45ಕ್ಕೆ ಚೆನ್ನೈನಲ್ಲಿ ಲ್ಯಾಂಡ್ ಆಗಬೇಕಿತ್ತು. ಮಧ್ಯದಲ್ಲಿ ಇಂಧನ ಖಾಲಿಯ ಅಲರಾಂ ಸೂಚನೆ ಬಂದಿದ್ದರಿಂದ ವಿಮಾನ ಚೆನ್ನೈ ತಲುಪುವುದು ಅಸಾಧ್ಯವಾಗಿತ್ತು. ಈ ವೇಳೆ ಪೈಲಟ್ ಮೇಡೇ ಸಂದೇಶ ರವಾನಿಸಿ ಬೆಂಗಳೂರಿನಲ್ಲಿ ತುರ್ತು ಭೂಸ್ಪರ್ಶ ಮಾಡಿದರು. ವಿಮಾನದಲ್ಲಿ 168 ಪ್ರಯಾಣಿಕರು, ಇಬ್ಬರು ಪೈಲಟ್, ಐವರು ಗಗನಸಖಿಯರು ಸೇರಿ 175 ಜನರಿದ್ದರು.

ಭಾರತ-ಪಾಕ್ ಯುದ್ಧ ನಿಲ್ಲಿಸಿದ್ದಕ್ಕೆ ನನಗೆ ನೊಬೆಲ್ ಪ್ರಶಸ್ತಿ ಕೊಡುವುದಿಲ್ಲ



ವಾಷಿಂಗ್ಟನ್: ಭಾರತ-ಪಾಕ್ ಯುದ್ಧದ ಕುರಿತು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೆ ಅದೇ ಹಳೆಯ ಹಾಡನ್ನು ಹಾಡಿದ್ದಾರೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧವನ್ನು ನಿಲ್ಲಿಸಿ, ಎರಡೂ ದೇಶಗಳ ನಡುವೆ ಶಾಂತಿ ಸ್ಥಾಪಿಸಲು ಕೆಲಸ ಮಾಡಿದ್ದೇನೆ ಎಂದರು. ಇಷ್ಟೆಲ್ಲಾ ಮಾಡಿದರೂ ಪ್ರತಿಷ್ಠಿತ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಸ್ವೀಕರಿಸದಿದ್ದಕ್ಕೆ ಅವರು ನಿರಾಶೆ ವ್ಯಕ್ತಪಡಿಸಿದರು. ಪಾಕಿಸ್ತಾನ ಸರ್ಕಾರ ಟ್ರಂಪ್ ಅವರನ್ನು ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನ ಮಾಡಿದೆ ಎಂದು ತಿಳಿದಿದೆ. ಈ ವೇಳೆ ಅವರು ಈ ಹೇಳಿಕೆಗಳನ್ನು ನೀಡಿದ್ದಾರೆ. ‘ಭಾರತ ಮತ್ತು ಪಾಕಿಸ್ತಾನ, ಸೆರ್ಬಿಯಾ ಮತ್ತು ಕೊಸೊವೊ ನಡುವಿನ ಯುದ್ಧವನ್ನು ನಿಲ್ಲಿಸಿ. ಈಜಿಪ್ಟ್ ಮತ್ತು ಇಥಿಯೋಪಿಯಾ ನಡುವೆ ಶಾಂತಿ ಸ್ಥಾಪಿಸಿ. ಮಧ್ಯಪ್ರಾಚ್ಯದಲ್ಲಿ ಅನೇಕ ಒಪ್ಪಂದಗಳನ್ನು ಮಾಡಿಕೊಳ್ಳಿ. ಇಷ್ಟೆಲ್ಲಾ ಮಾಡಿದ ನಂತರವೂ ನನಗೆ ನೊಬೆಲ್ ಶಾಂತಿ ಪ್ರಶಸ್ತಿ ಸಿಗುವುದಿಲ್ಲ’ ಎಂದು ಡೊನಾಲ್ಡ್ ಟ್ರಂಪ್ ನಿರಾಶೆ ವ್ಯಕ್ತಪಡಿಸಿದರು.

ಡೊನಾಲ್ಡ್ ಟ್ರಂಪ್ ಅವರನ್ನು ಮತ್ತೊಮ್ಮೆ ಪ್ರತಿಷ್ಠಿತ ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿದೆ. ಪಾಕಿಸ್ತಾನ ಸರ್ಕಾರ ಟ್ರಂಪ್ ಅವರನ್ನು ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನ ಮಾಡಿದೆ.

ಕೊಡಗು ಜಿಲ್ಲೆಯಾದ್ಯಂತ ಯೋಗ ದಿನಾಚರಣೆ

ದೈಹಿಕ, ಮಾನಸಿಕ ಆರೋಗ್ಯಕ್ಕೆ ಯೋಗ ಸಹಕಾರಿ: ಡಾ.ಮಂತರ್ ಗೌಡ



ಕೆಳಗಿನ ಗೌಡ ಸಮಾಜದಲ್ಲಿ ಶಾಸಕ ಡಾ.ಮಂತರ್ ಗೌಡ ನೇತೃತ್ವದಲ್ಲಿ ಯೋಗಾರ್ಥಿಗಳು ಯೋಗ ಪ್ರದರ್ಶನ ನೀಡುತ್ತಿರುವುದು.


ಮಡಿಕೇರಿ, ಜೂ.21–ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಯೋಗ ಸಹಕಾರಿಯಾಗಿದೆ ಎಂದು ಶಾಸಕ ಡಾ.ಮಂತರ್ ಗೌಡ ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಆಯುಷ್ ಇಲಾಖೆ ಸಹಯೋಗದೊಂದಿಗೆ 'ಒಂದು ಭೂಮಿ, ಒಂದು ಆರೋಗ್ಯಕ್ಕಾಗಿ ಯೋಗ' ಎಂಬ ವಿಷಯದಡಿ ನಗರದ ಕೆಳಗಿನ ಗೌಡ ಸಮಾಜದಲ್ಲಿ ನಡೆದ ಅಂತರರಾಷ್ಟ್ರೀಯ 11ನೇ ಯೋಗ ದಿನಾಚರಣೆಯಲ್ಲಿ ಮಾತನಾಡಿದ ಅವರು, ಭಾರತೀಯ ಮೂಲದ ಯೋಗ ವಿಶ್ವದಾದ್ಯಂತ ಪಸರಿಸಿದೆ. ಪ್ರತಿ ನಿತ್ಯ ಯೋಗ ಮಾಡುವುದರಿಂದ ಆರೋಗ್ಯ, ಆಯಸ್ಸು ಹೆಚ್ಚಾಗಲಿದೆ. ಇದರಿಂದ ಕ್ರಿಯಾಶೀಲತೆ ಮತ್ತು ಚಲನಶೀಲತೆಯಿಂದ ಬದುಕು ನಡೆಸಲು ಸಹಕಾರಿಯಾಗಲಿದೆ. ಜೊತೆಗೆ ಮಾನಸಿಕವಾಗಿಯೂ ಸಹ ಸದೃಢರಾಗಿರಬಹುದು ಎಂದು ಅವರು ಅಭಿಪ್ರಾಯಪಟ್ಟರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಶೈಲಜಾ ಮಾತನಾಡಿ, ಯೋಗ ಮಾಡುವುದರಿಂದ ಪ್ರತಿನಿತ್ಯ ಚಟುವಟಿಕೆಯಿಂದ ಇರಲು ಸಾಧ್ಯ. ಆ ನಿಟ್ಟಿನಲ್ಲಿ ಉತ್ತಮ ಆರೋಗ್ಯಕ್ಕೆ ಯೋಗ ಮತ್ತು ವ್ಯಾಯಾಮ ಮಾಡುವುದು ಅತ್ಯಗತ್ಯ ಎಂದರು. ಯೋಗ ಶಿಕ್ಷಕ ಮಹೇಶ್ ಕುಮಾರ್ ಯೋಗಾಭ್ಯಾಸ ಶಿಕ್ಷಣ ನೀಡಿದರು. ಸೂರ್ಯ ನಮಸ್ಕಾರ, ವೃಕ್ಷಾಸನ, ಪಾದಹಸ್ತಾಸನ, ಉರ್ದ್ವಾಸನ, ತಾಡಾಸನ, ಅರ್ಧ ಮತ್ಸೇಂದ್ರಾಸನ, ಭುಜಂಗಾಸನ, ಪವನಮುಕ್ತಾಸನ, ಭದ್ರಾಸನ, ತ್ರಿಕೋನಾಸನ, ಉಷ್ಟ್ರಾಸನ, ವಜ್ರಾಸನ, ಶಲಭಾಸನ, ಶಶಾಂಕಾಸನ, ಮಂಡೂಕಾಸನ, ವಕ್ರಾಸನ, ಮಕರಾಸನ, ಸೇತುಬಂಧಾಸನ, ಉತ್ಥಾನ ಪಾದಾಸನ, ಅರ್ಧಹಲಾಸನ, ಶವಾಸನ, ಕಪಾಲಭಾತಿ, ಶೀತಲಿ ಪ್ರಾಣಾಯಾಮ, ಭ್ರಾಮರಿ ಪ್ರಾಣಾಯಾಮ, ಧ್ಯಾನ, ನಾಡಿಶೋಧ ಪ್ರಾಣಾಯಾಮ ಹೀಗೆ ಹಲವು ರೀತಿಯ ಯೋಗ ಮಾಡಲಾಯಿತು.

ನಗರಸಭೆ ಉಪಾಧ್ಯಕ್ಷ ಮಹೇಶ್ ಜೈನಿ, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜೇಶ್ ಯಲ್ಲಪ್ಪ, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಕ್ಷೇತ್ರ ಶಿಕ್ಷಣಾಧಿಕಾರಿ ದೊಡ್ಡೇಗೌಡ, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯ ಡಾ.ರಾಮಚಂದ್ರ ಕಾಮತ್, ವಿವಿಧ ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು.

ಆತ್ಮ, ಮನಸ್ಸನ್ನು ಸಮತೋಲನಗೊಳಿಸುವ ಶಕ್ತಿಯೇ ಯೋಗ



ಶ್ರೀ ಕಾವೇರಿ ಯೋಗ ಕೇಂದ್ರದಲ್ಲಿ 26ನೇ ವಾರ್ಷಿಕೋತ್ಸವ ಮತ್ತು ಯೋಗ ದಿನಾಚರಣೆ

ವಿರಾಜಪೇಟೆ: ಯೋಗ ಅಭ್ಯಾಸದಿಂದ ಮನುಷ್ಯನ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ದೇಹ, ಆತ್ಮ ಮತ್ತು ಮನಸ್ಸನ್ನು ಸಮತೋಲನಗೊಳಿಸುವ ಶಕ್ತಿ ಯೋಗಕ್ಕಿದೆ ಎಂದು ಪೊಲೀಸ್ ಡಿವೈಎಸ್‌ಪಿ ಮಹೇಶ್ ಕುಮಾರ್ ಅಭಿಪ್ರಾಯಪಟ್ಟರು.

ಅಂತಾರಾಷ್ಟ್ರಿಯ ಯೋಗ ದಿನಾಚರಣೆ ಶ್ರೀ ಕಾವೇರಿ ಯೋಗ ಕೇಂದ್ರದ 26ನೇ ವಾರ್ಷಿಕೋತ್ಸವದ ಅಂಗವಾಗಿ ಪಟ್ಟಣದ ಶ್ರೀ ಕಾವೇರಿ ಆಶ್ರಮದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮುಖ್ಯಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಯೋಗದಿಂದ ಮನಸ್ಸಿನಲ್ಲಿರುವ ಕೆಟ್ಟ ಚಿಂತನೆಗಳನ್ನು ಹೋಗಲಾಡಿಸಿ ಆರೋಗ್ಯವನ್ನು ಉತ್ತಮವಾಗಿರಿಸಲು ಸಾಧ್ಯ ಅದರಿಂದ ಪ್ರತಿಯೊಬ್ಬರು ಯೋಗ ಅಭ್ಯಾಸವನ್ನು ಮಾಡುವಂತೆ ಹೇಳಿದರು.

ಆಯುಷ್ ಆಸ್ಪತ್ರೆಯ ಮುಖ್ಯ ವೈದ್ಯ ಡಾ.ಶ್ರೀನಿವಾಸ್ ಮಾತನಾಡಿ, ವೈಷಮ್ಯದ ಇಂದಿನ ಪರಿಸರದಲ್ಲಿ ಆರೋಗ್ಯದತ್ತ ಕೊಂಡೊಯ್ಯುವ ಏಕೈಕ ಮಾರ್ಗವೆಂದರೆ ಅದು ಯೋಗ. ಪ್ರಾಚೀನ ಭಾರತದ ಜ್ಞಾನ ಭಂಡಾರವೇ ತೆರೆಯಲಿದೆ ಎಂದರು.

ಶ್ರೀ ಕಾವೇರಿ ಆಶ್ರಮದ ಅತ್ಮಾಪ್ರಕಾಶಾನಂದ ಪುರಿ ಸ್ವಾಮೀಜಿ ಅವರು ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದರು. ಸ್ತ್ರೀರೋಗ ತಜ್ಞೆ ವೈದ್ಯೆ ಡಾ. ಜಯಥ ಪೊಣಚ್ಚ ಮತನಾಡಿದರು. ಇತ್ತೀಚೆಗೆ ಅಗಲಿದ ಯೋಗ ಕೇಂದ್ರದ ಹಿರಿಯ ಯೋಗಪಟು ನಿವೃತ್ತ ಯೋಧ ಬಿದ್ದಂಡ ಗಣಪತಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಕಾವೇರಿ ಯೋಗ ಕೇಂದ್ರದ ಗುರು ಸೀತಾರಾಮ ರೈ ವಹಿಸಿದ್ದರು ಯೋಗಪಟು ಮುಕ್ಕಾಟಿರ ರತಿ, ಡಾ.ಹೇಮಂತ್, ನಿವೃತ್ತ ಮುಖ್ಯ ಶಿಕ್ಷಕಿ ಲಲಿತಾ, ಪ್ರಸನ್ನ, ಸೌಮ್ಯ, ಜಪ್ಪು ತಿಮ್ಮಯ್ಯ, ಡಾ.ರುವಿ, ಡಾ.ರೇಖಾ ಚಿಣ್ಣಪ್ಪಉಪಸ್ಥಿತರಿದ್ದರು.

ನಾಪೋಕ್ಲುನಲ್ಲಿ ಅಂತಾರಾಷ್ಟ್ರೀಯ ಯೋಗ



ನಾಪೋಕ್ಲು ಪಟ್ಟಣದಲ್ಲಿ ಯೋಗ ನಿರತ ವಿದ್ಯಾರ್ಥಿಗಳು.

ನಾಪೋಕ್ಲು: ಹೋಬಳಿ ವ್ಯಾಪ್ತಿಯ ವಿವಿಧ ಶಾಲೆಗಳಲ್ಲಿ ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.

ಇಲ್ಲಿನ ಶ್ರೀರಾಮ ಟ್ರಸ್ಟ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಬಿ.ಎಂ. ಶಾರದ ಮಾತನಾಡಿ ಯೋಗದಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ನಿತ್ಯ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳು ಸದೃಢ ಆಗಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲ ಪ್ರೊ ಕಲ್ಯಾಟಂಡ ಪೂಣಚ್ಚ, ಸಂಸ್ಥೆಯ ನಿರ್ದೇಶಕರು, ಶಿಕ್ಷಕ ವೃಂದದವರು ಹಾಜರಿದ್ದರು. ದೈಹಿಕ ಶಿಕ್ಷಣ ಶಿಕ್ಷಕಿ ಸರಿತ ವಿದ್ಯಾರ್ಥಿಗಳಿಂದ ವಿವಿಧ ಬಗೆಯ ಬಗ್ಗೆ ಯೋಗಾಸನಗಳನ್ನು ನಡೆಸಿಕೊಟ್ಟರು.

ಸಂಪಾಜೆ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಯೋಗದ ಐತಿಹಾಸಿಕ ಹಿನ್ನಲೆ ಮತ್ತು ಯುವ ಪೀಳಿಗೆಗೆ ಯೋಗದ ಮಹತ್ವವನ್ನು ಸಂಸ್ಥೆಯ ಆಡಳಿತ ಮಂಡಳಿ ಸಂಚಾಲಕ ಎಂ. ಶಂಕರನಾರಾಯಣ ಭಟ್ ಮಾಹಿತಿ ನೀಡಿದರು.

ವಿವಿಧ ಯೋಗಾಸನಗಳ ಪ್ರಾತ್ಯಕ್ಷಿಕೆಯನ್ನು ದೈಹಿಕ ಶಿಕ್ಷಕ ಕುಶಾಲಪ್ಪ ನಡೆಸಿಕೊಟ್ಟರು. ಯೋಗದಿನದ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಈ ಸ್ಪರ್ಧೆಯ ಬಹುಮಾನಗಳ ಪ್ರಾಯೋಜಕತ್ವವನ್ನು ಆಡಳಿತ ಮಂಡಳಿಯ ಕಾರ್ಯಕಾರಿ ನಿರ್ದೇಶಕ ಯು.ಪಿ. ಜಯರಾಮ ವಹಿಸಿಕೊಂಡಿದ್ದರು. ಕಾರ್ಯಕ್ರಮದಲ್ಲಿ ಉಪನ್ಯಾಸಕ, ಅಧ್ಯಾಪಕ ವೃಂದದವರು ಭಾಗವಹಿಸಿದರು. ಮುಖ್ಯ ಶಿಕ್ಷಕ ಐತ್ತಪ್ಪ. ಎ ಇವರು ಸ್ವಾಗತಿಸಿ ಉಪನ್ಯಾಸಕ ಚೆನ್ನಬಸಪ್ಪ ವಂದಿಸಿದರು.

ಸಿದ್ದಾಪುರದಲ್ಲಿ ಯೋಗ ದಿನಾಚರಣೆ



ಸಿದ್ದಾಪುರ: ಇಲ್ಲಿನ ಆಲ್ಬೀರ್ರ್ ಪ್ರಿ ಶಾಲೆಯಲ್ಲಿ ಯೋಗ ದಿನಾಚರಣೆ ಆಚರಿಸಲಾಯಿತು. LKG - UKGಯ ಪುಟಾಣಿ ಮಕ್ಕಳು, ಶಿಕ್ಷಕರು ಯೋಗ ಮಾಡಿ ಸಂಭ್ರಮಿಸಿದರು. ಮಕ್ಕಳಿಗೆ ಯೋಗ, ಪರಿಸರ, ಶುಚಿತ್ವ, ಆರೋಗ್ಯ ಕಾಳಜಿ, ಶಿಸ್ತು, ಕ್ರೀಡೆ ಸಮಯ ಪಾಲನೆ ಸೇರಿದಂತೆ ಮಕ್ಕಳ ಬೆಳವಣಿಗೆಗೆ ಪೂರಕವಾದ ನೀತಿ ಹೇಳಿಕೊಟ್ಟರು. ಶಿಕ್ಷಕರಾದ ಜೀನತ್, ತಸ್ಲೀನಾ, ಶಫ್ನಾ ಮತ್ತು ಮಿಸ್ರಿಯಾ ಪೋಷಕರು ಹಾಜರಿದ್ದರು.

ಕೂಡಿಗೆ ಕೃಷಿ ಫಾರಂ ಆವರಣದಲ್ಲಿ ಯೋಗ ಪ್ರದರ್ಶನ



ಕುಶಾಲನಗರ, ಜೂ.21– ಸಮೀಪದ ಕೂಡಿಗೆ ಕೃಷಿಫಾರಂ ಆವರಣದಲ್ಲಿರುವ ಕೊಡಗು ಸೈನಿಕ ಶಾಲೆಯಲ್ಲಿ ಶನಿವಾರ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಕೊಡಗು ಸೈನಿಕ ಶಾಲಾ ಕೆಡೆಟ್‌ಗಳು, ಶಿಕ್ಷಕರು, ಸಿಬ್ಬಂದಿ ಬೆಳಿಗ್ಗೆ 7 ರಿಂದ 7.50ರ ವರೆಗೆ ಶಿಸ್ತು ಮತ್ತು ಉತ್ಸಾಹಭರಿತವಾಗಿ ಶಾಲೆಯ ಕುವೆಂಪು ವಿವಿದೋದ್ದೇಶ ಸಭಾಂಗಣದಲ್ಲಿ ಯೋಗಾಭ್ಯಾಸ ಮಾಡಿದರು.

ಶಾಲೆಯ ಪ್ರಾಂಶುಪಾಲ ಕರ್ನಲ್ ಅಮರ್ ಜೀತ್ ಸಿಂಗ್, ಆಡಳಿತಾಧಿಕಾರಿ ವಿಂಗ್ ಕಮಾಂಡರ್ ಪಿ ಪ್ರಕಾಶ್ ರಾವ್, ಉಪಪ್ರಾಂಶುಪಾಲ ಸ್ಕ್ವಾಡ್ರನ್ ಲೀಡರ್ ಮೊಹಮ್ಮದ್ ಶಾಜಿ ಮತ್ತು ಎನ್‌ಸಿಸಿ ಘಟಕದ ಅಧಿಕಾರಿಗಳು ಹಾಗೂ ಶಾಲಾ ವೈದ್ಯಾಧಿಕಾರಿ ಡಾ. ಚಿನ್ಮಯ್ ಪಾಲ್ಗೊಂಡಿದ್ದರು.

ಕೊಡಗು ಸೈನಿಕ ಶಾಲೆಯ ದೈಹಿಕ ಶಿಕ್ಷಕ ಸಿ.ಎಚ್.ಎಮ್. ಅನೂಪ್ ಚೌಹಾನ್ ಆಯುಷ್‌ನಿಂದ ಅನುಮೋದಿತವಾದ ಯೋಗಾಸನದ ಪ್ರದರ್ಶನ ನೀಡಿ ಮಾರ್ಗದರ್ಶನ ನೀಡಿದರು.

ಅಕ್ರಮ ಸಂಬಂಧಕ್ಕೆ ಸೋನಾಕ್ಷಿ ಬಲಿ
ಪ್ರಿಯತಮ ಮಾದೇಶನ ಬಂಧನ



ಸೋನಾಕ್ಷಿ



ಮಾದೇಶ

ಕೊಳ್ಳೇಗಾಲ: ಅದು ಊರಾಚೆಗಿನ ಕೆರೆ ದಂಡೆ... ಆ ದಡದ ಪಕ್ಕದಲ್ಲಿ ಹೂತು ಹಾಕಿದ್ದ ಸ್ಥಿತಿಯಲ್ಲಿ ಪತ್ತೆಯಾದ ಮಹಿಳೆಯ ಮೃತ ದೇಹ... ಇದು ಕೊಲೆನಾ ಇಲ್ಲ ವಾಮಾಚಾರಕ್ಕೆ ಕೊಟ್ಟ ಬಲಿನಾ ಎಂಬ ಪ್ರಶ್ನೆ ಬೇರೆ... ಆಕೆಯ ಗುರುತೂ ಸಹ ಸಿಕ್ಕಿರಲಿಲ್ಲ. ಆದರೆ ಇದನ್ನೇ ಸವಾಲಾಗಿ ತೆಗೆದುಕೊಂಡ ಪೊಲೀಸರು 24 ಗಂಟೆಯೊಳಗೆ ಪ್ರಕರಣವನ್ನು ಬೇಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕೊಲೆಯಾದ ಮಹಿಳೆಯನ್ನು ಕೊಳ್ಳೇಗಾಲ ಮೋಳೆಯ ಸೋನಾಕ್ಷಿ(30) ಎಂದು ಗುರುತಿಸಲಾಗಿದ್ದು, ಆಕೆಯ ಪ್ರಿಯಕರನೇ ಕೊಲೆಗಾರ ಎಂಬುದು ಪತ್ತೆ ಆಗಿದೆ. ಈಕೆಗೆ 9 ವರ್ಷಗಳ ಹಿಂದೆ ಮೋಳೆ ಗ್ರಾಮದ ವಿಜಯಕುಮಾರ್ ಎಂಬಾತನೊಂದಿಗೆ ಮದುವೆಯಾಗಿತ್ತು, ಇವರಿಗೆ 8 ವರ್ಷದ ಹೆಣ್ಣು, 4 ವರ್ಷದ ಗಂಡು ಮಗುವೂ ಇತ್ತು. ಈಕೆಯ ನಡತೆ ಸರಿ ಇಲ್ಲದ ಕಾರಣ ಹಾಗೂ ಆಗಾಗ್ಗೆ ಈಕೆ ಮನೆ ಬಿಟ್ಟು ಹೋಗುತ್ತಿದ್ದ ಹಿನ್ನೆಲೆಯಲ್ಲಿ ಕಳೆದ ತಿಂಗಳು ಗ್ರಾಮಾಂತರ ಪೊಲೀಸರಿಗೆ ಪತಿ ದೂರು ನೀಡಿದ್ದರು. ರಾಜೀ ಸಂಧಾನದ ಬಳಿಕವೂ ಸೋನಾಕ್ಷಿ ಮತ್ತೆ ಕಾಣೆಯಾಗಿದ್ದಳೆನ್ನಲಾಗಿದೆ.

ಸೋನಾಕ್ಷಿಗೆ ಮೋಳೆ ಗ್ರಾಮದ ಮಾದೇಶನ ಜೊತೆ ಅಕ್ರಮ ಸಂಬಂಧವಿತ್ತು ಅಲ್ಲದೆ ನರಸೀಪುರದ ಬಾಬು ಜೊತೆಗೂ ಸಂಬಂಧ ಇತ್ತೆಂದು ಹೇಳಲಾಗಿದ್ದು, ಈ ವಿಚಾರ ಮಾದೇಶನಿಗೆ ತಿಳಿದು ಪಟ್ಟಣದ ಬಸ್ತಿಪುರಕ್ಕೆ ಕರೆತಂದು ಮಾದೇಶ ಈ ಬಗ್ಗೆ ಪ್ರಶ್ನಿಸಿದಾಗ ಇಬ್ಬರಿಗೂ ಮಾತಿಗೆ ಮಾತು ಬೆಳೆದು ಸೋನಾಕ್ಷಿಗೆ ಮಾದೇಶ ಹಲ್ಲೆ ಮಾಡಿದ್ದಾನೆ. ಆಕೆ ಸ್ಥಳದಲ್ಲೇ ಅಸು ನೀಗಿದಳು. ಈಕೆ ಸತ್ತದ್ದನ್ನ ಮನಗಂಡ ಮಾದೇಶ ಗೋಣಿ ಚೀಲದಲ್ಲಿ ಶವವನ್ನು ಹಾಕಿ ಬೈಕ್‌ನಲ್ಲಿ ಸಾಗಿಸಿ ಹಂಪಾಪುರ ಕಾವೇರಿ ತೀರದಲ್ಲಿನ ಮಣ್ಣಿನಲ್ಲಿ 2 ಅಡಿ ಆಳ ತೆಗೆದು ಹೂತಿದ್ದ ಎನ್ನಲಾಗಿದೆ. ಆರು ದಿನಗಳ ಬಳಿಕ ಕೊಳೆತ ವಾಸನೆ ಬಂದ ಹಿನ್ನೆಲೆ ನಾಯಿಯೊಂದು ನೆಲ ಕೆರೆಯುತ್ತಿದ್ದುದನ್ನು ಕಂಡ ದನದಾಹಿಗಳು ಪಟ್ಟಣ ಪೊಲೀಸರಿಗೆ ದೂರು ನೀಡಿದರು. ಪೋಲೀಸರು ತನಿಖೆ ಕೈಗೊಂಡಾಗ ಇದು ಮಹಿಳೆಯ ಶವ ಎಂದು ಪತ್ತೆಯಾಗಿದೆ. ನಂತರ ತನಿಖೆಯಲ್ಲಿ ಈಕೆ ಸೋನಾಕ್ಷಿಯ ಶವ ಎಂದು ಆಕೆಯ ಅಜ್ಜಿ ಪತ್ತೆ ಮಾಡಿದರು.

ಸೋನಾಕ್ಷಿ ಸಾಯುವ ಮುನ್ನ ಮಾಡಿದ್ದ ದೂರವಾಣಿ ಕರೆಗಳನ್ನು ಪರಿಶೀಲಿಸಿದ ಪೊಲೀಸರಿಗೆ ಮಾದೇಶನ ನಂಬರ್ ಸಿಕ್ಕಿ ಆತನನ್ನು ವಿಚಾರಣೆಗೊಳ ಪಡಿಸಿದಾಗ ಆತ ತಪ್ಪೊಪ್ಪಿಕೊಂಡಾಗ ಆತನನ್ನು ಬಂಧಿಸಿದ್ದಾರೆ.

ಸದೃಢತೆ, ಮನೋಲ್ಲಾಸಕ್ಕೆ ಯೋಗ ಸಹಕಾರಿ: ಶಿಲ್ಪಾ ನಾಗ್



ಚಾಮರಾಜನಗರದ ಪೊಲೀಸ್ ಪೆರೇಡ್ ಮೈದಾನದಲ್ಲಿಂದು ಜಿಲ್ಲಾಡಳಿತದಿಂದ ಯೋಗ ದಿನ ಆಚರಿಸಲಾಯಿತು.

ಚಾಮರಾಜನಗರ, ಜೂ.21 – ಪ್ರತಿಯೊಬ್ಬರು ಮಾನಸಿಕ ಹಾಗೂ ದೈಹಿಕ ಆರೋಗ್ಯ ಉತ್ತಮ ಪಡಿಸಿಕೊಳ್ಳಲು ಯೋಗ ಸಹಕಾರಿಯಾಗಿದ್ದು, ದೇಹ, ಮನಸ್ಸಿನ ಸದೃಢತೆ ಹಾಗೂ ಸುಸ್ಥಿತಿ ಮತ್ತು ಮನೋಲ್ಲಾಸಕ್ಕೆ ಯೋಗ ನೆರವಾಗಲಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದ್ದಾರೆ.

ನಗರದ ಪೊಲೀಸ್ ಪೆರೇಡ್ ಮೈದಾನದಲ್ಲಿಂದು ಭಾರತ ಸರ್ಕಾರದ ಆಯುಷ್ ಮಂತ್ರಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಶ್ರೀ ಪತಂಜಲಿ ಯೋಗ ಶಿಕ್ಷಣ ಸೇವಾ ಸಮಿತಿ ಹಾಗೂ ಯೋಗನಿರತ ಸಂಘಸಂಸ್ಥೆಗಳು ಮತ್ತು ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ 'ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ' ಘೋಷವಾಕ್ಯದೊಂದಿಗೆ ಆಯೋಜಿಸಲಾಗಿದ್ದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಒತ್ತಡದ ಪರಿಸ್ಥಿತಿಯಲ್ಲಿ 30–40ನೇ ವಯಸ್ಸಿಗೆ ಸಾಕಷ್ಟು ಯುವಕ, ಯುವತಿಯರು ಹೃದಯಾಘಾತಕ್ಕೀಡಾಗುತ್ತಿರುವುದು ಎಲ್ಲೆಡೆ ಕಂಡುಬರುತ್ತಿದೆ. ಹಾಗಾಗಿ ದೈನಂದಿನ ಎಷ್ಟೇ ಒತ್ತಡವಿರಲಿ, ಯೋಗವನ್ನು ಅಳವಡಿಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಜಿಲ್ಲಾ ಆಯುಷ್ ಅಧಿಕಾರಿ ಡಾ. ಬಿ.ಪಿ. ಸತೀಶ್ ಕುಮಾರ್, ಇತರರು ಕಾರ್ಯಕ್ರಮದಲ್ಲಿ ಇದ್ದರು.

ಮೈಸೂರಿನ ಸರ್ಕಾರಿ ಪ್ರಕೃತಿ ಚಿಕಿತ್ಸೆ ಹಾಗೂ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಡಾ. ಮಧು ಭರತ್ ಅವರು ಕಾರ್ಯಕ್ರಮದಲ್ಲಿ ಸಾಮೂಹಿಕ ಪ್ರಾರ್ಥನೆಯೊಂದಿಗೆ ಯೋಗ ಪ್ರಾತ್ಯಕ್ಷಿಕೆಯನ್ನು ಪ್ರಸ್ತುತಪಡಿಸಿದರು.

> ಚಾಮರಾಜನಗರವನ್ನು ಈಗ ಹಸಿರು ಚಾಮರಾಜನಗರ, ಚೆಲುವ ಚಾಮರಾಜನಗರ ಎಂದೆಲ್ಲಾ ಹೇಳಲಾಗುತ್ತಿದೆ. ಮುಂದಿನ ದಿನಗಳಲ್ಲಿ ಆರೋಗ್ಯಕರ ಚಾಮರಾಜನಗರವನ್ನಾಗಿ ಮಾಡಲು ದಿನನಿತ್ಯ ಯೋಗ ಮಾಡುತ್ತೇವೆಂದು ಎಲ್ಲರೂ ಇಂದೇ ಪಣ ತೊಡೋಣ.
>
> – ಶಿಲ್ಪಾನಾಗ್, ಜಿಲ್ಲಾಧಿಕಾರಿ

ಉತ್ತಮ ಆರೋಗ್ಯ ಹೊಂದಲು ಯೋಗ ಸಹಕಾರಿ



ಶಿಕ್ಷಕರಾದ ಗುಂಬಳ್ಳಿ ಬಸವರಾಜು, ಶಿವಮೂರ್ತಿ, ಮಂಜುನಾಥ, ಜಬೀನ್ ತಾಜ್, ಮಾದಲಾಂಬಿಕೆ, ವಿದ್ಯಾರ್ಥಿಗಳು ಯೋಗ ಪ್ರದರ್ಶನ ನೀಡಿದರು.

ಯಳಂದೂರು,ಜೂ.21– (ವಿ.ನಾಗರಾಜು)– ಒತ್ತಡ ನಿರ್ವಹಣೆಯೊಂದಿಗೆ ಸದೃಢ ಆರೋಗ್ಯ ಹೊಂದಲು ಪ್ರತಿಯೊಬ್ಬರು ಪ್ರತಿನಿತ್ಯ ಯೋಗವನ್ನು ಅಭ್ಯಾಸ ಮಾಡಬೇಕು. ಆ ಮೂಲಕ ಉತ್ತಮ ಆರೋಗ್ಯ ಹೊಂದಲು ಯೋಗ ಸಹಕಾರಿಯಾಗಲಿದೆ ಎಂದು ಎಸ್‌ಡಿವಿಎಸ್ ವಿದ್ಯಾ ಸಂಸ್ಥೆ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ ಅಭಿಪ್ರಾಯಿಸಿದರು.

ಪಟ್ಟಣದ ಎಸ್.ಡಿ.ವಿ.ಎಸ್. ವಿದ್ಯಾಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಯೋಗ ದಿನಾಚರಣೆಯು ಒಂದು ದಿನಕ್ಕೆ ಸೀಮಿತಗೊಳಿಸದೆ ವಿದ್ಯಾರ್ಥಿಗಳು ಪ್ರತಿನಿತ್ಯ ಯೋಗವನ್ನು ನಿರಂತರವಾಗಿ ಅಭ್ಯಾಸ ಮಾಡುವ ಮೂಲಕ ಉತ್ತಮವಾದ ಆರೋಗ್ಯ ಹೊಂದಬೇಕು. ಸಹಾಯಕ ಒತ್ತಡರಹಿತ ಜೀವನಶೈಲಿಗೆ ಯೋಗ ಅತ್ಯಂತ ಪರಿಣಾಮಕಾರಿಯಾಗಿದ್ದು, ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಪಡೆಯುವಲ್ಲಿ ನಿರಂತರವಾಗಿ ಯೋಗವನ್ನು ಅಭ್ಯಾಸ ಮಾಡುವ ಮೂಲಕ ಸದೃಢ ಆರೋಗ್ಯ ಹೊಂದಬಹುದು. ವಿದ್ಯಾರ್ಥಿಗಳು ತಾವು ಓದುವ ದಿನಗಳಲ್ಲಿ ವಿದ್ಯಾಭ್ಯಾಸದ ಜೊತೆಗೆ ಪ್ರತಿನಿತ್ಯ ಯೋಗದ ತರಬೇತಿಯನ್ನು ಹೊಂದಬೇಕು. ಯೋಗವನ್ನು ಅಭ್ಯಾಸ ಮಾಡುವಲ್ಲಿ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು. ಆ ಮೂಲಕ ಸದೃಢವಾದ ದೇಹವನ್ನು ಹೊಂದಲು ಆರೋಗ್ಯಕರ ಜೀವನ ಶೈಲಿಗೆ ಸಹಕಾರಿಯಾಗಿದೆ. ಪ್ರಸ್ತುತ ದಿನಗಳಲ್ಲಿ ಮನುಷ್ಯ ಯಾಂತ್ರಿಕ ಜೀವನ ಶೈಲಿಗೆ ಮಾರು ಹೋಗುತ್ತಿದ್ದು, ಅನೇಕ ರೋಗ ರುಜಿನಗಳಿಂದ ಬಳಲುತ್ತಿದ್ದಾರೆ. ರೋಗಗಳಿಂದ ವಿಮುಕ್ತಿ ಹೊಂದಲು ಯೋಗ ಅತ್ಯಂತ ಪರಿಣಾಮಕಾರಿಯಾಗಿದೆ ಎಂದು ತಿಳಿಸಿದರು.

ಗುಂಡ್ಲುಪೇಟೆ ಮಹಾಮನೆಯಲ್ಲಿ ಯೋಗ ದಿನಾಚರಣೆ



ಪಟ್ಟಣದ ಮದ್ದಾನೇಶ್ವರ ಮಹಾಮನೆ ಯೋಗಕೇಂದ್ರದಲ್ಲಿ ಯೋಗಾಸನ ಪ್ರದರ್ಶನ ಮಾಡಿದರು.

ಗುಂಡ್ಲುಪೇಟೆ, ಜೂ–21 (ಸೋಮ್.ಜಿ) ಪಟ್ಟಣದ ಶ್ರೀ ಮದ್ದಾನೇಶ್ವರ ಮಹಾಮನೆಯಲ್ಲಿರುವ ಯೋಗಕೇಂದ್ರದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಸಾಮೂಹಿಕ ಯೋಗಪ್ರದರ್ಶನ ಮಾಡಲಾಯಿತು.

ನಿರಂತರವಾಗಿ ಯೋಗ ಮಾಡುವುದರಿಂದ ಹಲವಾರು ಅನಾರೋಗ್ಯ ಸಮಸ್ಯೆಗಳು ಬಗೆಹರಿಯುತ್ತದೆ. ಉತ್ತಮ ಆರೋಗ್ಯಕ್ಕೆ ಯೋಗ ಸಹಕಾರಿಯಾಗಿದೆ ಎಂದು ಯೋಗಗುರು ಕೆ.ಸಿ.ರಾಜಪ್ಪ, ತಿಳಿಸಿದರು. ಈ ಸಂದರ್ಭದಲ್ಲಿ ಯೋಗಕೇಂದ್ರದ ಅಧ್ಯಕ್ಷ ಶ್ರೀನಿವಾಸ್, ಕಾರ್ಯದರ್ಶಿ ಜಿ.ಪಿ.ಗಿರೀಶ್ ಮತ್ತು ಯೋಗಪಟುಗಳು ಹಾಜರಿದ್ದರು.

ವಿವಿ ಎನ್.ಎಸ್.ಎಸ್ ಘಟಕದಿಂದ ಯೋಗ ದಿನಾಚರಣೆ



ಚಾಮರಾಜನಗರ: ವಿಶ್ವವಿದ್ಯಾನಿಲಯದ ಎನ್‌ಎಸ್‌ಎಸ್ ಘಟಕದ ವತಿಯಿಂದ ಇಂದು 11ನೇ ಅಂತಾರಾಷ್ಟ್ರೀಯ ಯೋಗದಿನದ ಕಾರ್ಯಕ್ರಮವನ್ನು ಚಾಮರಾಜನಗರ ವಿಶ್ವವಿದ್ಯಾನಿಲಯದಲ್ಲಿ ಹಮ್ಮಿಕೊಳ್ಳಲಾಗಿತ್ತು.

ವಿಶೇಷ ಉಪನ್ಯಾಸ ನೀಡಿದ ಉಪನ್ಯಾಸಕಿ ಭಾಗ್ಯಮ್ಮ ಪ್ರಸ್ತುತ ದಿನಗಳಲ್ಲಿ ಮನುಷ್ಯನು ಹಲವಾರು ಆರೋಗ್ಯ ಸಮಸ್ಯೆಗಳಿಗೆ ಸಿಲುಕಿ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕವಾಗಿ ತನ್ನ ಆರೋಗ್ಯವನ್ನು ಸುಧಾರಿಸಿಕೊಳ್ಳುವಲ್ಲಿ ಹಿಂದೆ ಸರಿದಿದ್ದಾನೆ ಎಂದರೆ ತಪ್ಪಾಗಲಾರದು. ಹಾಗಾಗಿ ಇಂತಹ ಹಲವಾರು ಸಮಸ್ಯೆಗಳಿಗೆ ಒಂದು ದಿವ್ಯಔಷಧ ಎಂದರೆ ನಿರಂತರ ಯೋಗವೇ ಆಗಿದೆ ಎಲರಿಗೂ ನೆಮ್ಮದಿಯ ಬದುಕಿಗಾಗಿ, ಏಕಾಗ್ರತೆಗಾಗಿ ಮನಸ್ಸನ್ನು ಶಾಂತಗೊಳಿಸುವುದಕ್ಕಾಗಿ ಹಾಗೂ ಭಾವನಾತ್ಮಕವಾಗಿ ಸ್ಥಿರತೆಯನ್ನು ಉತ್ತೇಜಿಸುವಲ್ಲಿಯೂ ಯೋಗ ಸಹಾಯವಾಗುತ್ತಿದೆ ಎಂದರು.

ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ.ಆರ್. ಮಹೇಶ್ ಮಾತನಾಡಿ, ಪ್ರತಿದಿನ ಯೋಗದ ಜೊತೆಗೆ ಧ್ಯಾನ ಮತ್ತು ಪ್ರಾಣಾಯಾಮದ ಮೂಲಕ ಆಂತರಿಕ ಶಾಂತಿ ಮತ್ತು ಅರಿವನ್ನು ಪಡೆಯಲು ತುಂಬಾ ಸಹಕಾರಿಯಾಗಿದೆ. ಚಯಾಪಚಯ ಕ್ರಿಯೆಯನ್ನು ಸುಧಾರಿಸಲು, ದಿನನಿತ್ಯದ ನಿದ್ರೆಯ ಗುಣಮಟ್ಟವನ್ನು ಕಾಪಾಡಲು ಯೋಗ ಉಪಯೋಗವಾಗುತ್ತದೆ ಎಂದು ತಿಳಿಸಿದರು.

ಗೋಪಾಲಕೃಷ್ಣ ನಾಯಕ ನಿಧನ



ಚಾಮರಾಜನಗರ: ಚಾಮರಾಜನಗರ ಪಟ್ಟಣದ ಬಸವೇಶ್ವರ ನಗರದ ಪಿಡಬ್ಲ್ಯೂಡಿ ಕಾಲೋನಿಯ ನಿವಾಸಿ ಗೋಪಾಲಕೃಷ್ಣ ನಾಯಕ (42) ಶುಕ್ರವಾರ ನಿಧನವಾಗಿದ್ದಾರೆ.

ಮೃತರು ಪತ್ನಿ, ಓರ್ವ ಪುತ್ರ, ತಾಯಿ, ಸಹೋದರ, ಕುಟುಂಬವರ್ಗ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಶನಿವಾರ ಪಟ್ಟಣದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.



ಮಂಗಳ ಕಾರ್ಯನಿರತ ಮಂಗಳಮ್ಮ-100

● ಎ.ಗಣೇಶ್

> ಜೀವನ ಎಂದ ಮೇಲೆ ಸೋಲು-ಗೆಲುವು, ಏಳು-ಬೀಳು ಸಹಜ. ಅದಕ್ಕೆ ಅಂಜಿ ಆತ್ಮಹತ್ಯೆ ಮಾಡಿಕೊಳ್ಳುವುದು ಹೇಡಿತನ. ನೂರು ವರ್ಷಗಳಲ್ಲಿ ಎಲ್ಲವನ್ನೂ ಖುಷಿಯಿಂದಲೇ ಪರಿಗಣಿಸಿಕೊಂಡು ಬಂದಿದ್ದೇನೆ. ಮನೆಯವರ ಸಹಕಾರದಿಂದ ಇಷ್ಟು ಕೆಲಸಗಳನ್ನು ಮಾಡಿದ್ದೇನೆ. ಎಲ್ಲಕ್ಕೂ ಮಿಗಿಲಾಗಿ ಭಗವಂತನ ಕೃಪೆಯಿಂದ ಇವೆಲ್ಲವೂ ನಡೆದಿದೆ. ಸಾಮಾಜಿಕ ಸಮಸ್ಯೆಗಳನ್ನ ಬರವಣಿಗೆ ಮೂಲಕ ಹೊರ ತರುವ, ತಿದ್ದುವ ಹಂಬಲವಿದೆ.
> – ಸಿ.ಎಸ್.ಮಂಗಳಮ್ಮ, ಶತಾಯುಷಿ

ನೂರಲ್ಲೂ ಅತೀವ ಸ್ಫೂರ್ತಿಯ ಚೇತನ ಶತಾಯುಷಿ ಸಿ.ಎಸ್.ಮಂಗಳಮ್ಮ. ಇವರ ಜೀವನ ಯುವ ಪೀಳಿಗೆಗೆ ಒಂದು ಸಂದೇಶ ಮಾತ್ರವಲ್ಲ; ಇವರೇ ಮಾದರಿ ಸಹ.

ಯುವ ಸಮೂಹ ನಾಚುವಂತಿದೆ ಇವರ ಜೀವನ ಶೈಲಿ. ನೂರು ವರ್ಷಕ್ಕೆ ಕಾಲಿಡುತ್ತಿದ್ದರೂ ಜೀವನ ಉತ್ಸಾಹ ಸ್ವಲ್ಪವೂ ಕುಂದಿಲ್ಲ. ಮನಸ್ಸಿದ್ದರೆ ಮಹದೇವ ಎಂಬಂತೆ ಅವರ ದೇಹಸ್ಥಿತಿ ಅಷ್ಟು ಉತ್ತಮವಾಗಿದೆ. ಅಕ್ಷರಗಳನ್ನು ಮುತ್ತು ಪೋಣಿಸುವಂತೆ ಬರೆಯುವ ಮಂಗಳಮ್ಮರಿಗೆ ಇಂದು ನೂರರ ಸಂಭ್ರಮ. ಜೀವನದುದ್ದಕ್ಕೂ ಅಕ್ಷರ ದಾನ, ಸೇವಾ ಕಾರ್ಯ, ಆರೋಗ್ಯ ಜಾಗೃತಿ ಜೊತೆಗೆ ಅವರು ಕನ್ನಡ ಸಾಹಿತ್ಯಕ್ಕೂ ತಮ್ಮದೇ ಕೊಡುಗೆ ನೀಡುತ್ತಾ ಬಂದಿದ್ದಾರೆ. ಈಗಲೂ ಬರೆಯುವ, ಓದುವ ಹಂಬಲ ಸ್ವಲ್ಪವೂ ಕಡಿಮೆ ಆಗಿಲ್ಲ.

ಮೈಸೂರಿನ ಚಾಮುಂಡಿಬೆಟ್ಟದ ಸೀತಾರಾಮಶಾಸ್ತ್ರಿ ಹಾಗೂ ಸುಬ್ಬಮ್ಮ ದಂಪತಿಯ ಕೊನೆ ಮಗಳಾಗಿ 1925ರ ಜೂನ್22ರಂದು ಜನಿಸಿದ ಮಂಗಳಮ್ಮ ಮೈಸೂರು ಅಂಬಳೆ ಅಣ್ಣಯ್ಯ ಪಂಡಿತರ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ, ಮಹಾರಾಣಿ ಮಾಧ್ಯಮಿಕ ಶಾಲೆಯಲ್ಲಿ ಓದಿ ನಂತರ ಬೆಂಗಳೂರಿನ ಬಸವನಗುಡಿಯ ಟಿನ್ ಸ್ಕೂಲ್‌ನಲ್ಲಿ ಮಾಧ್ಯಮಿಕ ಶಿಕ್ಷಣ ಪೂರ್ಣಗೊಳಿಸಿದರು. 1939ರಲ್ಲಿ ಲೋಯರ್ ಸೆಕೆಂಡರಿಯಲ್ಲಿ ಅತ್ಯುನ್ನತ ದರ್ಜೆಯಲ್ಲಿ ಉತ್ತೀರ್ಣರಾದರು.

ಆಗ ಹೆಣ್ಣುಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ಒತ್ತು ನೀಡುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಮಂಗಳಮ್ಮ ಅವರ ವಿದ್ಯಾಭ್ಯಾಸವೂ ಲೋಯರ್ ಸೆಕೆಂಡರಿಗೆ ಅಂತ್ಯಗೊಂಡಿತ್ತು. ಶಿಕ್ಷಣದಿಂದ ವಂಚಿತರಾದರೂ ಧೃತಿಗೆಡದೆ ಮನೆಯಲ್ಲಿಂಯೇ ಕಸೂತಿ, ಹೊಲಿಗೆ ಮತ್ತು ಬೆತ್ತದ ಕೆಲಸಗಳಲ್ಲಿ ಪರಿಣತಿ ಸಾಧಿಸಿದರು. ಹಿಂದಿ, ತಮಿಳು, ತೆಲುಗು, ಇಂಗ್ಲಿಷ್ ಭಾಷೆಗಳನ್ನು ಕಲಿತುಕೊಂಡರು.

ಮನೆಯಲ್ಲಿ ಹಿಂದಿ ಕಲಿಕೆ : ಮನೆಯಲ್ಲಿಯೇ ವಿವಿಧ ಪರಿಣತಿ ಪಡೆದುಕೊಳ್ಳುತ್ತಿದ್ದ 13 ವರ್ಷದ ಮಂಗಳಮ್ಮಗೆ 1939ರಲ್ಲಿ ಮಂಡ್ಯದ ಮೈಶುಗರ್ ಕಾರ್ಖಾನೆಯಲ್ಲಿ ಲೆಕ್ಕ ಪರಿಶೋಧಕ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಎಸ್.ಸೀತಾರಾಮಯ್ಯ ಅವರೊಂದಿಗೆ ವಿವಾಹವೂ ಆಯಿತು. ನಂತರವೂ ಅವರ ಹಿಂದಿ ಭಾಷೆ ಕಲಿಕೆ ಮುಂದುವರೆಯಿತು. 1942ರಲ್ಲಿ ಹಿಂದಿ ಪ್ರಚಾರ ಸಭಾ ಪರೀಕ್ಷಾ ಸಮಯಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿಯೂ ಪಾಲ್ಗೊಂಡು ಜೈಲುವಾಸವನ್ನು ಅನುಭವಿಸಿದರು.



ಮಗ ನರಹರಿಯೊಂದಿಗೆ ಸಿ.ಎಸ್.ಮಂಗಳಮ್ಮ

ಸಾವಿರಾರು ವಿದ್ಯಾರ್ಥಿಗಳಿಗೆ ಅಕ್ಷರ ದಾನ : ವಿದ್ಯೆಯನ್ನ ನಾವು ಬೇರೆಯವರಿಗೆ ಹೇಳಿಕೊಟ್ಟರೇ ಅವರು ಮತ್ತೊಬ್ಬರಿಗೆ ಹೇಳಿಕೊಡುತ್ತಾರೆ ಎಂಬ ಉದ್ದೇಶದಿಂದ 1952ರಿಂದ ಮನೆಯಲ್ಲಿಂಯೇ ಇಬ್ಬರು ವಿದ್ಯಾರ್ಥಿಗಳಿಂದ ಹಿಂದಿ ಭಾಷೆ ಕಲಿಸುವ ಉಚಿತ ಶಿಕ್ಷಣ ಆರಂಭಿಸಿದರು. ಈ ಕಾಯಕ 30 ವರ್ಷ ಸುದೀರ್ಘವಾಗಿ ನಡೆದುಕೊಂಡು ಬಂದು ಜಾತಿ, ಧರ್ಮ, ಲಿಂಗ, ಮತ, ವಯೋಮಾನದ ಭೇದವಿಲ್ಲದೇ ಸಹಸ್ರಾರು ವಿದ್ಯಾರ್ಥಿಗಳಿಗೆ ಅನುಕೂಲವಾಯಿತು. ಅಂದು ಕೆಲಸ ಪಡೆದುಕೊಳ್ಳಲು ಹಿಂದಿ ಭಾಷೆ ಮುಖ್ಯವಾಗಿತ್ತು. ಇವರಿಂದ ಹಿಂದಿ ಭಾಷೆ ಕಲಿತ ಅನೇಕ ವಿದ್ಯಾರ್ಥಿಗಳು ಉದ್ಯೋಗ ಪಡೆದುಕೊಂಡು ಬದುಕು ರೂಪಿಸಿಕೊಂಡಿದ್ದಾರೆ. ಈ ನಡುವೇ ವಿದ್ಯಾರ್ಥಿಗಳಿಗೆ ಪಾಠ ಮಾಡುವ ಸಂದರ್ಭದಲ್ಲಿ ಅವರೊಟ್ಟಿಗೆ ತಾವು ರಾಷ್ಟ್ರ ಭಾಷಾ ಪ್ರವೀಣ್ ಪರೀಕ್ಷೆ ಬರೆದು ಉತ್ತೀರ್ಣರಾದರು. ಇವರ ಈ ಸಾಧನೆಯನ್ನು ಪರಿಗಣಿಸಿ, 1976ರಲ್ಲಿ ಅಂದಿನ ಉಪರಾಷ್ಟ್ರಪತಿ ಬಿ.ಡಿ.ಜತ್ತಿ ಅವರು ತಾಮ್ರಪತ್ರವನ್ನು ನೀಡಿ, ಗೌರವಿಸಿದ್ದಾರೆ.

ರಾಮಕೃಷ್ಣರ ಪ್ರೇರಣೆ : ಬೆಂಗಳೂರಿನಲ್ಲಿ ವಾಸವಿದ್ದಾಗ ಮನೆ ಬಳಿ ಇದ್ದ ರಾಮಕೃಷ್ಣ ಆಶ್ರಮಕ್ಕೆ ಮಂಗಳಮ್ಮ ಅವರ ಅಣ್ಣಂದಿರು ನಿತ್ಯವೂ ಭೇಟಿ ನೀಡುತ್ತಿದ್ದರು. ಈ ವೇಳೆ ಅವರ ಜೊತೆ ತಾನೂ ಆಶ್ರಮಕ್ಕೆ ಪ್ರಸಾದಕ್ಕಾಗಿ ಹೋಗುತ್ತಿದ್ದ ಮಂಗಳಮ್ಮ ಅಲ್ಲಿನ ಪ್ರವಚನ, ಉಪನ್ಯಾಸಗಳನ್ನು ಕೇಳಿ ಪ್ರೇರೇಪಿತರಾಗಿದ್ದರು. ಮೈಸೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದ ಸೋಮಾನಂದ ನಾಥ ಸ್ವಾಮೀಜಿ ಅವರ ಪ್ರೋತ್ಸಾಹದಿಂದ ಮಂಡ್ಯದಲ್ಲಿ ರಾಮಕೃಷ್ಣ ಪರಮಹಂಸರು ಹಾಗೂ ವಿವೇಕಾನಂದರ ಸಾಹಿತ್ಯ ಪ್ರಚಾರ ಆರಂಭಿಸಿದರು.

ಮುಂದುವರೆದ ಸೇವಾ ಕಾರ್ಯ : ಮಂಡ್ಯದಿಂದ ಮೈಸೂರಿಗೆ 1977ರಲ್ಲಿ ಬಂದ ಮಂಗಳಮ್ಮನವರು ಸಾಮಾಜಿಕ ಚಟುವಟಿಕೆ, ಹಿಂದಿ ಪ್ರಚಾರ, ಶ್ರೀರಾಮಕೃಷ್ಣರ ವಿಚಾರಧಾರೆ ಪ್ರಭಾವ, ಬಡಾವಣೆಯ



ಮಹಿಳೆಯರನ್ನು ಸೇರಿಸಿಕೊಂಡು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗಮಕ ತರಬೇತಿ ನೀಡಿದ ಅವರು, ತಾವು ಗಮಕ ಕಲಿತು ವ್ಯಾಖ್ಯಾನ, ವಾಚನ ಮಾಡಲು ಆರಂಭಿಸಿದರು. ಹೀಗೆ ಮುಂದುವರೆದ ಅವರ ಸೇವಾ ಕಾರ್ಯ ಮತ್ತೊಂದು ಹಂತಕ್ಕೆ ತಲುಪಿ 1995ರಲ್ಲಿ ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ಚೇತನ ಟ್ರಸ್ಟ್ ಸೇರಿಕೊಂಡು 13 ವರ್ಷ ಯಾವುದೇ ಪ್ರತಿಫಲಾಪೇಕ್ಷೆ ಬಯಸದೇ ನಿರಂತರ ಸೇವೆ ಮಾಡಿದರು. ಉಚಿತ ವೈದ್ಯಕೀಯ ಶಿಬಿರ, ಗ್ರಾಮೀಣ ಶಾಲೆಯಲ್ಲಿ ಬೋಧನೆ, ವಿಕಲಾಂಗ ಬಂಧುಗಳಿಗೆ ವಿಶೇಷ ತರಬೇತಿ, ಗ್ರಾಮಾಂತರ ಜನರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿದರು. ರಾಮಕೃಷ್ಣ ಆಶ್ರಮದ ಜ್ಞಾನವಾಹಿನಿ ಪ್ರಚಾರ ಕಾರ್ಯಕ್ರಮದ ಮೂಲಕ ವಿವೇಕಾನಂದರ ವಿಚಾರಧಾರೆಯನ್ನು ಹಳ್ಳಿ ಹಳ್ಳಿಗೆ ತಲುಪಿಸಿದರು.

ಬರವಣಿಗೆ ಆರಂಭ : ಚೇತನ ಟ್ರಸ್ಟ್‌ನಲ್ಲಿ ಉಳಿದುಕೊಂಡು ಸೇವಾ ಕಾರ್ಯ ಮಾಡುತ್ತಿರುವಾಗ ಬರವಣಿಗೆ ಆರಂಭಿಸಿದರು. 1990ರಿಂದ ಸಣ್ಣ ಪುಟ್ಟ ಲೇಖನಗಳನ್ನು ಬರೆಯಲು ಆರಂಭಿಸಿದರು. ರಾಮಕೃಷ್ಣ ಆಶ್ರಮದ ಸೋಮನಾಥನಂದ ಸ್ವಾಮೀಜಿ, ಸ್ವಾಮಿ ರಂಗನಾಥನಂದರು, ಪೂರ್ವಾಶ್ರಮದ ಸಹೋದರರಾದ ಸ್ವಾಮಿ ಸ್ಥಿತಾತ್ಮನಂದ, ಸ್ವಾಮಿ ಅನ್ನಾನುದು ಅವರು ಬರವಣಿಗೆಗೆ ಪ್ರೋತ್ಸಾಹ ನೀಡಿದರು.


ಅಂದು ಬರವಣಿಗೆ ಆರಂಭಿಸಿ ಈವರೆಗೂ ಮಹಾಭಾರತ ಕಥಾ ಸಂಗ್ರಹ, ಚಿಂತನ ಧಾರೆ(ಬಿಡಿ ಬರಹಗಳು), ಸ್ವಸ್ಥ ಬದುಕಿಗೆ ಭಗವದ್ಗೀತೆ ಮತ್ತು ಸಹಸ್ರಕಿರಣ, ನುಡಿನಮನ(ಕವಿತೆ ಮತ್ತು ಭಜನೆಗಳು) ಮತ್ತು ತೋಚಿದ್ದು ಗೀಚಿದ್ದು (ಚುಟುಕುಗಳು), ವಿಶ್ವಪ್ರಿಯ ಸನ್ಯಾಸಿ ಸ್ವಾಮಿ ರಂಗನಾಥನಂದ(ಜೀವನ ಪರಿಚಯ) ಶ್ರೀ ಶಾರದದೇವು ಚರಿತೆ(ಪದ್ಯರೂಪ), ಬೆಳಕಿಂಡಿ(ಬಿಡಿಬರಹಗಳು) ಮತ್ತು ತೋಚಿದ್ದು ಗೀಚಿದ್ದು (2ನೇ ಭಾಗ), ಭವ್ಯ ಜೀವನದ ಇಣುಕು ನೋಟ(ಬಿಡಿಬರಹಗಳು), ನಡಿಗೆಗೊಂದು ಬಿಡಿಗೆ(ನೀತಿಕಥೆಗಳು), ದಿವ್ಯ ಶಿಕ್ಷಣ ದೇವಿಗೆ-ಶ್ರೀಮಾತೆ, ಸರಳತೆಯಲ್ಲಿ ಬೆಳಗಿದ ದಿವ್ಯತೆ-ಶ್ರೀಮಾತೆ, ರಾಮಾಯಣದಲ್ಲಿನ ಪ್ರಮುಖ ಸೋದರರು, ವನಪರ್ವದಲ್ಲಿ ನೀತಿಕಥೆಗಳು, ಮರುಳು ಮುನಿಯನ ಕಗ್ಗ(ಸರಳ ವಿವರಣೆ), ವಿಶ್ವರೂಪ ದರ್ಶನ, ಜೀವನ ಧರ್ಮದರ್ಶಿನಿ ಸೇರಿದಂತೆ 16 ಕೃತಿಗಳು ಬರೆದಿದ್ದಾರೆ. ಆದರೆ, ಇವರ ಬರವಣಿಗೆಯ ದಾಹ ಇನ್ನೂ ತಣಿದಿಲ್ಲ.

ಜೀವನ ಶೈಲಿ ಸ್ಫೂರ್ತಿ : ನೂರನೇ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಮಂಗಳಮ್ಮ ಅವರ ಜೀವನ ಶೈಲಿಯೂ ಎಲ್ಲರನ್ನು ನಿಬ್ಬೆರಗಾಗಿಸುವಂತಿದೆ. ಬೆಳಗ್ಗೆ 4.30ಕ್ಕೆ ಎದ್ದು ದೇವರ ಸ್ತೋತ್ರ ಪಠಣ. ನಂತರ ಮನೆಯ ಹೊರಭಾಗದ ಪ್ರಾಂಗಣ ಸ್ವಚ್ಛಗೊಳಿಸಿ, ನೀರು ಹಾಕಿ, ರಂಗೋಲಿ ಬಿಡುತ್ತಾರೆ. ಬಳಿಕ 5.30ರ ವೇಳೆಗೆ ಅಡುಗೆ ಮನೆ ಸೇರಿ, ತಾವೇ ಕಾಫಿ ಕಾಯಿಸಿ ಮಗ ನರಹರಿ ಜೊತೆಗೂಡಿ ಸೇವಿಸುತ್ತ ಸವಿಚಾರಗಳನ್ನು ಚರ್ಚಿಸುತ್ತಾರೆ. ನಂತರ ಬೆಳಗಿನ ಉಪಹಾರ ಸಿದ್ಧಪಡಿಸಿಕೊಂಡು ಅಮ್ಮ-ಮಗ ಇಬ್ಬರು ಸೇವಿಸುತ್ತಾರೆ. ನಂತರ ಯಾವುದೇ ಕುರ್ಚಿ-ಟೇಬಲ್ ಬಳಸಿಕೊಳ್ಳದೇ ನೆಲದ ಮೇಲೆ ಕುಳಿತು ಪುಸ್ತಕ ಓದುವುದು, ಅಕ್ಷರಗಳನ್ನು ಮುತ್ತು ಪೋಣಿಸುವಂತೆ ಬರವಣಿಗೆ ಆರಂಭಿಸುತ್ತಾರೆ. ಯಾವುದೇ ಫ್ರಿಡ್ಜ್, ವಾಷಿಂಗ್ ಮಷಿನ್ ಇಲ್ಲದೇ ಜೀವನ ನಿರ್ವಹಣೆ ಮಾಡುತ್ತಾ ಬಂದಿದ್ದಾರೆ. ರಾತ್ರಿ ಊಟ ಮುಗಿಸಿ, ಎಲ್ಲಾ ಭಾಷೆಯ ಸುದ್ದಿ ವಾಹಿನಿಗಳನ್ನು ಒಮ್ಮೆ ನೋಡಿ ರಾಜ್ಯ, ರಾಷ್ಟ್ರ ಅಂತಾರಾಷ್ಟ್ರ ಮಟ್ಟದ ವಿದ್ಯಮಾನಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಾರೆ. ಹಾಗೇ ವಿಶೇಷ ಕಾರ್ಯಕ್ರಮಗಳಿದ್ದರೆ ನೋಡಿ ನಂತರ 9.30ಕ್ಕೆ ಮಲಗುವ ಅಭ್ಯಾಸ ರೂಢಿಸಿಕೊಂಡಿದ್ದಾರೆ.


ಪ್ರಶಸ್ತಿ ಪುರಸ್ಕಾರ : ಇವರ ಅನನ್ಯ ಸೇವೆಯನ್ನು ಗುರುತಿಸಿ 2004, 2012ರಲಿ ಬೃಂದಾವನ ಬಡಾವಣೆ ನಿವಾಸಿಗಳಿಂದ ಸನ್ಮಾನ, 2016ರಲ್ಲಿ ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭಾದಿಂದ ಸರ್.ಎಂ.ವಿಶ್ವೇಶ್ವರಯ್ಯ ಪ್ರಶಸ್ತಿ, ಚೇತನ ಟ್ರಸ್ಟ್ ವತಿಯಿಂದ ಗೌರವ ಸಮರ್ಪಣೆ, ಗಮಕ ಕಲಾ ಪರಿಷತ್‌ನಿಂದ ಸನ್ಮಾನ, 2017ರಲ್ಲಿ ಮೈಸೂರು ಆರ್ಟ್ ಗ್ಯಾಲರಿಯಿಂದ ಸನ್ಮಾನ, 2018ರಲ್ಲಿ ವೆಂಕಟಗಿರಿ ಪ್ರಕಾಶನದಿಂದ ಶಿಕ್ಷಣ ರತ್ನ ಮೇರುಗಿರಿ ಪ್ರಶಸ್ತಿ, ಆಚಾರ್ಯ ವಿದ್ಯಾಕುಲ, ವಿಜಯ ವಿಠಲ ಸಂಸ್ಥೆಯಿಂದ ಗೌರವ ಸಮರ್ಪಣೆ ಹೀಗೆ ಸಾಲು ಸಾಲು ಸನ್ಮಾನಗಳು ಶತಾಯುಷಿ ಮಂಗಳಮ್ಮನವರ ಮುಡಿಗೇರಿವೆ.

ಮಕ್ಕಳ ಚಿತ್ರಕಥೆ: 'ನಾವು ದೇವರ ದಯೆಯಿಂದ ಬದುಕಿದ್ದೇವೆ...!'

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಇಬ್ಬರು ನಾವಿಕರಿದ್ದರು. ಒಬ್ಬ ಆಸ್ತಿಕ, ಮತ್ತೊಬ್ಬ ನಾಸ್ತಿಕ. ಒಮ್ಮೆ ಅವರು ಯಾನ ಮಾಡುತ್ತಿದ್ದ ಹಡಗು ಅಪಘಾತಕ್ಕೀಡಾಗಿ ನುಚ್ಚುನೂರಾಯಿತು. ಕೊನೆಗೆ ಒಂದು ಮರದ ಹಲಗೆಯಲ್ಲಿ ಆಸರೆ ಪಡೆದ ಆ ಇಬ್ಬರೂ ಒಂದು ನಿರ್ಜನ ದ್ವೀಪವನ್ನು ಸೇರಿಕೊಂಡರು. ಆಸ್ತಿಕ, 'ನಾವು ದೇವರ ದಯೆಯಿಂದ ಬದುಕಿದ್ದೇವೆ, ಅವನಿಗೆ ಕೃತಜ್ಞತೆ ಸಲ್ಲಿಸಬೇಕು' ಎಂದ. ಆದರೆ ನಾಸ್ತಿಕ ಸಿಟ್ಟಿನಿಂದ ದೇವರು ಎಲ್ಲಿದ್ದಾನೆ ಎಂದು ಬಾಯಿಗೆ ಬಂದಂತೆ ಬೈದ.




ಅಂತೂ ಅವರಿಬ್ಬರು ಆ ಕಾಡಿನಲ್ಲಿ ಸಿಕ್ಕ ಹಣ್ಣು-ಹಂಪಲುಗಳನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಇಡೀ ದಿನ ಸಮುದ್ರದಲ್ಲಿ ಹಾದುಹೋಗುವ ಹಡಗುಗಳ ಗಮನ ತಮ್ಮತ್ತ ಸೆಳೆಯಲು 'ಹೋ...!' ಎಂದು ಕೈ ಎತ್ತಿ ಬೀಸುತ್ತಾ ಕೂಗುತ್ತಿದ್ದರು. ಆದರೆ ಇವರನ್ನು ಯಾರೂ ಗಮನಿಸಲಿಲ್ಲ. ಸಮುದ್ರ ತೀರದಲ್ಲಿ ಕುಳಿತು ಯಾವುದಾದರೂ ಹಡಗು ಬಂದು ನಮ್ಮನ್ನು ಕಾಪಾಡಬಾರದೆ....ಎಂದು ಕಾಯುತ್ತಾ ಕುಳಿತ್ತಿದ್ದರು.




ಕೆಲವು ದಿನಗಳ ನಂತರ ಹಗಲು ಬಿಸಿಲು, ರಾತ್ರಿ ಚಳಿ ತಡೆಯಲಾರದೆ ಒಂದು ಗುಡಿಸಲನ್ನು ಕಟ್ಟಿಕೊಂಡರು. ಆ ವೇಳೆಯೂ ಆಸ್ತಿಕ, ನಮಗೆ ತಿನ್ನಲು ಹಣ್ಣು-ಹಂಪಲುಗಳು ಸಿಗುತ್ತಿವೆ. ಹಾಗಾಗಿ ಬದುಕಿದ್ದೇವೆ. ನಾವು ದೇವರಿಗೆ ಕೃತಜ್ಞತೆ ಸಲ್ಲಿಸಬೇಕು ಎನ್ನುತ್ತಿದ್ದ. ಇದನ್ನು ಕೇಳಿ ನಾಸ್ತಿಕನಿಗೆ ಮೈ ಉರಿಯುತಿತ್ತು. ಹೀಗೆಯೇ ಇಬ್ಬರೂ ಹಲವಾರು ದಿನ ಕಳೆದರು.



ಒಂದು ದಿನ ಆಹಾರಕ್ಕಾಗಿ ಸುತ್ತಾಡಿ ವಾಪಸ್ಸು ಬರುವ ವೇಳೆಗೆ ಅತೀವ ಬಿಸಿಲಿನ ತಾಪಕ್ಕೆ ಅವರ ಗುಡಿಸಲಿಗೆ ಬೆಂಕಿ ಹೊತ್ತಿ ಉರಿಯುತ್ತಾ ಹೊಗೆ ಮುಗಿಲೆತ್ತರಕ್ಕೆ ಚಾಚುತ್ತಿತ್ತು. ಅದನ್ನು ಕಂಡು ಇಬ್ಬರಿಗೂ ತೀವ್ರ ಬೇಸರದ ಜೊತೆಗೆ ಆತಂಕವೂ ಉಂಟಾಯಿತು.




ಸಂಜೆ ಹೊತ್ತಿಗೆ ಒಂದು ಯಾತ್ರಿಕ ದೋಣಿ ಬಂದು, ಇಬ್ಬರನ್ನೂ ಹತ್ತಿಸಿಕೊಂಡಿತು. ಆ ದೋಣಿಯವನಿಗೆ ಧನ್ಯವಾದ ಹೇಳಿ, ನಾವಿಲ್ಲಿದ್ದೇವೆಂದು ಹೇಗೆ ತಿಳಿಯಿತು..? ಎಂದು ಕೇಳಿದರು. ಆಗ ದೋಣಿಯವನು 'ನಮ್ಮ ಹಡಗು ಇಲ್ಲಿ ಹಾದು ಹೋಗುತ್ತಿದ್ದಾಗ ಯಾರೋ ತೊಂದರೆಯಲ್ಲಿರಬೇಕು.... ಅದಕ್ಕೆ ಅವರು ಧೂಮ ಸಂಕೇತ ನೀಡುತ್ತಿರಬೇಕೆಂದು ಭಾವಿಸಿ ಇಲ್ಲಿಗೆ ಬಂದ್ವು' ಎಂದು. ಕೆಲವೇ ದಿನಗಳಲ್ಲಿ ಅವರು ಸುರಕ್ಷಿತವಾಗಿ ಊರು ತಲುಪಿದರು.



ತಕ್ಷಣ ಆಸ್ತಿಕ ನೆಲದ ಮೇಲೆ ಮಂಡಿಯೂರಿ ಕುಳಿತು ದೇವರಿಗೆ ಧನ್ಯವಾದ ಸಲ್ಲಿಸುವವನಂತೆ ಪ್ರಾರ್ಥನೆ ಮಾಡಿದ ಹಾಗೆಯೇ ಪಕ್ಕಕ್ಕೆ ತಿರುಗಿದಾಗ ನಾಸ್ತಿಕನೂ ಪ್ರಾರ್ಥಿಸುತ್ತಿದ್ದ. ಆಶ್ಚರ್ಯದಿಂದ ಅವನನ್ನು ಪ್ರಶ್ನಿಸಿದಾಗ ಅದಕ್ಕೆ ಆತ 'ನಿನ್ನ ದೇವರು ಗುಡಿಸಲನ್ನು ಸುಡದಿದ್ದರೆ ದೋಣಿಯವರಿಗೆ ನಾವಿರುವ ಸ್ಥಳ ಗೊತ್ತಾಗುತ್ತಿರಲಿಲ್ಲ, ನಾವು ಪಾರಾಗುತ್ತಲೂ ಇರಲಿಲ್ಲ...ಆದ್ದರಿಂದ ನಿನ್ನ ದೇವರಿಗೆ ನಾನೂ ಧನ್ಯವಾದ ಹೇಳುತ್ತಿದ್ದೇನೆ' ಎಂದ.

ನೀತಿ :- ಅಗೋಚರವಾದ ಮಹಾಶಕ್ತಿಯೊಂದಿದೆ. ಅದನ್ನು ನಂಬಿದರೆ ಕಷ್ಟ ಕಾಲದಲ್ಲಿ ಒಂದಲ್ಲ ಒಂದು ರೀತಿ ಅದು ನಮ್ಮನ್ನು ಪಾರು ಮಾಡುತ್ತದೆ ಎಂಬ ಬಲವಾದ ವಿಶ್ವಾಸ ಜನರ ಮನಸ್ಸಲ್ಲಿ ಬೇರೂರಿದೆ. ಹಾಗಾಗಿ ಎಲ್ಲವನ್ನೂ ಧಿಕ್ಕರಿಸುವವನು ದಿಕ್ಕೆಟ್ಟಾಗ ಆ ಮಹಾಶಕ್ತಿ ಮೊರೆ ಹೋಗಿಯೇ ಹೋಗುತ್ತಾನೆ.




ವಾರಭವಿಷ್ಯ

22.06.2025 ರಿಂದ 28.06.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮಿಥುನ, ಚಂದ್ರ-ಮೇಷ, ವೃಷಭ, ಮಿಥುನ, ಕಟಕ, ಕುಜ-ಸಿಂಹ, ಬುಧ-ಕಟಕ, ಗುರು-ಮಿಥುನ, ಶುಕ್ರ-ಮೇಷ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರ ಶುಭಫಲ ದಾಯಕನಾಗಿದ್ದು ಹರ್ಷ, ಉಲ್ಲಾಸಗಳನ್ನು ತರಲಿದ್ದಾನೆ. ಧನ, ಕನಕ, ದುಬಾರಿ ವಸ್ತು, ವಾಹನ ಹೊಂದುವ ಅವಕಾಶವಿದೆ. ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಮನಸ್ಸಾಗುವುದು. ಮಾತೃಶ್ರೀಯವರ ಆಶೀರ್ವಾದದಿಂದ ಮಾಡುವ ಕೆಲಸ ಸುಗಮವಾಗುವುದು. ಪ್ರೇಮ ಪ್ರಸಂಗಗಳು ಸುಖಮಯವೆನಿಸುವುದು. ಆರೋಗ್ಯದಲ್ಲಿ ಸುಧಾರಣೆ ಆಗುವುದು.

ಶ್ರೀ ಲಕ್ಷ್ಮಿನೃಸಿಂಹ ದರ್ಶನ. ಶುಭ ಸಂಖ್ಯೆ-7

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಪ್ರಯತ್ನಶೀಲರಿಗೆ ದೈವ ಸಹಾಯವೂ ದೊರೆಯುತ್ತದೆ. ರಫ್ತು-ಆಮದು ಉದ್ಯಮಿಗಳಿಗೆ ಭರಪೂರ ಆದಾಯ ದೊರೆಯುವುದು. ವಸ್ತ್ರಾಭರಣ ಖರೀದಿಯಿಂದ ಶ್ರೀಮತಿಗೆ ಸಂತೋಷ. ವಾರ ಮಧ್ಯೆ ಗುರುಜನರ ಭೇಟಿಯಿಂದ ನಿಮ್ಮ ಅಭಿವೃದ್ಧಿಗೆ ಪೂರಕವಾಗುವುದು. ಹಲವರಿಗೆ ಕ್ಯಾಂಪಸ್ ಸೆಲೆಕ್ಷನ್ ಮತ್ತೆ ಕೆಲವರಿಗೆ ವಾಯುಯಾನ ಯೋಗವಿದೆ. ಸಾಮಾಜಿಕವಾಗಿ ನಿಮ್ಮ ಗೌರವ-ಪ್ರತಿಷ್ಠೆಗಳು ಹೆಚ್ಚಾಗಲಿವೆ.

ಶ್ರೀ ಲಲಿತಾ ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-4

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಸಪ್ತಾಹದ ಆದಿಗೆ ಮನೋಕಾರಕ ಚಂದ್ರನ ಕೃಪೆಯಿಂದ ಹೊಸ ಆವಿಷ್ಕಾರಗಳಿಂದ ಪ್ರಸಿದ್ಧಿಗೆ ಬರುವಿರಿ. ಹೊಸ ವ್ಯಾಪಾರ ಆರಂಭಿಸಲು ಸಮಯ ಪೂರಕವಾಗಿದೆ. ಟೂರಿಸ್ಟ್ ಸಂಸ್ಥೆಗಳಿಗೆ ಉತ್ತಮ ವ್ಯವಹಾರಗಳು ಕುದುರುವುದು. ಪಾಲುದಾರಿಕೆ ವ್ಯವಹಾರಗಳನ್ನು ಎಚ್ಚರಿಕೆಯಿಂದ ಮಾಡಿ. ಸೈಟು ವಿಚಾರಗಳು ನೀವಂದುಕೊಂಡಂತೆ ಸಾಗದೆ ಬೇಸರ. ದಂಪತಿಗಳು ಹಠ ಸಾಧಿಸದೆ ಪರಸ್ಪರ ಸೋತು ಗೆಲ್ಲಿ.

ಶ್ರೀ ಹರಿನಾಮ ಸ್ಮರಣೆ, ಶುಭ ಸಂಖ್ಯೆ-8

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಪೂರ್ವಭಾವಿ ತಯಾರಿ ಇಲ್ಲದೆ ಮಾಡಿದ ಕೆಲಸದಿಂದ ನಷ್ಟವನ್ನು ಅನುಭವಿಸುವಿರಿ. ಕೃಷಿ ಉಪಕರಣ ಮಾರಾಟಗಾರರಿಗೆ ಉತ್ತಮ ಲಾಭ ದೊರೆಯುವುದು. ನಿಮ್ಮ ರಾಶ್ಯಾಧಿಪತಿ ಚಂದ್ರನ ಕೃಪೆಯಿಂದ ವಸ್ತ್ರ, ಭೋಜನ, ಶಯನಾದಿ ಸುಖಗಳನ್ನು ಅನುಭವಿಸುವಿರಿ. ವಿದ್ವಜ್ಜನರ ಭೇಟಿಯಿಂದ ಆತ್ಮಜ್ಞಾನ ಪ್ರಾಪ್ತಿ. ದಾಖಲೆಗಳನ್ನು ಪರಿಶೀಲಿಸದೆ ಸ್ಥಿರಾಸ್ತಿಯನ್ನು ಖರೀದಿಸಬೇಡಿ. ಸಣ್ಣ ಪುಟ್ಟ ಅಪಘಾತಗಳಿಂದ ಎಚ್ಚರವಿರಿ.

ಶ್ರೀ ದೇವೀ ಉಪಾಸನೆ. ಶುಭ ಸಂಖ್ಯೆ-2

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಈ ವಾರದಲ್ಲಿ ವರಮಾನ ಹೆಚ್ಚಾದಂತೆ ಖರ್ಚುಗಳೂ ಹೆಚ್ಚಾಗುವುದು. ವಾಮಮಾರ್ಗದಿಂದಲೂ ಧನ ಸಂಪತ್ತನ್ನು ಗಳಿಸುವಿರಿ. ಆಪ್ತಮಿತ್ರರ ಮಿಲನದಿಂದ ಮನೋಹರ್ಷ ಹಾಗೂ ಸ್ನೇಹಕೂಟಗಳು ಜರುಗುವುದು. ಅವರ ಉಡುಗೊರೆಗಳಿಗೆ ಹಣ ವ್ಯಯ. ಅಷ್ಟಮ ಶನಿ ಸಂಚಾರ ಇರುವ ಕಾರಣ ಆತುರದ ವಾಹನ ಚಾಲನೆಯಿಂದ ದೇಹಕ್ಕೆ ಅಪಾಯ. ಜನ್ಮ ಕೇತುವಿನಿಂದ ಕರುಳು ಸಂಬಂಧಿ ಕಾಯಿಲೆ.

ಶ್ರೀ ಸೂರ್ಯಾಷ್ಟಕ ಪಠಿಸಿ, ಶುಭ ಸಂಖ್ಯೆ-1

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಈ ವಾರದಲ್ಲಿ ಸಂಪಾದನೆ ಖರ್ಚುಗಳು ಸಮನಾಗಿ ನಡೆಯುವುದು. ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದ ವಿಚಾರಗಳು ಇತ್ಯರ್ಥವಾಗುವ ಸಾಧ್ಯತೆ ಇದೆ. ಆದರಣೀಯ ಬಂಧುಗಳು ಮನೆಗೆ ಭೇಟಿ ಹಾಗೂ ಅವರ ಉಪಚಾರ ಉಡುಗೊರೆಗಳಿಗೆ ಧನವ್ಯಯ. ಮನಸ್ಸಿಗೆ ಸಂತೋಷ ತರುವ ಪ್ರಸಂಗಗಳು ನಡೆಯುವುದು. ಮಕ್ಕಳ ಸಾಧನೆಯಿಂದ ನೀವೂ ಪ್ರಸಿದ್ಧಿಗೆ ಬರುವಿರಿ. ವಾಯು ಸಂಬಂಧಿ ಕಾಯಿಲೆ ಕಾಡುವುದು.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-2

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಶನಿದೇವರ ಕಾಟವಿಲ್ಲ, ಗುರುದೇವನ ಕೃಪೆಗೆ ಪಾತ್ರರಾಗಿರುವಿರಿ. ನಿಂತು ಹೋಗಿದ್ದ ಮಹತ್ವದ ಕಾರ್ಯಗಳು ಮರು ಚಾಲನೆಗೊಳ್ಳಲಿವೆ. ನಿವೇಶನ, ಮನೆ ಹೊಂದಲು ಪ್ರಯತ್ನಿಸಿ, ಧನಾತ್ಮಕ ಫಲವಿದೆ. ಜೊತೆಗೆ ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯಲಿವೆ. ಕೋರ್ಟು ವ್ಯವಹಾರಗಳಲ್ಲಿ ಅನುಕೂಲಕರ ಫಲವನ್ನು ನಿರೀಕ್ಷಿಸಬಹುದು. ಅಶುಭ ಕೇತು ವಿಷಾಹಾರ ಭುಂಜನಕ್ಕೆ ಕಾರಣನಾಗುವನು.

ಶ್ರೀ ಪುಣ್ಯಕ್ಷೇತ್ರ ಸಂದರ್ಶನ ಮಾಡಿ. ಶುಭ ಸಂಖ್ಯೆ-5

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ವಾರದಾರಂಭಕ್ಕೆ ಕೊಂಚ ಸಂತಸ ನೆಮ್ಮದಿಗಳು. ವಾರ ಸಾಗಿದಂತೆ ಸಮಸ್ಯೆಯ ಸುಳಿಗೆ ಸಿಲುಕುವಿರಿ. ವಿಚಾರಹೀನ ನಿರ್ಧಾರಗಳು ಆರ್ಥಿಕ ನಷ್ಟಕ್ಕೂ, ಮಾನಸಿಕ ಒತ್ತಡಗಳಿಂದ ಜರ್ಜರಿತರಾಗುವಿರಿ. ಮಕ್ಕಳು ಅಡ್ಡದಾರಿ ಹಿಡಿಯುವುದರಿಂದ ನಿಮ್ಮ ಮಾನಸಿಕ ಸಮತೋಲನ ಬಿಗಡಾಯಿಸುವುದು. ಪಾಲಿಗೆ ಬಂದದ್ದು ಪಂಚಾಮೃತ ಎಂಬ ತತ್ವವನ್ನು ಪಾಲಿಸಿ, ಫಲವನ್ನು ದೈವವೇ ನಿರ್ಧರಿಸಲಿ.

ಶ್ರೀ ಗಣಪತಿ ಉಪಾಸನೆ, ಶುಭ ಸಂಖ್ಯೆ-7

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಗುರುಬಲದ ಕೃಪೆಯಿಂದ ಆಸ್ತಿ ವಿವಾದಗಳು ನಿಮ್ಮ ಪರವಾಗಿ ಇರುವುದು. ಪ್ರಭಾವಿ ವ್ಯಕ್ತಿಗಳ ಸಂಪರ್ಕದಿಂದ ಭೂಮಿ ಕ್ರಯ-ವಿಕ್ರಯದ ಹಣ ಕೈ ಸೇರುವುದು. ಕಲಾವಿದರಿಗೆ ಸರ್ಕಾರದಿಂದ ಗೌರವ ಪ್ರಾಪ್ತಿ. ನೂತನ ವಾಹನ ಖರೀದಿ ಯೋಗವೂ ಉಂಟು. ಕನ್ಯಾರ್ಥಿಗಳು ಪ್ರಯತ್ನವನ್ನು ಮುಂದುವರೆಸಬೇಕು. ಹಲವರಿಗೆ ವಿದೇಶಿ ಸಂಚಾರ ಉಂಟಾಗಬಹುದು.

ಶ್ರೀ ಔದಂಬರ ವೃಕ್ಷ ಪ್ರದಕ್ಷಿಣೆ. ಶುಭ ಸಂಖ್ಯೆ-9

ಮಕರ (ಬೊ.ಜ.ಜಿ.ಶಿ.ಖು.ಖೆ.ಖೊ.ಗ.ಗಿ.)

ಈ ವಾರದಲ್ಲಿ ನಿಮ್ಮ ವೈಯಕ್ತಿಕ ವಿಚಾರದಲ್ಲೂ, ಸಾಮಾಜಿಕ ಸಂಬಂಧಗಳಲ್ಲಿಯೂ ಸಮಾಧಾನ ಚಿತ್ತದಿಂದ ನಡೆದುಕೊಳ್ಳಬೇಕು. 'ಧರ್ಮೋ ರಕ್ಷತಿ ರಕ್ಷಿತಃ' ಎಂಬಂತೆ ಧರ್ಮಮಾರ್ಗವನ್ನು ಬಿಡಬೇಡಿ. ಋಣಾತ್ಮಕವಾಗಿ ಚಿಂತಿಸುವುದನ್ನು ಬಿಟ್ಟರೆ ಸಾಧನೆಯ ಮಾರ್ಗ ತೆರೆದುಕೊಳ್ಳುವುದು. ಜೊತೆಗೆ ನಂಬಿಸಿ ಮೋಸ ಮಾಡುವವರಿದ್ದಾರೆ ಜಾಗೃತರಾಗಿರಿ. ನಿಮ್ಮ ರಾಶ್ಯಾಧಿಪತಿ ಶನಿ ಶುಭ ಗೋಚರದಲ್ಲಿದ್ದು ನಿಮ್ಮನ್ನು ರಕ್ಷಿಸುವರು.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-4

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ನಿಮ್ಮ ಜಾಣತನದಿಂದ ಆರ್ಥಿಕ ಪರಿಸ್ಥಿತಿಯಲ್ಲಿ ಗಣನೀಯ ಪ್ರಗತಿ ಕಂಡು ಬರುವುದು. ಅತಿಥಿ ಜನರ ಸ್ವಾಗತಕ್ಕೆ ಸಜ್ಜಾಗಿರಿ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯಲಿವೆ. ವಿವಾಹ ಯೋಗ್ಯರಿಗೆ ಸೂಕ್ತ ವರ-ವಧು ದೊರೆಯುವ ಸಾಧ್ಯತೆ ಇದೆ. ಸ್ಥಿರಾಸ್ತಿ ಕೊಳ್ಳಲು ಗುರುಕೃಪೆ ಇದೆ. ಸಾಲದ ಪ್ರಯತ್ನ ಸಫಲವಾಗುವುದು. ಪ್ರವಾಸೋದ್ಯಮ ನಡೆಸುವವರಿಗೆ ಉತ್ತಮ ಆದಾಯವಾಗುವುದು.

ಶ್ರೀ ನಂಜುಂಡೇಶ್ವರಸ್ವಾಮಿ ದರ್ಶನ. ಶುಭ ಸಂಖ್ಯೆ-3

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಹೆಚ್ಚಿನ ಧನಾದಾಯವಾದರೂ ವಿಪರೀತ ಖರ್ಚುಗಳು. ನಿಮ್ಮ ರಾಶಿಯಲ್ಲೇ ಶನಿ ಸಂಚಾರ ಇರುವ ಕಾರಣ ಫಲಪ್ರಾಪ್ತಿ ಕಾಲದಲ್ಲಿ ವಿಳಂಬ. ಬರಬೇಕಾದ ಹಣ ಕೈ ಸೇರದು. ನ್ಯಾಯಾಲಯ ವಿಚಾರಗಳಲ್ಲಿ ಹಿನ್ನಡೆಯನ್ನು ಅನುಭವಿಸಬೇಕಾದೀತು. ಸರ್ಕಾರಿ ನೌಕರರು ಅಡ್ಡ ಮಾರ್ಗದಲ್ಲಿ ಸಾಗಿ ತೊಂದರೆಗೆ ಗುರಿಯಾಗುವರು. ವಾರದ ಕಡೆಗೆ ದ್ರವ್ಯಲಾಭ, ಆಟೋಮೊಬೈಲ್ ವಿತರಕರಿಗೆ ಶುಭ ಸಮಯ.

ಶ್ರೀ ಅಶ್ವತ್ಥ ವೃಕ್ಷ ಪ್ರದಕ್ಷಿಣೆ, ಶುಭ ಸಂಖ್ಯೆ-5

ಯೋಗದಿಂದ ದೇಹ, ಮನಸ್ಸು ಜಾಗೃತ



ಎನ್‌ಕೆಎಫ್ ಪಬ್ಲಿಕ್ ಶಾಲೆಯಲ್ಲಿ ನಡೆದ ಅಂತರ ರಾಷ್ಟ್ರೀಯ ಯೋಗ ದಿನಾಚರಣೆ.

ತಿ.ನರಸೀಪುರ, ಜೂ.21– ಮನಸ್ಸನ್ನು ಶಾಂತಗೊಳಿಸಿ ದೇಹ ಹಾಗೂ ಮನಸ್ಸನ್ನು ಜಾಗೃತಗೊಳಿಸುವುದೇ ಯೋಗದ ಗುರಿ, ಯೋಗವು ಆರೋಗ್ಯವನ್ನು ಅಭಿವೃದ್ಧಿ ಪಡಿಸುವಲ್ಲಿ ಹೆಚ್ಚಿನ ಪಾತ್ರ ಹೊಂದಿದೆ ಎಂದು ಎನ್‌ಕೆಎಫ್ ಪಬ್ಲಿಕ್ ಶಾಲೆಯ ಖಜಾಂಚಿಯೂ ಆಗಿರುವ ಪುರಸಭೆ ಸದಸ್ಯ ಅಹಮದ್ ಸೈಯದ್ ಅಭಿಪ್ರಾಯಪಟ್ಟರು.

ಪಟ್ಟಣದ ಹೊರ ವಲಯದ ಎನ್‌ಕೆಎಫ್ ಪಬ್ಲಿಕ್ ಶಾಲೆಯಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳೊಂದಿಗೆ ಯೋಗ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪ್ರಾಚೀನ ಕಾಲದಿಂದಲೂ ಬಂದಿರುವ ಈ ಯೋಗ ಇಂದು ಇಡೀ ವಿಶ್ವದ ಮನ್ನಣೆ ಪಡೆದಿದೆ, ಯೋಗವನ್ನು ಋಷಿ ಮುನಿಗಳು ಅನುಷ್ಠಾನಗೊಳಿಸಿ ಜಗತ್ತಿಗೆ ನೀಡಿದ ದೊಡ್ಡ ಕೊಡುಗೆ. ಯೋಗದಿಂದ ದೇಹ, ಮನಸ್ಸು ಶುದ್ಧಿಯಾಗುತ್ತದೆ. ಉತ್ತಮ ಆರೋಗ್ಯ ಹೊಂದಿ ಸಶಕ್ತ ಸಮಾಜ ನಿರ್ಮಾಣಕ್ಕೆ ಸಹಾಯವಾಗುತ್ತಿದೆ. ಮಾನಸಿಕ ಸ್ಥೈರ್ಯ ಹೆಚ್ಚಾಗಿ, ಶಾಂತಿ, ಸಹನೆ ಎಲ್ಲರಲ್ಲಿ ನೆಲೆಸಲಿದೆ' ಎಂದು ಹೇಳಿದರು.

ದಿನನಿತ್ಯ ಯೋಗಾಭ್ಯಾಸ ಮಾಡುವವರು, ಇಡೀ ದಿನ ಚೈತನ್ಯದಿಂದ ಕಾರ್ಯನಿರ್ವಹಿಸಲು ಸಾಧ್ಯವಿದೆ. ಯೋಗವು ಇಂದಿನ ಸಾಮಾಜಿಕ ಬದುಕಿನಲ್ಲಿ ಒತ್ತಡಗಳನ್ನು ಕೆಲವೇ ನಿಮಿಷಗಳಲ್ಲಿ ನಿವಾರಿಸುವ ದಿವ್ಯ ಔಷಧಿಯಾಗಿದೆ. ದೇಹ ಮತ್ತು ಮನಸ್ಸಿನ ಪರಿಶುದ್ಧತೆಗೆ ಹಾಗೂ ಆತ್ಮದ ಅನುಸಂಧಾನಕ್ಕೆ ಯೋಗ ಅಗತ್ಯ. ವೇದಗಳ ಕಾಲದಿಂದಲೂ ಯೋಗವನ್ನು ನಾವು ಕಾಣಬಹುದು. ಹರಿ–ಹರರೂ ಯೋಗಾಭ್ಯಾಸ ಮಾಡುತ್ತಿದ್ದರು. ಯೋಗದಿಂದ ಮನಸ್ಸಿನ ಏಕಾಗ್ರತೆ, ಸಮಚಿತ್ತತೆ, ಸಾಮರಸ್ಯ ಸಾಧ್ಯ ಎಂದರು. ನಮ್ಮೆಲ್ಲರ ಉತ್ತಮ ಆರೋಗ್ಯ ಮತ್ತು ದೇಶದ ಶಿಸ್ತು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಶಾಲೆಯ ಮುಖ್ಯ ಶಿಕ್ಷಕಿ ಹೇಮ ಮಾತನಾಡಿ ಯೋಗಾಭ್ಯಾಸದಿಂದ ದೇಹ ಮತ್ತು ಮನಸ್ಸು ಆರೋಗ್ಯದಿಂದ ಕೂಡಿರಲು ಸಾಧ್ಯ ಯೋಗ ದಿನಾಚರಣೆ ಒಂದು ಸಾಂಕೇತಿಕ ಸಂದೇಶ. ಯೋಗವನ್ನು ನಮ್ಮ ಜೀವನದಲ್ಲಿ ಉತ್ತಮವಾಗಿ ಅಳವಡಿಸಿಕೊಳ್ಳಬೇಕು. ಯೋಗದ ಮಹತ್ವವನ್ನು ಸಾರುವ ಮೂಲಕ ಮುಂದಿನ ಪೀಳಿಗೆಗೂ ನಾವು ಮಾದರಿಯಾಗಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಶಾಲೆಯ ಜಂಟಿ ಕಾರ್ಯದರ್ಶಿ ಆಫ್ರಿನ್, ಇನಾಯತ್, ಸೈಯದ್ ಪಾಷ, ಶಿಕ್ಷಕಿಯರಾದ ಗೀತಾ, ನೂರ್ ಹಾಜಿರಾ, ರೇಖಾ, ಶಿಲ್ಪಶ್ರೀ, ಶಿಲ್ಪ, ರೇಖಾ, ರಶ್ಮಿ, ಅನಿತಾ, ಶೈಲಾ, ಪಲ್ಲವಿ, ಅರ್ಜುಮನ್ ಭಾನು, ರಕ್ಷಿತ, ನಾಗವೇಣಿ, ಪ್ರಿಯಾಂಕ, ಪದ್ಮಪ್ರಿಯ, ರಝಿಯಾ ಸೇರಿದಂತೆ ಪೋಷಕರು, ವಿದ್ಯಾರ್ಥಿಗಳು ಇದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ



ಹೆಚ್.ಡಿ.ಕೋಟೆ, ಜೂ.21– ಹಾರ್ಟ್ ಸಂಸ್ಥೆ ಮೈಸೂರು, ರೋಟರಿ ಕ್ಲಬ್ ಆಫ್ ಮೈಸೂರು ವೆಸ್ಟ್, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಹೆಚ್.ಡಿ.ಕೋಟೆ, ನಾರಾಯಣ ಹೆಲ್ತ್ ಮೈಸೂರು, ಎಎಸ್‌ಜಿ ಕಣ್ಣಿನ ಆಸ್ಪತ್ರೆ ಮೈಸೂರು, ಗ್ರಾಪಂ ಕ್ಯಾತನಹಳ್ಳಿ, ಪ್ರಾಥಮಿಕ ಆರೋಗ್ಯ ಕೇಂದ್ರ ಕ್ಯಾತನಹಳ್ಳಿ ಇವರ ಸಹಯೋಗದೊಂದಿಗೆ ಕ್ಯಾತನಹಳ್ಳಿ ಆರೋಗ್ಯ ಕೇಂದ್ರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಆರೋಗ್ಯ ತಪಾಸಣಾ ಶಿಬಿರವನ್ನು ತಹಸೀಲ್ದಾರ್ ಶ್ರೀನಿವಾಸ್ ಉದ್ಘಾಟಿಸಿದರು. ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿದರು. ಶಿಬಿರದಲ್ಲಿ 75 ಮಂದಿ ಭಾಗವಹಿಸಿದ್ದರು. ಈ ಪೈಕಿ 45 ಮಂದಿ ಕಣ್ಣಿನ ಪರೀಕ್ಷೆ, 20 ಮಂದಿ ಶ್ವಾಸಕೋಶ ಪರೀಕ್ಷೆ, 25 ಮಂದಿ ಇಸಿಜಿ ಸೇರಿದಂತೆ ಬಿಪಿ, ಶುಗರ್, ಸಾಮಾನ್ಯ ತಪಾಸಣೆಗೆ ಒಳಪಟ್ಟರು.

ಈ ವೇಳೆ ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ವೈದ್ಯರು ಹಾಜರಿದ್ದರು.

ಯೋಗ ಮಹಾ ಮನೆಯಲ್ಲಿ ಸಾಮೂಹಿಕ ಯೋಗ



ಯೋಗ ಮಹಾಮನೆಯಲ್ಲಿ ನಡೆದ ಸಾಮೂಹಿಕ ಯೋಗಾಭ್ಯಾಸ.

ನಂಜನಗೂಡು: ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿರುವ ಯೋಗ ಮಹಾಮನೆಯಲ್ಲಿ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಹಾಗೂ ನಂಜನಗೂಡು ಯೋಗ ಫೌಂಡೇಷನ್ ಆಶ್ರಯದಲ್ಲಿ ವಿಶ್ವ ಯೋಗ ದಿನಾಚರಣೆ ಅಂಗವಾಗಿ ನೂರಾರು ಯೋಗ ಬಂಧುಗಳು ಸಾಮೂಹಿಕ ಯೋಗಾಭ್ಯಾಸ ಮಾಡಿದರು.

ಸಮಿತಿಯ ಪ್ರಧಾನ ಯೋಗ ಶಿಕ್ಷಕ ಪ್ರಕಾಶ್ ಜಿ.ಉಡಿಗಾಲ ಅವರ ಮಾರ್ಗದರ್ಶನದಲ್ಲಿ ಕೇಂದ್ರ ಸರ್ಕಾರ ಹೊರಡಿಸಿರುವ ಶಿಷ್ಟಾಚಾರದಂತೆ ಆಸನ, ಪ್ರಾಣಾಯಾಮ ಹಾಗೂ ಧ್ಯಾನವನ್ನು ಮಾಡುವ ಮೂಲಕ ವಿಶ್ವ ಯೋಗ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು.

ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಕಾರ್ಯದರ್ಶಿ ಎನ್.ಆರ್.ಗಣೇಶ್ ಮೂರ್ತಿ ಮಾತನಾಡಿ, ಈ ಬಾರಿ ವಿಶ್ವಸಂಸ್ಥೆಯು ಒಂದು ಭೂಮಿ, ಒಂದು ಆರೋಗ್ಯ ಧ್ಯೇಯದಡಿ ಇಡೀ ವಿಶ್ವದೆಲ್ಲೆಡೆ ಯೋಗವನ್ನು ಆಚರಿಸುತ್ತಿರುವುದು ಪ್ರಸ್ತುತ ದಿನಮಾನಕ್ಕೆ ಬಹಳ ಸೂಕ್ತವಾಗಿದೆ. ವಿಶ್ವದಲ್ಲಿ ನಡೆಯುತ್ತಿರುವ ಕಲ್ಲಹ ಹಾಗೂ ಆತಂಕಕಾರಿ ಬೆಳವಣಿಗೆಗಳಿಂದ ಶಾಂತಿ, ನೆಮ್ಮದಿ, ಆರೋಗ್ಯಕ್ಕೆ ಧಕ್ಕೆ ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ವಿಶ್ವವೆಲ್ಲ ಒಂದು, ಇರುವುದೊಂದೇ ಆರೋಗ್ಯ ಎಂಬ ಸೂಕ್ಷ್ಮತೆಯನ್ನು ಇಡೀ ವಿಶ್ವಕ್ಕೆ ಅರಿವು ಮೂಡಿಸುವ ನಿಟ್ಟಿನಲ್ಲಿ ಯೋಗ ದಿನಾಚರಣೆ ಈ ಬಾರಿ ಮಹತ್ವದ್ದಾಗಲಿದೆ ಎಂದರು.

ದೇಹಕ್ಕೆ ಆರೋಗ್ಯ, ಮನಸ್ಸಿಗೆ ಶಾಂತಿ ಸಮಾಧಾನ ಇಂದಿನ ಅಗತ್ಯವಾಗಿದೆ. ವೇಗವಾಗಿ ಓಡುತ್ತಿರುವ ಪ್ರಪಂಚದಲ್ಲಿ ನಾವು ನಮ್ಮತನವನ್ನು ಕಳೆದುಕೊಳ್ಳುತ್ತಿದ್ದೇವೆ. ನಮ್ಮ ಪೂರ್ವಿಕರು ಹಾಕಿಕೊಟ್ಟ ಯೋಗ, ಧ್ಯಾನ, ಆಧ್ಯಾತ್ಮ ಬದುಕಿನ ಅಡಿಗಲ್ಲಾಗಬೇಕು. ಆಗಮಾತ್ರ ನೆಮ್ಮದಿದಾಯಕ ಜೀವನ ನಮ್ಮದಾಗಿಸಿಕೊಳ್ಳಬಹುದಾಗಿದೆ. ಈ ದಿಶೆಯಲ್ಲಿ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯು ಉಚಿತವಾಗಿ ಯೋಗ ಶಿಕ್ಷಣವನ್ನು ಹಲವಾರು ದಶಕಗಳಿಂದ ನಾಡಿನಾದ್ಯಂತ ನೀಡುತ್ತಿದೆ ಎಂದು ಹೇಳಿದರು.

ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಅಧ್ಯಕ್ಷ ಆರ್.ವಿ.ರೇವಣ್ಣ, ನಂಜನಗೂಡು ಯೋಗ ಫೌಂಡೇಶನ್ ಗೌರವಾಧ್ಯಕ್ಷ ಹಂಡುವಿನಹಳ್ಳಿ ರಾಜು, ಅಧ್ಯಕ್ಷ ಡಿಗ್ಗೇನಹಳ್ಳಿ ಪ್ರಕಾಶ್ ಹಾಜರಿದ್ದರು.

ವಿದ್ಯುತ್ ವ್ಯತ್ಯಯ

ನಂಜನಗೂಡು: ನಂಜನಗೂಡು ಪಟ್ಟಣ, ಕಲ್ಲಹಳ್ಳಿ ಕೈಗಾರಿಕಾ ಪ್ರದೇಶ, ದೇಬೂರು, ಹಂಡುವಿನಹಳ್ಳಿ, ತಾಂಡವಪುರ, ಚಿಕ್ಕಯ್ಯನ ಛತ್ರ ಮರಳೂರು, ಕೆಂಪಿಸಿದ್ದನಹುಂಡಿ, ಹುಳಿಮಾವು ಗ್ರಾಮ ವ್ಯಾಪ್ತಿಯಲ್ಲಿ ಭಾನುವಾರ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸುತ್ತೂರು ಶ್ರೀಕ್ಷೇತ್ರದಲ್ಲಿ ಯೋಗ ದಿನ ಆಚರಣೆ

ಸುತ್ತೂರು, ಜೂ.21– ಯೋಗವು ಅನೇಕ ರೋಗಗಳಿಗೆ ರಾಮಬಾಣವಾಗಿದೆ ಎಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಉಪಕುಲಪತಿಗಳಾದ ಡಾ.ಹೆಚ್.ಬಸವನಗೌಡಪ್ಪ ಅವರು ಅಭಿಪ್ರಾಯಪಟ್ಟರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಹಾಗೂ ಜೆಎಸ್‌ಎಸ್ ವಸತಿ ಶಾಲೆಯ ಸಹಯೋಗದೊಂದಿಗೆ ಆಯೋಜಿಸಿದ್ದ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಶರೀರ, ಮನಸ್ಸು ಮತ್ತು ಏಕತೆಗಾಗಿ ಉಪಯೋಗಿಸಲಾದ ಯೋಗ ಪಥವು ಜಗತ್ತಿನಾದ್ಯಂತ ಜನಪ್ರಿಯವಾಗಿದೆ. ಯೋಗದ ಮೂಲಕ ಶ್ರದ್ಧೆ, ನಿಯಮ, ಧ್ಯಾನ ಮತ್ತು ಸಮಾಧಿಯ ಮಾರ್ಗದಿಂದ ಪರಿಪೂರ್ಣತೆಯತ್ತ ಸಾಗಬಹುದು ಎಂದು ನುಡಿದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಅಕಾಡೆಮಿಕ್ಸ್‌ನ ಡೀನ್ ಆದ ಡಾ.ವಿಶಾಲ್ ಕುಮಾರ್ ಗುಪ್ತಾ ಮಾತನಾಡಿ, ಯೋಗ ಒಂದು ದಿನದ ಆಚರಣೆಗೆ ಸೀಮಿತವಾಗಬಾರದು. ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಮಾನಸಿಕ ಮತ್ತು ದೈಹಿಕ ಒತ್ತಡ ನಿವಾರಣೆಯಾಗುತ್ತದೆ ಎಂದರು.

ಜೆಎಸ್‌ಎಸ್ ಸಂಸ್ಥೆಯ ಸಂಯೋಜನಾಧಿಕಾರಿಗಳಾದ ಜಿ.ಎಲ್.ತ್ರಿಪುರಾಂತಕ ಅವರು ಮಾತನಾಡುತ್ತಾ, ಇಂದು ಕಾರು, ಬಂಗಲೆ ಇತ್ಯಾದಿ ದುಬಾರಿ ವಸ್ತುಗಳನ್ನು ಹಣ ಕೊಟ್ಟು ಕೊಂಡುಕೊಳ್ಳಬಹುದು. ಆದರೆ ಆರೋಗ್ಯ ಕೊಳ್ಳಲು ಸಾಧ್ಯವಿಲ್ಲ. ಒಂದು ಕಾಲದಲ್ಲಿ ಹಾವಾಡಿಗರ ದೇಶ ಎಂದು ಲೇವಡಿ ಮಾಡಿಸಿಕೊಳ್ಳುತ್ತಿದ್ದ ಭಾರತ ದೇಶ. ಇಡೀ ಜಗತ್ತಿಗೆ ಯೋಗದ ಮುಖಾಂತರ ಆರೋಗ್ಯ ಜಾಗೃತಿ ಮೂಡಿಸಿದೆ. ಯುವ ಜನರು ಜಿಮ್ ಸೇರಲು ಉತ್ಸಾಹ ತೋರುವಂತೆ ಯೋಗಾಭ್ಯಾಸಕ್ಕೂ ಉತ್ಸಾಹ ತೋರಬೇಕು. ಯೋಗಕ್ಕೆ ಅನೇಕ ರೋಗಗಳನ್ನು ತಡೆಗಟ್ಟುವ ಶಕ್ತಿ ಇದೆ, ಆರೋಗ್ಯ ವೃದ್ಧಿಸಿಕೊಂಡು ನಿಮ್ಮ ಆಯಸ್ಸನ್ನು ಸಹ ವೃದ್ಧಿಮಾಡಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮವನ್ನು ನವದೆಹಲಿಯ ಆಯುಷ್ ಇಲಾಖೆಯ ಸಿ.ಸಿ.ಆರ್. ವೈಎನ್ ರವರು ಪ್ರಾಯೋಜಿಸಿದ್ದರು. ಕಾರ್ಯಕ್ರಮದಲ್ಲಿ ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಮುಖ್ಯಸ್ಥರುಗಳು, ಶಿಕ್ಷಕರು, ಬೋಧಕೇತರ ಸಿಬ್ಬಂದಿಗಳು ಭಾಗವಹಿಸಿದ್ದರು.



ಸುತ್ತೂರು ಜೆಎಸ್‌ಎಸ್ ವಸತಿ ಶಾಲೆ ಹಾಗೂ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಸಹಯೋಗದೊಂದಿಗೆ ನಡೆದ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಡಾ.ಅಕ್ಷತ ಸ್ವಾಗತಿಸಿ, ನಿರೂಪಿಸಿದರು. ಡಾ.ಎಂ.ಯು.ಸುಜನ್ ವಂದಿಸಿದರು. ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಮುಖ್ಯಸ್ಥರುಗಳು, ಸಿಬ್ಬಂದಿ ವರ್ಗ ಹಾಗೂ ಸುತ್ತೂರು ವಸತಿ ಶಾಲೆಯ 4000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಎಲ್ಲಾ ಗ್ರಾಪಂಗಳಲ್ಲಿ ವಿಶ್ವ ಯೋಗ ದಿನ ಆಚರಣೆ



ಹುಣಸೂರು, ಜೂ.21–ಪ್ರಸ್ತುತ ಎಲ್ಲರೂ ಒತ್ತಡದ ಬದುಕಿನಲ್ಲಿ ಜೀವನ ನಡೆಸುತ್ತಿದ್ದು, ಒಂದಲ್ಲಾ ಒಂದು ಆರೋಗ್ಯ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇದರಿಂದ ಮುಕ್ತರಾಗಲು ನಾವು ನಮ್ಮ ಜೀವನದ ಪದ್ಧತಿಯನ್ನು ಕೊಂಚ ಬದಲಾಯಿಸಿಕೊಳ್ಳುವ ಅನಿವಾರ್ಯತೆಯಿದ್ದು, ಪ್ರತಿನಿತ್ಯ ಯೋಗಭ್ಯಾಸದಿಂದ ಉತ್ತಮ ಆರೋಗ್ಯ ಪಡೆಯಬಹುದಾಗಿದೆ ಎಂದು ತಾಲೂಕು ಎನ್‌ಆರ್‌ಎಲ್‌ಎಂ ಕಾರ್ಯಕ್ರಮ ವ್ಯವಸ್ಥಾಪಕರಾದ ಮಂಜುಳಾ ನರಗುಂದ ತಿಳಿಸಿದರು.

ವಿಶ್ವ ಯೋಗ ದಿನದ ಅಂಗವಾಗಿ ಯೋಗ ಸಂಗಮ ಮತ್ತು ಹರಿತ್ಯೋಗವೆಂಬ ಕಾರ್ಯಕ್ರಮದಡಿ ಮ–ನರೇಗಾ ಯೋಜನೆಯಡಿ ಅನುಷ್ಠಾನಗೊಂಡಿರುವ ಅಮೃತ ಸರೋವರ ದಂಡೆಯಾದ ಬನ್ನಿಕುಪ್ಪೆ ಗ್ರಾಮ ಪಂಚಾಯಿತಿಯ ಬನ್ನಮ್ಮನ ಕೆರೆ ದಂಡೆಯ ಮೇಲೆ ಅರ್ಥಪೂರ್ಣ ಯೋಗ ದಿನದ ಉಸ್ತುವಾರಿ ವಹಿಸಿ ಅವರು ಮಾತನಾಡಿದರು.

ಕೊತ್ತೇಗಾಲ, ಉಯಿಗೊಂಡನಹಳ್ಳಿ, ಹೆಗ್ಗಂದೂರು, ಸಿಂಗಮಾರನಹಳ್ಳಿ, ಮೂಕನಹಳ್ಳಿ, ಗಾವಡಗೆರೆ, ಬಿಳಿಗೆರೆ ಸೇರಿದಂತೆ ತಾಲೂಕಿನ ಎಲ್ಲಾ ಗ್ರಾಪಂ ಹಾಗೂ ಸರ್ಕಾರಿ ಶಾಲೆಗಳ ಸಹಯೋಗದಲ್ಲಿ ಯೋಗ ಸಂಗಮ ಮತ್ತು ಹರಿತ್ಯೋಗವೆಂಬ ಕಾರ್ಯಕ್ರಮದಡಿ ಎಲ್ಲಾ ಗ್ರಾಪಂ ವ್ಯಾಪ್ತಿಯ ಸರ್ಕಾರಿ ಶಾಲೆಗಳಲ್ಲಿ ಹಾಗೂ ಅಮೃತ ಸರೋವರ ಅನುಷ್ಠಾನಗೊಂಡಿರುವ ಸ್ಥಳಗಳಲ್ಲಿ ವಿವಿಧ ಯೋಗಾಸನದ ಅಭ್ಯಾಸ ನಡೆಸಲಾಯಿತು. ಸಾರ್ವಜನಿಕರು ಪಾಲ್ಗೊಂಡಿದ್ದರು.

ಯೋಗ ವಿಜ್ಞಾನ ಯಾವುದೇ ಜಾತಿ, ಧರ್ಮಕ್ಕೆ ಸೀಮಿತವಲ್ಲ

ತಿ.ನರಸೀಪುರ, ಜೂ.21– ಯೋಗವೆಂದರೆ ಆಸನ ಪ್ರಾಣಾಯಾಮಗಳಷ್ಟೇ ಅಲ್ಲದೆ, ಎಂಟು ಅಂಗಗಳಿರುವ ಯೋಗ ಶಾಸ್ತ್ರವಷ್ಟೇ ಅಲ್ಲದೆ ಅದು ಭಾರತವು ಸಾಕ್ಷಾತ್ಕರಿಸಿಕೊಂಡಿರುವ ಒಂದು ಜೀವನದೃಷ್ಟಿಯಾಗಿದೆ ಎಂದು ಮಾಜಿ ಸಚಿವ ಎನ್.ಮಹೇಶ್ ಹೇಳಿದರು.

ಪಟ್ಟಣದ ಪಿಆರ್‌ಎಂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಕಲಾ ಪದ್ಮ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. ಯೋಗ ವಿಜ್ಞಾನವು ಕೇವಲ ಯಾವುದೋ ಒಂದು ಜಾತಿ, ಧರ್ಮಕ್ಕೆ ಮೀಸಲಾದುದ್ದಲ್ಲ, ಪ್ರಪಂಚದ ಎಲ್ಲಾ ಧರ್ಮೀಯರು ಯೋಗವನ್ನು ಒಪ್ಪಿಕೊಂಡಿದ್ದಾರೆಂದರೇ ಇದು ಧಾರ್ಮಿಕ ಆಚರಣೆ ಅಲ್ಲ ಎಂಬುದು ಸ್ಪಷ್ಟವಾಗಿದೆ. ಪ್ರಧಾನಿ ನರೇಂದ್ರ ಮೋದಿಯವರು ಸಹ ಇಂದು ಆಂಧ್ರ ಪ್ರದೇಶದಲ್ಲಿ 5 ಲಕ್ಷ ಮಂದಿಯೊಂದಿಗೆ ಯೋಗಾಸನ ಮಾಡುತ್ತಿದ್ದಾರೆ.



ಯೋಗ ಕಾರ್ಯಕ್ರಮವನ್ನು ಮಾಜಿ ಸಚಿವ ಎನ್.ಮಹೇಶ್ ಉದ್ಘಾಟಿಸಿದರು.

ಹಾಗಾಗಿ ಇಂದು ಯೋಗ ವಿಜ್ಞಾನ ಪ್ರಪಂಚದೆಲ್ಲೆಡೆ ವ್ಯಾಪಿಸಿದೆ. ಯೋಗದಿಂದ ಮಾನಸಿಕ ನೆಮ್ಮದಿ, ಸದೃಢ, ಆರೋಗ್ಯವಂತ ದೇಹವನ್ನು ಹೊಂದಬಹುದಾಗಿದೆ ಎಂದರು.

ಇಂದಿನ ವೇಗದ ಜೀವನದಲ್ಲಿ ಜನತೆ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಆಗುತ್ತಿಲ್ಲ. ಹೀಗಾಗಿ ಒಟ್ಟಾರೆ ಜೀವನಶೈಲಿಯ ಮೇಲೆ ಬಹಳಷ್ಟು ದುಷ್ಪರಿಣಾಮವಾಗಿದೆ. ಹಾಳಾದ ಜೀವನ ಕ್ರಮದಿಂದ ತಾರುಣ್ಯದಲ್ಲೇ ಕೆಲವರಿಗೆ ಮಧುಮೇಹ, ಬೊಜ್ಜು ಆವರಿಸುತ್ತಿವೆ. ಇಂಥ ಒತ್ತಡದ ಜೀವನಶೈಲಿಯಲ್ಲಿ ಫಿಟ್ನೆಸ್ ಕಾಪಾಡಲು, ದೇಹಕ್ಕೆ ಚೈತನ್ಯ ನೀಡಲು ಹಾಗೂ ತನ್ನನ್ನು ತಾನು ಸಾಕ್ಷಾತ್ಕಾರ ಮಾಡಿಕೊಳ್ಳಲು ಯೋಗ ತುಂಬಾನೇ ಸಹಕಾರಿಯಾಗಿದೆ ಎಂದರು.

ಪಿಆರ್‌ಎಂ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಕೆ.ಎನ್.ಸೌಮ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮೂಗೂರಿನ ದೇಶೇಶ್ವರ ಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕ ಜಿ.ಎಸ್.ಅಜಯ್ ಶಾಸ್ತ್ರಿ, ವಿಶ್ವ ಚೇತನ ಸಂಸ್ಕೃತ ಪಾಠಶಾಲೆಯ ಪ್ರಾಂಶುಪಾಲ ಡಾ. ಸಿ.ಹೆಚ್.ಗುರುರಾಜರಾವ್, ಅಮೃತ ಯೋಗಿ ಅಂತರರಾಷ್ಟ್ರೀಯ ಯೋಗ ಪ್ರತಿಷ್ಠಾನದ ಅಧ್ಯಕ್ಷ ಅಮೃತ ಯೋಗಿ, ಸಮಾಜ ಸೇವಕ ಕೆ.ಎನ್. ಪ್ರಭುಸ್ವಾಮಿ, ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಪ್ರಕಾಶ್, ಕ್ಷೇತ್ರ ಬಿಜೆಪಿ ಅಧ್ಯಕ್ಷ ಸತ್ಯಪ್ಪ, ಪೂಜಿತ್ ಮೆಡಿಕಲ್ ಕುಮಾರ್, ಯುವಿಕ್ ಜೋಶ್ ತಂಡದ ಸಂಚಾಲಕ ವಿ.ಶ್ರೀನಿವಾಸ್, ಕನ್ನಡ ಸಹಾಯಕ ಪ್ರಾಧ್ಯಾಪಕ ಎಂ.ನಾಗರಾಜು, ಉಪನ್ಯಾಸಕರಾದ ಎಸ್.ಸಿದ್ದೇಶ್, ಮಹಾದೇವಸ್ವಾಮಿ, ಹರೀಶ್, ಬಸವಣ್ಣ, ರಾಘವೇಂದ್ರ, ಸೋಮು, ದೈಹಿಕ ಶಿಕ್ಷಕ ಪ್ರಕಾಶ್ ಸೇರಿದಂತೆ ಮತ್ತಿತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು: ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ವತಿಯಿಂದ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗ ಜನಾಂಗದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ಶೇ.95ಕ್ಕಿಂತ ಅಧಿಕ, ಪಿಯುಸಿಯಲ್ಲಿ ಶೇ.93ಕ್ಕಿಂತ ಅಧಿಕ ಅಂಕಗಳಿಸಿದ ಮತ್ತು ಸರ್ಕಾರಿ ಶಾಲೆಯಲ್ಲಿ ಶೇ.85ಕ್ಕಿಂತ ಅಧಿಕ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಜೂ.27ರಂದು ಮೈಸೂರಲ್ಲಿ ನಡೆಯಲಿರುವ ಕೆಂಪೇಗೌಡರ 516ನೇ ಜಯಂತಿಯಂದು ಪುರಸ್ಕಾರ ನೀಡಲಾಗುವುದು. ಆಸಕ್ತರು ಅಂಕಪಟ್ಟಿ ಜೆರಾಕ್ಸ್ ಪ್ರತಿ, ಆಧಾರ್ ಕಾರ್ಡ್ ಪ್ರತಿ, ಜಾತಿ ಪ್ರಮಾಣ ಪತ್ರದ ಪ್ರತಿ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಜೂ.24ರೊಳಗೆ ವಿದ್ಯಾರಣ್ಯಪುರಂನಲ್ಲಿರುವ ಒಕ್ಕಲಿಗರ ಸಮುದಾಯದ ಸಂಘದ ಕಚೇರಿಗೆ ತಲುಪಿಸಬೇಕು.

ನಾಳೆ ಜಗಜ್ಯೋತಿ ಬಸವೇಶ್ವರರ ಜಯಂತಿ ಮಹೋತ್ಸವ

ಸರಗೂರು: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸರಗೂರು ತಾಲೂಕು ಘಟಕದಿಂದ ಜೂ.23ರಂದು ಪಟ್ಟಣದ ವಿವೇಕಾನಂದ ಆಸ್ಪತ್ರೆ ಸಮೀಪವಿರುವ ವೀರಶೈವ ಲಿಂಗಾಯತ ಸಮಾಜದ ನಿವೇಶನದಲ್ಲಿ ಬಸವೇಶ್ವರರ ಜಯಂತಿ ಮಹೋತ್ಸವ, ಮಹಾಸಭಾದ ನೂತನ ಕಚೇರಿ ಕಟ್ಟಡ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿದೆ ಎಂದು ಮಹಾಸಭಾದ ಸರಗೂರು ತಾಲೂಕು ಅಧ್ಯಕ್ಷ ಕೆ.ಎಂ.ವೀರಭದ್ರಪ್ಪ ತಿಳಿಸಿದರು.



ಪೂರ್ವಭಾವಿ ಸಭೆಯಲ್ಲಿ ತಾಲೂಕು ಅಧ್ಯಕ್ಷ ಕೆ.ಎಂ.ವೀರಭದ್ರಪ್ಪ ಮಾತನಾಡಿದರು.

ಪಟ್ಟಣದಲ್ಲಿರುವ ವಿವೇಕಾನಂದ ಆಸ್ಪತ್ರೆ ಸಮೀಪದ ವೀರಶೈವ ಲಿಂಗಾಯತ ಸಮಾಜದ ನಿವೇಶನದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ನೂತನ ಕಚೇರಿಯಲ್ಲಿ ನಡೆದ ಬಸವ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8 ಗಂಟೆಗೆ ಬಿಡಗಲು ಪಡುವಲು ಶ್ರೀ ವಿರಕ್ತಮಠದ ಮಹಾದೇವಸ್ವಾಮೀಜಿ ಷಟ್ ಸ್ಥಲ ಧ್ವಜಾರೋಹಣ ನೆರವೇರಿಸುವರು. ಮಹಾಸಭಾದ ಗೌರವಾಧ್ಯಕ್ಷರಾದ ಹಂಚೀಪುರ ಮಠದ ಚನ್ನಬಸವಸ್ವಾಮೀಜಿ, ದಡದಹಳ್ಳಿ ಮಠದ ಷಡಕ್ಷರಿ ಸ್ವಾಮೀಜಿ ಬಸವೇಶ್ವರ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡುವರು. ವಿವಿಧ ಮಠಾಧೀಶರು ಆಶೀರ್ವಚನ ನೀಡಲಿದ್ದಾರೆ ಎಂದು ಹೇಳಿದರು.

ಧಾರ್ಮಿಕ ಸಭೆ: ಮಧ್ಯಾಹ್ನ 12ಗಂಟೆಗೆ ಶುರುವಾಗುವ ಧಾರ್ಮಿಕ ಸಭೆಯ ದಿವ್ಯ ಸಾನಿಧ್ಯವನ್ನು ಸುತ್ತೂರು ಶ್ರೀ ಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ವಹಿಸುವರು. ತ್ರಿವಿಧ ದಾಸೋಹದ ಶ್ರೀ ಗುರು ಮಲ್ಲೇಶ್ವರ ಮಹಾ ಸಂಸ್ಥಾನ ಮಠ ಮಹಾಂತ ಸ್ವಾಮೀಜಿ, ಗಾವಡಗೆರೆ ನಟರಾಜು ಮಹಾಸ್ವಾಮೀಜಿ ಉಪಸ್ಥಿತರಿರುವರು.

ಧಾರ್ಮಿಕ ಸಭೆಯನ್ನು ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, ಅರಣ್ಯ ಸಚಿವ ಈಶ್ವರ್ ಖಂಡ್ರೆ ಕಾರ್ಯಕ್ರಮವನ್ನು ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಹಾಸಭಾದ ನೂತನ ಕಚೇರಿ ಕಟ್ಟಡ ಉದ್ಘಾಟನೆ ನೆರವೇರಿಸುವರು. ಶಾಸಕ ಅನಿಲ್ ಚಿಕ್ಕಮಾದು ಬಸವೇಶ್ವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದು, ಮಹಾಸಭಾ ಅಧ್ಯಕ್ಷ ಕೆ.ಎಸ್.ವೀರಭದ್ರಪ್ಪ ಅಧ್ಯಕ್ಷತೆ ವಹಿಸುವರು. ಮಹಾಸಭಾದ ರಾಜ್ಯ ಅಧ್ಯಕ್ಷ ಶಂಕರ ಮಹದೇವ ಬಿದರಿ ಪ್ರತಿಭಾ ಪುರಸ್ಕಾರ ವಿತರಿಸುವರು ಎಂದರು.

ಸಭೆಯಲ್ಲಿ ಮಹಾಸಭಾ ಉಪಾಧ್ಯಕ್ಷ ಡಿ.ಸಿ.ಸಿದ್ದಪ್ಪ, ಪ್ರಧಾನ ಕಾರ್ಯದರ್ಶಿ ಮನುಗನಹಳ್ಳಿ ಗುರುಸ್ವಾಮಿ, ಕಾರ್ಯದರ್ಶಿಗಳಾದ ಎಂ.ಎನ್.ಬಸವರಾಜು, ಜಯಕುಮಾರ್, ಬಸವ ಬಳಗ ಅಧ್ಯಕ್ಷ ಹಂಚೀಪುರ ಗಣಪತಿ, ಯುವ ಸಮಿತಿ ಅಧ್ಯಕ್ಷ ಪಿ.ನಂದೀಶ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಎಲ್ಲೆಡೆ ಕಲಾಮಂದಿರ ನಿರ್ಮಿಸಿ ರಂಗ ಕಲೆ ಪ್ರೋತ್ಸಾಹಿಸಬೇಕು

ತಿ.ನರಸೀಪುರ, ಜೂ.21–ದೇಸಿ ಕಲೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಟ್ಟದಲ್ಲಿ ಆಗಬೇಕು. ಕಲೆಯ ಮೂಲಕ ಕಲಾವಿದರಿಗೂ ಪ್ರೋತ್ಸಾಹ, ಪ್ರಚಾರ ಸಿಗುತ್ತದೆ. ಇಲ್ಲವಾದರೆ ದೇಸಿ ಕಲೆ ನಶಿಸಿ ಹೋಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದ ಪುರಸಭೆ ಸದಸ್ಯ ಹಾಗೂ ಚಲನ ಚಿತ್ರ ನಟ ಅರ್ಜುನ್ ರಮೇಶ್ ಪ್ರತಿ ತಾಲೂಕಿನಲ್ಲೊಂದು ಕಲಾ ಮಂದಿರ ಕಟ್ಟಿಸಿ ರಂಗ ಕಲೆಯನ್ನು ಪ್ರೋತ್ಸಾಹಿಸಬೇಕು ಎಂದರು.

ತಾಲೂಕಿನ ತುಂಬಲ ಗ್ರಾಮದ ರೆಸಾರ್ಟ್‌ವೊಂದರಲ್ಲಿ ಕನ್ನಡ ರಕ್ಷಣಾ ವೇದಿಕೆಯ ಜಿಲ್ಲಾ ಉಪಾಧ್ಯಕ್ಷ ಕೆ.ರಾಚು ಆಯೋಜಿಸಿದ್ದ ವಿವಿಧ ರಂಗಗಳಲ್ಲಿ ಸಾಧನೆಗೈದ ಕಲಾವಿದರನ್ನು ಸನ್ಮಾನಿಸಿ ಅವರು ಮಾತನಾಡಿದರು.



ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು.

ಸಾಮಾಜಿಕ ಮೌಲ್ಯಗಳು, ನಾಡಿನ ಸಂಸ್ಕೃತಿಯ ಪ್ರತಿಬಿಂಬ ರಂಗಕಲೆಯಾಗಿದೆ. ಸರ್ಕಾರ ಕಲಾವಿದರಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಕಾಲಕಾಲಕ್ಕೆ ಒದಗಿಸಬೇಕು. ಪ್ರತಿ ತಾಲೂಕಿನಲ್ಲೊಂದು ಕಲಾ ಮಂದಿರ ಕಟ್ಟಿಸುವ ಮೂಲಕ ರಂಗಕಲೆಯನ್ನು ಪ್ರೋತ್ಸಾಹಿಸಿ, ನಾಡಿನ ಕಲಾ ಸಂಪತ್ತನ್ನು ಉಳಿಸಿ ಬೆಳಸಬೇಕಿದೆ ಎಂದರು. ತಾಲೂಕಿನಲ್ಲಿ ನೂರಾರು ಹಿರಿಯ ಕಲಾವಿದರಿದ್ದು, ಅವರು ಮಾಸಾಶನದಿಂದ ವಂಚಿತರಾಗಿ ಜೀವನ ನಡೆಸಲಾಗದೇ ಸಂಕಷ್ಟದಲ್ಲಿದ್ದಾರೆ. ಸರ್ಕಾರ ಹಿರಿಯ ಕಲಾವಿದರನ್ನು ಗುರುತಿಸಿ ಅಗತ್ಯ ಮಾಸಾಸನ ನೀಡುವ ಮೂಲಕ ಕಲಾವಿದರಿಗೆ ನೆರವಿಗೆ ಬರಬೇಕು ಎಂದರು.

ಕನ್ನಡ ರಕ್ಷಣಾ ವೇದಿಕೆಯ ಜಿಲ್ಲಾ ಉಪಾಧ್ಯಕ್ಷ ರಾಚು ಮಾತನಾಡಿ ತಬಲ ವಾದಕರಂತೆ ತಾಲೂಕಿನಲ್ಲಿ ಅನೇಕ ಪ್ರತಿಭೆಗಳು ಎಲೆ ಮರೆ ಕಾಯಿಯಂತೆ ಇದ್ದಾರೆ. ಅವರನ್ನು ಗುರುತಿಸುವ ಮೂಲಕ ನೈತಿಕ ಸ್ಥೈರ್ಯ ತುಂಬಿದಲ್ಲಿ ಅವರು ಮತ್ತಷ್ಟು ಸಾಧನೆ ಮಾಡಲು ಸಾಧ್ಯವಾಗಲಿದೆ. ತಾಲೂಕಿನ ಕೆಲ ಕಲಾವಿದರನ್ನು ಗುರುತಿಸಿ ಸನ್ಮಾನಿಸುವ ಕೆಲಸ ಮಾಡಲಾಗಿದ್ದು ಮುಂದಿನ ವರ್ಷದಿಂದ ಮತ್ತಷ್ಟು ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ತಾಲೂಕಿನಲ್ಲಿ ಬೆಳಕಿಗೆ ಬಾರದೆ ಇರುವ ಪ್ರತಿಭೆಗಳನ್ನು ಗುರುತಿಸಿ ಅವರ ಬೆಳವಣಿಗೆಗೆ ಸಣ್ಣ ಸಹಾಯ ಮಾಡುವ ಯೋಜನೆ ಹಮ್ಮಿಕೊಳ್ಳಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ತಬಲಾ ಮೇಕರ್ ಎಂ.ಮೂರ್ತಿ, ತಬಲಾ ವಾದಕ ರಾಚಪ್ಪ, ತಬಲ ಮತ್ತು ತಾಳವಾದ್ಯದ ಎಂ.ಮಹದೇವಸ್ವಾಮಿ, ಸಮಾಜ ಸೇವಕ ಮಾಜ್ ಹಾಗು ಮಿಷನ್ ಆಸ್ಪತ್ರೆಯ ನಿವೃತ್ತ ವಾರ್ಡ್ ಬಾಯ್ ಪುಟ್ಟ ಸುಂದರರವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ನಂಜನಗೂಡಿನಲ್ಲಿ ವೈಭವದ ಹನುಮ ಜಯಂತಿ



ನಂಜನಗೂಡಿನಲ್ಲಿ ಶನಿವಾರ ನಡೆದ ಹನುಮ ಜಯಂತಿ ಮೆರವಣಿಗೆಯನ್ನು ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮುಂಭಾಗ ಚಾಲನೆ ನೀಡಲಾಯಿತು.

ಮೆರವಣಿಗೆಗೆ ಮೆರುಗು ನೀಡಿದ ನಂದಿ ಕಂಬ, ಕಂಸಾಳೆ, ಪಟ ಕುಣಿತ, ಡೊಳ್ಳು, ಮಂಗಳವಾದ್ಯ, ಕೇರಳ ಚಂಡೆ, ಪುತ್ತೂರು ವಾದ್ಯ

ನಂಜನಗೂಡು: ಶ್ರೀ ವೀರಾಂಜನೇಯ ಧರ್ಮ ಜಾಗೃತಿ ಬಳಗದಿಂದ ಶನಿವಾರ ನಗರದಲ್ಲಿ ಆಯೋಜಿಸಿದ್ದ ಹನುಮ ಜಯಂತಿ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು. ಮಧ್ಯಾಹ್ನ ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮುಂಭಾಗದಲ್ಲಿ ಆಂಜನೇಯ ಮೂರ್ತಿಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಹೈಕೋರ್ಟ್ ನ್ಯಾಯವಾದಿ ಅರುಣ್ ಶ್ಯಾಂಜೀ ಶೋಭಾಯಾತ್ರೆಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅಯೋಧ್ಯೆ ರಾಮ ಮಂದಿರದಲ್ಲಿ ರಾಮನ ಮೂರ್ತಿ ನಿರ್ಮಾಣಕ್ಕೆ ಶಿಲೆ ನೀಡಿರುವ ಹಾರೋಹಳ್ಳಿ ರಾಮದಾಸ್, ಗುರು ಕಂಬಳೀಶ್ವರ ಮಠದ ಶ್ರೀ ಚೆನ್ನಬಸವಸ್ವಾಮೀಜಿ, ಜೆಡಿಎಸ್ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಇನ್ನು ಹನುಮ ಜಯಂತಿ ಪ್ರಯುಕ್ತ ನಂದಿ ಕುಬ, ಕುಸಾಳೆ, ಪಟ ಕುಣಿತ, ಡೊಳ್ಳು ಮಂಗಳವಾದ್ಯ, ಕೇರಳ ಚಂಡೆ, ಪುತ್ತೂರು ವಾದ್ಯ ಮೇಳ ಹಾಗೂ ಕೇರಳ ಮೂಲದ 30ಕ್ಕೂ ಹೆಚ್ಚು ಕಲಾ ತಂಡ ಗಳವರು



ಮೆರವಣಿಗೆಯಲ್ಲಿ ಕಲಾ ಪ್ರದರ್ಶನ ನೀಡುವ ಮೂಲಕ ಶೋಭಾ ಯಾತ್ರೆಯ ಮೆರಗು ಹೆಚ್ಚಿಸಿದರು. ಮೆರವಣಿಗೆಯಲ್ಲಿ ತೆರೆದ ವಾಹನದಲ್ಲಿ ಪ್ರತಿಷ್ಠಾಪಿಸಿದ್ದ ಹನುಮಂತನ ಮೂರ್ತಿಗೆ ಭಕ್ತರು ಪೂಜೆ ಸಲ್ಲಿಸಿದರು.

ಇದರೊಂದಿಗೆ ಅಲಂಕೃತ ಟ್ರಾಕ್ಟರ್‌ನಲ್ಲಿ ಓಂಕಾರದ ಮುಂಭಾಗದಲ್ಲಿ ಪ್ರಷ್ಠಾಪಿಸಿದ್ದ ಆಂಜನೇಯ ಹಾಗೂ ಬೃಹತ್ ಕ್ರೇನ್‌ನಲ್ಲಿ ಪ್ರತಿಷ್ಠಾಪಿಸಿದ್ದ ಚಲಿಸುವ ರಾಮನ ಮೂರ್ತಿಯ ವಿಗ್ರಹಗಳು ಜನರ ಗಮನ ಸೆಳೆದವು. ಮೆರವಣಿಗೆ ಸಾಗುವ ಮಾರ್ಗದುದ್ದಕ್ಕೂ ರಸ್ತೆಯ ಎರಡೂ ಬದಿಯಲ್ಲಿ ಕಿಕ್ಕಿರಿದು ಜನರು ನಿಂತಿದ್ದರು. ವಿಶೇಷವಾಗಿ ಯುವ ಜನರು ಕಲಾ ತಂಡಗಳ ವಾದ್ಯಕ್ಕೆ ಕುಣಿದು ಕುಪ್ಪಳಿಸುವ ಮೂಲಕ ಸಂಭ್ರಮಿಸಿದರು.

ನಗರದ ರಾಷ್ಟ್ರಪತಿ ರಸ್ತೆ, ಎಂಜಿಎಸ್ ರಸ್ತೆ, ಬಜಾರ್ ರಸ್ತೆಯಲ್ಲಿ ಸಾಗಿದ ಮೆರವಣಿಗೆ ರಾತ್ರಿ ದೇವಾಲಯದ ಮುಂಭಾಗದಲ್ಲಿ ಅಂತ್ಯಗೊಂಡಿತು. ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ಎಎಸ್ಪಿ, ಡಿವೈಎಸ್ಪಿ ಸೇರಿದಂತೆ 700 ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಗಳು ಬಂದೋಬಸ್ತ್ ನೋಡಿಕೊಂಡರು.

ಹುಣಸೂರು ಶಾಲೆಯಲ್ಲಿ ಯೋಗ ದಿನ ಆಚರಣೆ



ಹುಣಸೂರು, ಜೂ.21– ನಗರದ ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯಲ್ಲಿ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು. 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ತಮ್ಮಯ್ಯ ಅವರು ಉದ್ಘಾಟಿಸಿ ಮಾತನಾಡಿ ಯೋಗದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

ಸಂಸ್ಥೆಯ ಸಂಸ್ಥಾಪಕ ನಿರ್ದೇಶಕರಾದ ನವೀನ್ ರೈ ಪ್ರಸ್ತುತ ಪ್ರತಿಯೊಬ್ಬ ವ್ಯಕ್ತಿಯ ಜೀವನಶೈಲಿ ಆಹಾರ ಪದ್ಧತಿಯಿಂದ ಹಿಡಿದು ದಿನನಿತ್ಯ ವ್ಯಾಯಾಮ ಹಾಗೂ ದೇಹದಂಡನೆ ಆರೋಗ್ಯವನ್ನು ಕಾಪಾಡಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಮಂಜುನಾಥ ಆರ್‌ಎನ್ ಅವರು ಮಾತನಾಡಿ 2015ರಿಂದ ಪ್ರಾರಂಭವಾದ ಅಂತರಾಷ್ಟ್ರೀಯ ಯೋಗ ದಿನಾಚರಣೆ ವಿಶ್ವದಾದ್ಯಂತ ಮನ್ನಣೆಯನ್ನು ಪಡೆದಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಮಂಜುನಾಥ ಎಂ.ಟಿ, ಪ್ರಾಂಶುಪಾಲರಾದ ಜಗದೀಶ್, ಉಪಮುಖ್ಯ ಶಿಕ್ಷಕರಾದ ಶಶಿಕಲಾ.ಎಸ್.ಎನ್ ಹಾಗೂ ಎಲ್ಲಾ ಶಿಕ್ಷಕರು ಭಾಗವಹಿಸಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ವಿದ್ಯಾರ್ಥಿಗಳು ಯೋಗದ ಭಂಗಿಗಳನ್ನು ನೃತ್ಯದ ಮೂಲಕ ಪ್ರದರ್ಶನ ಮಾಡಿದರು.

ಕಲಾ ಮನೋಭಾವ ಮೈಗೂಡಿಸಿಕೊಂಡರೆ ಮನುಷ್ಯ ಕ್ರೂರತ್ವದಿಂದ ಮುಕ್ತ

ಮೈಸೂರಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ಅಹಲ್ಯ ಅಭಿಪ್ರಾಯ

ಮೈಸೂರು, ಜೂ.21(ಬಿಎಲ್‌ಯು)– ಮನಸ್ಸಿನಲ್ಲಿ ಮೃದು ಸ್ವಭಾವವನ್ನು ಮೈಗೂಡಿಸುವ ಕಲಾ ಮನೋಭಾವ ಇಲ್ಲದ ಕಾರಣ ಮನುಷ್ಯ ಅಪರಾಧ ಕೃತ್ಯ ಎಸಗುವ ಕ್ರೂರತ್ವ ಗುಣಗಳನ್ನು ಬೆಳೆಸಿಕೊಳ್ಳುತ್ತಿದ್ದಾನೆ ಎಂದು ಬೆಂಗಳೂರಿನ ಕರ್ನಾಟಕ ಸಂಸ್ಕೃತಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್. ಅಹಲ್ಯ ಆತಂಕ ವ್ಯಕ್ತಪಡಿಸಿದರು.

ಮೈಸೂರಿನ ಲಕ್ಷ್ಮಿಪುರಂನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಇಂದು ವಿಶ್ವ ರಂಗಭೂಮಿ, ನೃತ್ಯ ಮತ್ತು ಸಂಗೀತ ದಿನದ ಪ್ರಯುಕ್ತ ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಧ್ವನಿಯಿಂದ ಲಿಪಿಗೆ, ಲಯದಿಂದ ರಸಕ್ಕೆ ಸಾಂಸ್ಕೃತಿಕ ಅಸ್ಮಿತೆ ಮತ್ತು ಶಿಕ್ಷಣದಲ್ಲಿ ದೇಸಿ ಸಂಗೀತ, ಪ್ರದರ್ಶನ ಕಲೆಗಳು ಹಾಗೂ ಸಂಸ್ಕೃತ ಪರಂಪರೆಗಳ ವಿಚಾರ ಕುರಿತು ಮಾತನಾಡಿದರು.

ಇತ್ತೀಚೆಗೆ ಮೇಘಾಲಯದಲ್ಲಿ ಮಧುಚಂದ್ರಕ್ಕೆ ಹೋಗಿದ್ದ ವೇಳೆ ಪತಿಯನ್ನು ಪತ್ನಿ ಕೊಂದ ಘಟನೆ ನಡೆಯಿತು. ಸಮಾಜದಲ್ಲಿ ಇಂತಹ ಆಗು ಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮೃದು ಸ್ವಭಾವ ಉಂಟು ಮಾಡುವ ಕಲಾ ಮನೋಭಾವ ಇಲ್ಲದಿರುವುದೇ ಇಂತಹ ಅಪರಾಧ ಕೃತ್ಯಗಳಿಗೆ ಕಾರಣವಾಗಿರುತ್ತದೆ ಎಂದು ಡಾ. ಅಹಲ್ಯ ಹೇಳಿದರು.

ಯೋಗ ಮತ್ತು ಸಂಗೀತ ಮನುಷ್ಯನ ಮೃದು ಸ್ವಭಾವ ಇಮ್ಮಡಿಗೊಳಿಸುತ್ತದೆ. ಈ ಹಿನ್ನೆಲೆ ಪ್ರತಿಯೊಬ್ಬರು ಯಾವುದಾದರೊಂದು ಕಲಾ ಪ್ರಕಾರಗಳನ್ನು ಅನುಸರಿಸಿದರೆ ಮೃದುತ್ವ ಬೆಳವಣಿಗೆಯಾಗಿ ಕ್ರೂರತ್ವ ದೂರವಾಗುತ್ತದೆ ಎಂದು ಹೇಳಿದರು.



ಮೈಸೂರಿನ ಲಕ್ಷ್ಮಿಪುರಂನ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಶನಿವಾರ ವಿಶ್ವ ರಂಗಭೂಮಿ, ನೃತ್ಯ ಮತ್ತು ಸಂಗೀತ ದಿನದ ಪ್ರಯುಕ್ತ ಆಯೋಜಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಬೆಂಗಳೂರಿನ ಕರ್ನಾಟಕ ಸಂಸ್ಕೃತಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್. ಅಹಲ್ಯ ಉದ್ಘಾಟಿಸಿದರು.

ಇಂದು ವಿಶ್ವ ಸಂಗೀತ ದಿನಾಚರಣೆ ಹಾಗೂ ವಿಶ್ವ ಯೋಗ ದಿನಾಚರಣೆಯಾಗಿದ್ದು, ವಿಶ್ವದ 190 ರಾಷ್ಟ್ರಗಳಲ್ಲಿ ಇಂದು ಯೋಗ ದಿನಾಚರಣೆ ಆಚರಿಸಿವೆ. ಹಾಗೆಯೇ 170 ರಾಷ್ಟ್ರಗಳು ವಿಶ್ವ ಸಂಗೀತ ದಿನಾಚರಣೆ ಕಾರ್ಯಕ್ರಮ ರೂಪಿಸಿವೆ ಎಂದರು.

ವಿಶ್ವವನ್ನು ಆಕರ್ಷಿಸುತ್ತಿರುವ ಯೋಗ ಕಲಿಕೆಯಲ್ಲಿ ಮೂರು ಬಿಲಿಯನ್ ಡಾಲರ್ ವಹಿವಾಟು ನಡೆದಿದೆ. ಈ ಮೂಲಕ ಯೋಗ ದಿನ ಕಳೆದಂತೆ ತನ್ನ ಮಹತ್ವ ಹೆಚ್ಚಿಸಿಕೊಳ್ಳುತ್ತಿದೆ ಎಂದು ತಿಳಿಸಿದರು.

ಎಲ್ಲಾ ರೀತಿಯ ಸಾಹಿತ್ಯ ಪ್ರಕಾರಗಳಿಗೆ ಸಂಸ್ಕೃತ ಮೂಲವಾಗಿದೆ. ಭಾರತದ ಪರಂಪರೆಯ ಅಸ್ಮಿತೆಯಾದ ಸಂಸ್ಕೃತ ದೇಶದ ಪ್ರತಿಯೊಂದು ಭಾಷೆಯಲ್ಲಿ ಮಿಳಿತವಾಗಿದೆ ಎಂದು ಡಾ.ಅಹಲ್ಯ ಹೇಳಿದರು.

ಭರತ ಭೂಮಿಯಲ್ಲಿ ನಾಟ್ಯ ಕಲೆಗೆ ಐತಿಹಾಸಿಕ ಮಹತ್ವವಿದೆ. ನಾಲ್ಕು ವೇದಗಳಲ್ಲಿ ನಾಟ್ಯದ ಉಲ್ಲೇಖವಿದೆ. ಭಾರತದ ಇತಿಹಾಸದ ಪರಂಪರೆಯಲ್ಲಿ ನಾಟ್ಯ ಶಾಸ್ತ್ರ ಪ್ರಾಮುಖ್ಯತೆ ಪಡೆದಿದೆ ಎಂದು ಹೇಳಿದರು.

ನಾಟಕದ ನಿಜವಾದ ಹೆಸರು ರೂಪಕ. ನಾಟಕ ಪರಂಪರೆ ಗಟ್ಟಿಯಾಗಿ ನಿಂತು ಹಲವು ಸಂದೇಶ ಸಾರುತ್ತಿದೆ. ರಾಮಾಯಣ, ಮಹಾಭಾರತ, ಬುದ್ಧ ಚರಿತೆಯಲ್ಲಿ ಹಲವು ನಾಟಕ ಪ್ರದರ್ಶನಗೊಳ್ಳುತ್ತಿದೆ. ನಾಟಕದಲ್ಲಿನ ನಾಯಕನ ಪಾತ್ರವನ್ನು ಜನರು ಮಾದರಿಯಾಗಿ ಪರಿಗಣಿಸುತ್ತಾರೆ. ದೃಶ್ಯ ಶ್ರಾವ್ಯಕ್ಕಿರುವ ಶಕ್ತಿ ಬೇರೆ ಯಾವುದಕ್ಕೂ ಇಲ್ಲ ಎಂಬುದನ್ನು ಇದು ಸಾರಿ ಹೇಳುತ್ತದೆ. ಅಲ್ಲದೆ ಅಭಿನಯ ಭಾಷೆಗೆ ಇರುವ ಶಕ್ತಿಯನ್ನು ಇದು ತೋರಿಸುತ್ತದೆ. ಒಟ್ಟಾರೆ ನಾಟಕ ಮತ್ತೆ ಪುನರುತ್ಥಾನಗೊಳ್ಳುತ್ತಿದ್ದು, ನಾಟಕ ಕಲೆ ಶ್ರೀಮಂತಗೊಳ್ಳುತ್ತಿದೆ ಎಂದು ಡಾ.ಅಹಲ್ಯ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾನಿಲಯದ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ, ಕುಲಸಚಿವ ಪ್ರೊ.ಎಂ.ಜಿ. ಮಂಜುನಾಥ್, ಖ್ಯಾತ ಕಲಾ ಇತಿಹಾರಕಾರರಾದ ಪ್ರೊ.ಚೂಡಾಮಣಿ ನಂದಗೋಪಾಲ್, ನಿವೃತ್ತ ಪ್ರಾಧ್ಯಾಪಕ ಪ್ರೊ. ಸುಧೀಂದ್ರ ಶರ್ಮ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡಿಎನ್‌ಎ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕುಬೇರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಕುಬೇರಾ (ತೆ)	4 ಪ್ರದರ್ಶನಗಳು
ಸಂಗಂ	
ಕುಬೇರನ್(ತ) + ಕುಬೇರಾ (ಕ)	2+2 ಪ್ರದರ್ಶನಗಳು
ಲಿಡೋ	
ಕುಲದಲ್ಲಿ ಕೀಳಾವುದೋ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಬುಲೆಟ್ (ಕ) + ಭಗೀರಥ (ಕ)	3+1 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮುಕ್ತ ವಿವಿಯಲ್ಲಿ ಯುಜಿಸಿ– ನೆಟ್, ಕೆ–ಸೆಟ್ ಪರೀಕ್ಷೆಗಳಿಗೆ ತರಬೇತಿ

ಮೈಸೂರು, ಜೂ.21(ಬಿಎಲ್‌ಯು)– ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಯುಜಿಸಿ– ನೆಟ್ ಮತ್ತು ಕೆ–ಸೆಟ್ ಪರೀಕ್ಷೆಗಳಿಗೆ 45 ದಿನಗಳ ತರಬೇತಿ ನೀಡಲಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ರಾಜ್ಯ ಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆ–ಸೆಟ್), ನವದೆಹಲಿಯ ವಿಶ್ವ ವಿದ್ಯಾನಿಲಯದ ಧನ ಸಹಾಯ ಆಯೋಗದವರು ನಡೆಸುವ ರಾಷ್ಟ್ರ ಮಟ್ಟದ ಕಾಲೇಜು ಸಹಾಯಕ ಪ್ರಾಧ್ಯಾಪಕರ (ಯುಜಿಸಿ– ನೆಟ್) ಪರೀಕ್ಷೆ ಮತ್ತು ಕಿರಿಯ ಶಿಷ್ಯ ವೇತನ ಸಂಶೋಧನಾ ಸಹಾಯಕರ (ಜೆಆರ್ ಎಫ್) ಪರೀಕ್ಷೆಗಳಿಗೆ 45 ದಿನಗಳ ತರಬೇತಿ ನೀಡಲಾಗುತ್ತದೆ.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿಯಲ್ಲಿ ತರಬೇತಿ ನೀಡಲಿದ್ದು, ಆಸಕ್ತರು ಜೂನ್ 30ರೊಳಗೆ ಬೆಳಿಗ್ಗೆ 10 ರಿಂದ 4.30 ಗಂಟೆ ಒಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಲು ದೂರವಾಣಿ ಸಂಖ್ಯೆ 0821– 2515944ಗೆ ಸಂಪರ್ಕಿಸಬಹುದು ಎಂದು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್ ತಿಳಿಸಿದ್ದಾರೆ.

ಏರ್ ಇಂಡಿಯಾಗೆ ಮತ್ತೊಂದು ಸಂಕಷ್ಟ; ಡಿಜಿಸಿಎ ಶೋಕಾಸ್ ನೋಟಿಸ್!



ದೆಹಲಿ: ವಿಮಾನಯಾನ ಸುರಕ್ಷತಾ ಕಾವಲು ಸಂಸ್ಥೆ ಡಿಜಿಸಿಎ, ಸಿಬ್ಬಂದಿಗೆ ವಿಮಾನ ಕರ್ತವ್ಯ ಸಮಯ ಮಿತಿಗಳನ್ನು (ಎಫ್‌ಡಿಟಿಎಲ್) ಉಲ್ಲಂಘಿಸಿದ್ದಕ್ಕಾಗಿ ಟಾಟಾ ಗ್ರೂಪ್ ಒಡೆತನದ ಏರ್ ಇಂಡಿಯಾಗೆ ಶೋಕಾಸ್ ನೋಟಿಸ್ ಜಾರಿ ಮಾಡಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ಮೇ 16 ಮತ್ತು 17 ರಂದು ವಿಮಾನಯಾನ ಸಂಸ್ಥೆಯ ಬೆಂಗಳೂರು–ಲಂಡನ್ ವಿಮಾನಗಳ ಸ್ಪಾಟ್ ಚೆಕ್‌ಗಳ ಸಮಯದಲ್ಲಿ ಈ ಉಲ್ಲಂಘನೆಗಳು ಕಂಡು ಬಂದಿದ್ದು, ಅಲ್ಲಿ ಎಫ್‌ಡಿಟಿಎಲ್‌ನಲ್ಲಿ 10–ಗಂಟೆಗಳ ಮಿತಿಯನ್ನು ಮೀರಿದೆ ಎಂದು ಸೂಚನೆ ತಿಳಿಸಿದೆ.

ಸ್ಪಾಟ್ ಚೆಕ್ ಸಮಯದಲ್ಲಿ, ಏರ್ ಇಂಡಿಯಾದ ಅಕೌಂಟೆಬಲ್ ಮ್ಯಾನೇಜರ್ 16 ಮೇ 2025 ಮತ್ತು 17 ಮೇ 2025 ರಂದು ಬೆಂಗಳೂರಿನಿಂದ ಲಂಡನ್‌ಗೆ (AI133) ಎರಡು ವಿಮಾನಗಳನ್ನು ನಿರ್ವಹಿಸಿದ್ದಾರೆ ಎಂದು ಗಮನಿಸಲಾಗಿದೆ, ಇವೆರಡೂ ನಿಗದಿತ ಹಾರಾಟದ ಸಮಯ ಮಿತಿಯನ್ನು 10 ಗಂಟೆಗಳ ಮೀರಿದೆ ಎಂದು ನಾಗರಿಕ ವಿಮಾನಯಾನ ಅವಶ್ಯಕತೆಯ ಉಲ್ಲಂಘನೆಯನ್ನು ಉಲ್ಲೇಖಿಸಿ ಡಿಜಿಸಿಎ ನೋಟಿಸ್‌ನಲ್ಲಿ ತಿಳಿಸಿದೆ.

ಸೂಚನೆಯ ಕುರಿತು ಏರ್ ಇಂಡಿಯಾದಿಂದ ಪ್ರತಿಕ್ರಿಯೆಗಳನ್ನು ನಿರೀಕ್ಷಿಸಲಾಗಿದೆ. ಏರ್ ಇಂಡಿಯಾ ಲಿಮಿಟೆಡ್‌ನ ಅಕೌಂಟೆಬಲ್ ಮ್ಯಾನೇಜರ್ ನಿಬಂಧನೆಗಳು ಮತ್ತು ಅನುಸರಣೆ ಅಗತ್ಯತೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ವಿಫಲರಾಗಿದ್ದಾರೆ ಎಂದು ನಿಯಂತ್ರಕರು ನೋಟಿಸ್‌ನಲ್ಲಿ ತಿಳಿಸಿದ್ದಾರೆ. ಈ ಉಲ್ಲಂಘನೆಗಳಿಗೆ ಸೂಚನೆಯ ಪ್ರಕಾರ ಕ್ರಮ ಕೈಗೊಳ್ಳಬಾರದು ಎಂದು ಏಳು ದಿನಗಳಲ್ಲಿ ವಿವರಿಸಲು ಡಿಜಿಸಿಎ ಏರ್ ಇಂಡಿಯಾವನ್ನು ಕೇಳಿದೆ.

ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜೂ.21– ಜೂನ್ 23 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನಿರ್ವಹಣಾ ಕೆಲಸದ ನಿಮಿತ್ತ ಆಟೋಮೋಟಿವ್ ಆಕ್ಸಿಲ್ ಸುತ್ತಮುತ್ತ, ರಾಣೆ ಮದ್ರಾಸ್ ಪಕ್ಕದ ರಸ್ತೆ, ಹೆಚ್.ಟಿ.ರೆಕೆಟ್ ಬೆನ್‌ಸರ್, ಕೂರ್ಗಳ್ಳಿ ಕೈಗಾರಿಕಾ ಪ್ರದೇಶ, ಹೂಟಗಳ್ಳಿ ಕೈಗಾರಿಕಾ ಪ್ರದೇಶ, ಹಳೇ ಲೂನಾರ್ಸ್, ತಿಯೋರೆಮ್ಸ್, ಸ್ಪೆಕ್ಟ್ರಾ ಪೈಪ್ಸ್, ವರ್ಷ ಕೇಬಲ್, ಎಲ್& ಟಿ, ವಿಪ್ರೋ ಲೈಟ್ಸ್, ಶ್ರೀರಾಮ್ ಇಂಜಿನಿಯರ್ಸ್, ರಜತ್ ಬ್ಯಾಟರಿ, ಆರ್.ಪಿ.ಜಿ ಕೇಬಲ್, ಜಿಮ್‌ಕೋ, ಸ್ಕೈ ಎಂಪ್ರೋ ಕಾಂಕ್ರಿಟ್, ಡ್ಯಾಮ್‌ಡನ್ ಆಪಾರ್ಟ್‌ಮೆಂಟ್, ಹಿನಕಲ್ ಆಶ್ರಯ ಯೋಜನೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಜನತಾ ದರ್ಶನ ಮುಂದೂಡಿಕೆ

ಮೈಸೂರು, ಜೂ.21(ಬಿಎಲ್‌ಯು)– ಜಿಲ್ಲಾಧಿಕಾರಿಗಳು ನಡೆಸುವ ಮೈಸೂರು ಜಿಲ್ಲಾ ಮಟ್ಟದ ಜನತಾ ದರ್ಶನವನ್ನು ಜೂನ್ 25ರ ಬದಲು ಜುಲೈ 4ಕ್ಕೆ ಮುಂದೂಡಲಾಗಿದೆ. ಸಾರ್ವಜನಿಕರು ಜುಲೈ 4 ರಂದು ಜನತಾ ದರ್ಶನದಲ್ಲಿ ಪಾಲ್ಗೊಂಡು ತಮ್ಮ ಅಹವಾಲು ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದ್ದಾರೆ.

ಕೆಪಿಎಸ್, ಪಿಎಂಶ್ರೀ ಶಾಲೆಗಳಿಗೆ ಮಕ್ಕಳ ದಾಖಲಾತಿ ಹೆಚ್ಚಳ

> ಮೈಸೂರಿನಲ್ಲಿ 13 ಕೆಪಿಎಸ್ ಶಾಲೆಗಳೂ ಸೇರಿದಂತೆ ಒಟ್ಟು 150 ದ್ವಿ ಭಾಷಾ ಶಾಲೆಗಳು ಆರಂಭವಾಗಿವೆ. ಈ ಶಾಲೆಗಳಲ್ಲಿ ಎಲ್ಲಾ ವಿಷಯಗಳಿಗೂ ಖಾಯಂ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕಾಯಂ ಶಿಕ್ಷಕರ ಇಲ್ಲದ ಕಡೆ ಅತಿಥಿ ಶಿಕ್ಷಕರನ್ನು ನೇಮಿಸಿ, ಜಿಲ್ಲೆಯಲ್ಲಿ ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ.
>
> – ಶೋಭಾ, ಶಿಕ್ಷಣಾಧಿಕಾರಿ (ಆಡಳಿತ), ಡಿಡಿಪಿಐ ಕಚೇರಿ, ಮೈಸೂರು ಶಾಲಾ ಶಿಕ್ಷಣ ಇಲಾಖೆ ಕಚೇರಿ

> ಕೆಪಿಎಸ್ ಮತ್ತು ದ್ವಿಭಾಷಾ ಶಾಲೆಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಇದರಲ್ಲಿ ಗರಿಷ್ಠ ಮೊತ್ತ ಬಳಕೆ ಮಾಡಿಕೊಂಡು ಹೆಚ್ಚಿನ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ ಹಾಗೂ ಸಂವಿಧಾನದ ಬಾಧ್ಯತೆಯನ್ನು ಹೊಂದಿರುತ್ತದೆ.
>
> – ವೈ.ಸಿ.ರವಿಕುಮಾರ್, ಅಧೀನ ಕಾರ್ಯದರ್ಶಿ(ಯೋಜನೆ) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಮೈಸೂರು, ಜೂ.21(ಎಸ್‌ಪಿಎನ್)– ಕರ್ನಾಟಕ ಪಬ್ಲಿಕ್ ಶಾಲೆ (ಕೆಪಿಎಸ್), ಬೆಂಗಳೂರು ಪಬ್ಲಿಕ್ ಶಾಲೆ(ಬಿಪಿಎಸ್) ಹಾಗೂ ಪಿಎಂಶ್ರೀ ಶಾಲೆಗಳಲ್ಲಿನ ದ್ವಿ–ಭಾಷಾ ಮಾಧ್ಯಮ ತರಗತಿಗಳಿಗೆ ಮಕ್ಕಳ ದಾಖಲಾತಿಯನ್ನು ಗರಿಷ್ಟ ಮಿತಿಗೆ ಹೆಚ್ಚಳ ಮಾಡಿ ಶಾಲಾ ಶಿಕ್ಷಾ ಇಲಾಖೆ ಆದೇಶಿಸಿದೆ.

ಪೂರ್ವ ಪ್ರಾಥಮಿಕ ವಿಭಾಗದಲ್ಲಿ ಪ್ರತಿ ತರಗತಿಗೆ ಗರಿಷ್ಠ 40 ಮಕ್ಕಳು, ಪ್ರಾಥಮಿಕ ಶಾಲೆಗಳಲ್ಲಿ (1–7ನೇ ತರಗತಿ) ಗರಿಷ್ಟ 50 ಹಾಗೂ ಪ್ರೌಢಶಾಲೆಗಳಲ್ಲಿ (8–10ನೇ ತರಗತಿ) ಗರಿಷ್ಠ 50 ಮಕ್ಕಳನ್ನು ದಾಖಲಿಸಿಕೊಳ್ಳಬಹುದು. ಈ ಮೊದಲು ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ತರಗತಿಗಳ ಗರಿಷ್ಟ ದಾಖಲಾತಿ ಮಿತಿ 30 ವಿದ್ಯಾರ್ಥಿಗಳಿಗೆ ಸೀಮಿತವಾಗಿತ್ತು.

ಪೂರ್ವ ಪ್ರಾಥಮಿಕ ತರಗತಿಯಲ್ಲಿ ಒಬ್ಬ ಶಿಕ್ಷಕರ ಜತೆಗೆ, ಒಬ್ಬ ಸಹಾಯಕಿ (ಆಯಾ) ಕೂಡ ಕಡ್ಡಾಯವಾಗಿ ಇರಬೇಕು. ಶಾಲಾ ಆವರಣದಲ್ಲಿ ಲಭ್ಯವಿರುವ ಕಟ್ಟಡಗಳು, ಸಂಪನ್ಮೂಲಗಳನ್ನು ಬಳಸಿಕೊಂಡು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ(ಎಸ್‌ಡಿಎಂಸಿ)ಗಳು, ಶಿಕ್ಷಕರು ಮಕ್ಕಳ ದಾಖಲಾತಿ ಹೆಚ್ಚಳಕ್ಕೆ ಶ್ರಮಿಸಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಅಧೀನ ಕಾರ್ಯದರ್ಶಿ (ಯೋಜನೆ) ವೈ.ಸಿ.ರವಿಕುಮಾರ್ ಆದೇಶಿಸಿದ್ದಾರೆ.

ರಾಜ್ಯದಲ್ಲಿ 2017–18ನೇ ಸಾಲಿನಿಂದ 2024–25ನೇ ಸಾಲಿನವರೆಗೆ ಹಂತ–ಹಂತವಾಗಿ 308 ಕೆಪಿಎಸ್ ಶಾಲೆಗಳನ್ನು ರಾಜ್ಯದಲ್ಲಿ ಆರಂಭಿಸಲಾಗಿದೆ. ಈ ಶಾಲೆಯಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು, ಹಾಗೂ ಈಗಾಗಲೇ ನಡೆಯುತ್ತಿರುವ ಕನ್ನಡ ಮತ್ತು ಇತರೆ ಮಾಧ್ಯಮದ ತರಗತಿಗಳೊಂದಿಗೆ ಒಂದನೇ ತರಗತಿಯಿಂದ ದ್ವಿ–ಭಾಷಾ ಮಾಧ್ಯಮ ತರಗಳನ್ನು ಪ್ರಾರಂಭ ಮಾಡಲಾಗಿತ್ತು.

ಕೇಂದ್ರ ಸರ್ಕಾರ ಕೇಂದ್ರೀಯ ವಿದ್ಯಾಲಯ ಮತ್ತು ನವೋದಯ ಶಾಲೆಗಳು ಈ ರೀತಿ ಹೆಚ್ಚಿನ ಮಕ್ಕಳ ದಾಖಲಾತಿಗೆ ಅವಕಾಶ ಕಲ್ಪಿಸಿ ಯಶಸ್ಸು ಹೊಂದಿವೆ. ಅದೇ ರೀತಿ ಕೆಪಿಎಸ್ ಮತ್ತು ಆಂಗ್ಲ ಮಾಧ್ಯಮ ತರಗತಿಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಾದ ಹಿನ್ನೆಲೆಯಲ್ಲಿ ಎಸ್‌ಡಿಎಂಸಿ, ಪೋಷಕರು ಹಾಗೂ ಜನಪ್ರತಿನಿಧಿಗಳ ಬೇಡಿಕೆಯನುಸಾರ ಸದರಿ ಕೆಪಿಎಸ್‌ಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಯಿಂದ 10ನೇ ತರಗತಿಯವರೆಗೆ, ತರಗತಿವಾರು ಪೂರ್ವ ಪ್ರಾಥಮಿಕ ಶಾಲೆ 40, ಪ್ರಾಥಮಿಕ ಶಾಲೆ 50, ಪ್ರೌಢಶಾಲೆ 50 ವಿದ್ಯಾರ್ಥಿಗಳ ದಾಖಲಾತಿಗೆ ಹೆಚ್ಚಳ ಮಾಡಿ ಆದೇಶಿಸಿದ್ದಾರೆ.

ಸಾಲ ಮರು ಪಾವತಿಗೆ ಬಜಾಜ್ ಮೈಕ್ರೊ ಫೈನಾನ್ಸ್ ಮ್ಯಾನೇಜರ್ ಕಿರುಕುಳ

ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಜೂ.21(ಬಿಎಲ್‌ಯು)– ಒಂದು ತಿಂಗಳ ಸಾಲದ ಕಂತು ಪಾವತಿಸದ ಕಾರಣ ಸಾಲ ಪಡೆದ ಕುಟುಂಬಕ್ಕೆ ಕಿರುಕುಳ ನೀಡಿರುವ ಮೈಸೂರಿನ ತಿ.ನರಸೀಪುರದ ಬಜಾಜ್ ಮೈಕ್ರೊ ಫೈನಾನ್ಸ್ ಮ್ಯಾನೇಜರ್ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಸಂಬಂಧ ತಿ.ನರಸೀಪುರ ತಾಲೂಕು ಜಾಲಹಳ್ಳಿ ಗ್ರಾಮದ ಮಂಗಳಮ್ಮ ಎಂಬುವರ ಮಗ ನವೀನ್ ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ಬೆಳಕವಾಡಿ ಪೊಲೀಸ್ ಠಾಣೆಯಲ್ಲಿ ಬಜಾಜ್ ಮೈಕ್ರೊ ಫೈನಾನ್ಸ್ ಮ್ಯಾನೇಜರ್ ಅಜಿತ್ ಎಂಬುವರ ವಿರುದ್ಧ ದೂರು ದಾಖಲಿಸಿದ್ದಾರೆ.

ನನ್ನ ತಾಯಿ ಮಂಗಳಮ್ಮ ಅವರು 2024 ನೇ ಸಾಲಿನಲ್ಲಿ ಬಜಾಜ್ ಮೈಕ್ರೋ ಫೈನಾನ್ಸ್‌ನಲ್ಲಿ 40 ಸಾವಿರ ರೂಪಾಯಿ ಸಾಲ ಪಡೆದು ಪ್ರತಿ ತಿಂಗಳು 2,200 ಕಂತಿನ ಹಣ ಪಾವತಿ ಮಾಡುತ್ತಿದ್ದರು. 12 ತಿಂಗಳ ಕಂತು ಪಾವತಿಸಿ 13 ನೇ ತಿಂಗಳ ಕಂತು ಪಾವತಿಸದ ಹಿನ್ನೆಲೆ ಬಜಾಜ್ ಮೈಕ್ರೊ ಫೈನಾನ್ಸ್ ನ ಮ್ಯಾನೇಜರ್ ಅಜೀತ್ ಅವರು ನನಗೆ ಫೋನ್ ಕರೆ ಮಾಡಿ ಸಾಲ ತೀರಿಸುವಂತೆ ಹೇಳಿದ್ದರು.

ಜೂನ್ 16 ರಂದು ನಾನು ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ಪೂರಿಗಾಲಿ ಗ್ರಾಮದ ನನ್ನ ಪತ್ನಿ ಅಕ್ಕ ಶೋಭಾ ಅವರ ಮನೆಗೆ ಹೋಗಿದ್ದೆ. ನಾನು ಕೆಲಸದ ನಿಮಿತ್ತ ಮೈಸೂರಿಗೆ ಬಂದಿದ್ದೆ. ನನ್ನ ಪತ್ನಿ ಪ್ರಮೀಳ ಕೆಲಸಕ್ಕೆ ಕಾರ್ಖಾನೆಗೆ ಹೋಗಿದ್ದರು.

ನನ್ನ ಅತ್ತಿಗೆ ಮನೆಗೆ ಹೋದ ಬಜಾಜ್ ಮೈಕ್ರೊ ಫೈನಾನ್ಸ್‌ನ ಮ್ಯಾನೇಜರ್ ಅಜಿತ್, ನನ್ನ ಪುತ್ರಿ ದೀಕ್ಷಾಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದಾರೆ. ತರುವಾಯ ದೀಕ್ಷಾ ಹಾಗೂ ಪಕ್ಕದ ಮನೆಯ ಸಿದ್ದರಾಜು ಇಬ್ಬರನ್ನು ನನ್ನ ಪತ್ನಿ ಪ್ರಮೀಳಾ ಕೆಲಸ ಮಾಡುವ ಕಾರ್ಖಾನೆ ಬಳಿ ಕರೆದುಕೊಂಡು ಹೋಗಿದ್ದಾರೆ. ಆದರೆ ಕಾರ್ಖಾನೆಯವರು ಒಳಗೆ ಬಿಡದ ಕಾರಣ ಆ ಇಬ್ಬರನ್ನು ನನ್ನ ಅತ್ತಿಗೆ ಮನೆಗೆ ಬಿಟ್ಟು ಹೇಗಿದ್ದಾರೆ. ಒಂದು ತಿಂಗಳ ಕಂತು ಪಾವತಿ ಮಾಡಿಲ್ಲವೆಂದು ಅಜಿತ್ ನಮ್ಮ ಅನುಮತಿ ಪಡೆಯದೆ ನನ್ನ ಮಗಳು ಹಾಗೂ ಪಕ್ಕದ ಮನೆ ಹುಡುಗನನ್ನು ಕರೆದುಕೊಂಡು ಹೋಗಿದ್ದಾರೆ. ಈ ವಿಚಾರವಾಗಿ ಮೈಸೂರಿನ ಸಿದ್ಧಾರ್ಥನಗರದ ಮಕ್ಕಳ ಕಲ್ಯಾಣ ಸಮಿತಿಯವರು ನನ್ನ ಮಗಳಿಗೆ ಕೌನ್ಸೆಲಿಂಗ್ ಮಾಡಿದ್ದಾರೆ.

ಸಾಲ ಮರು ಪಾವತಿ ಮಾಡದ ಕಾರಣಕ್ಕೆ ಅಜಿತ್ ಅವರಿಂದ ನಮ್ಮ ಕುಟುಂಬಕ್ಕೆ ತೊಂದರೆಯಾಗಿದ್ದು, ಇವರ ವಿರುದ್ಧ ಕ್ರಮ ಕೈಗೊಳ್ಳುವಂತೆ ನವೀನ್, ಬೆಳಕವಾಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ರೈಲ್ವೆ ಹಳಿ ಮೇಲೆ ಬಿದ್ದ ಬಂಡೆ

ಸಕಲೇಶಪುರ–ಸುಬ್ರಹ್ಮಣ್ಯ ರೈಲು ಸೇವೆಯಲ್ಲಿ ವ್ಯತ್ಯಯ



ಮಂಗಳೂರು, ಜೂ.21– ದಕ್ಷಿಣ ಕನ್ನಡ ಜಿಲ್ಲೆಯ ಯಡಕುಮೇರಿ ಮತ್ತು ಶಿರಿಬಾಗಿಲು ನಿಲ್ದಾಣಗಳ ನಡುವೆ ರೈಲ್ವೆ ಹಳಿ ಮೇಲೆ ಬಂಡೆಗಳು ಉರುಳಿಬಿದ್ದ ಪರಿಣಾಮ ಸಕಲೇಶಪುರ–ಸುಬ್ರಹ್ಮಣ್ಯ ಮಾರ್ಗದಲ್ಲಿ ರೈಲು ಕಾರ್ಯಾಚರಣೆಯನ್ನು ಶನಿವಾರ ಮುಂಜಾನೆ ಸ್ಥಗಿತಗೊಳಿಸಲಾಯಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬೆಟ್ಟದಿಂದ ಬಂಡೆಗಳು ಜಾರಿ ಸರಕು ರೈಲುಗಳು ಬಳಸುವ ರೈಲ್ವೆ ಹಳಿಯ ಮೇಲೆ ಬಿದ್ದ ಕಾರಣ ರೈಲು ಸೇವೆಗಳಲ್ಲಿ ವ್ಯತ್ಯಯ ಉಂಟಾಗಿದೆ ಎಂದು ಅವರು ಹೇಳಿದರು.

ಅಧಿಕಾರಿಗಳ ಪ್ರಕಾರ, ರೈಲು ಸಂಖ್ಯೆ 16511 ಕೆಎಸ್‌ಆರ್ ಬೆಂಗಳೂರು–ಕಣ್ಣೂರು ಎಕ್ಸ್‌ಪ್ರೆಸ್ ಬೆಳಿಗ್ಗೆ 3.40ಕ್ಕೆ ಕಡಗರವಳ್ಳಿಗೆ ಆಗಮಿಸಿತು ಮತ್ತು ಅಡಚಣೆಯಿಂದಾಗಿ ಹೊರಡುವಲ್ಲಿ ವಿಳಂಬವಾಯಿತು.

ಅದೇ ರೀತಿ, ಬೆಳಿಗ್ಗೆ 3.10ಕ್ಕೆ ಸಕಲೇಶಪುರ ತಲುಪಿದ ರೈಲು ಸಂಖ್ಯೆ 16585 ಎಸ್‌ಎಂವಿಟಿ ಬೆಂಗಳೂರು–ಮುರ್ಡೇಶ್ವರ ಎಕ್ಸ್‌ಪ್ರೆಸ್ ಮತ್ತು ಬೆಳಿಗ್ಗೆ 6.26ಕ್ಕೆ ಆಗಮಿಸಿದ ರೈಲು ಸಂಖ್ಯೆ 07377 ವಿಜಯಪುರ–ಮಂಗಳೂರು ಸೆಂಟ್ರಲ್ ಎಕ್ಸ್‌ಪ್ರೆಸ್ ವಿಶೇಷ ರೈಲು ಸಹ ವಿಳಂಬವಾಯಿತು. ರೈಲ್ವೆ ಅಧಿಕಾರಿಗಳು ತೊಂದರೆಗೊಳಗಾದ ರೈಲುಗಳಲ್ಲಿನ ಪ್ರಯಾಣಿಕರಿಗೆ ಕುಡಿಯುವ ನೀರು, ಲಘು ಉಪಾಹಾರ ಮತ್ತು ಚಹಾ ವ್ಯವಸ್ಥೆ ಮಾಡಿದರು ಎಂದು ಅಧಿಕೃತ ಹೇಳಿಕೆ ತಿಳಿಸಿದೆ.

ಪ್ರಯಾಣಿಕರು NTES ಅಥವಾ Where is My Train' ಮೊಬೈಲ್ ಅಪ್ಲಿಕೇಶನ್‌ಗಳನ್ನು ಬಳಸಿ ತಮ್ಮ ರೈಲುಗಳ ರಿಯಲ್–ಟೈಂ ನವೀಕರಣಗಳನ್ನು ಟ್ರ್ಯಾಕ್ ಮಾಡಲು ಸೂಚಿಸಲಾಗಿದೆ.

ತುರ್ತು ಸಂದರ್ಭಗಳಲ್ಲಿ ಎಕ್ಸ್ ಮೂಲಕವೂ @RailwaySeva ಗೆ ಸಂಪರ್ಕಿಸಬಹುದು ಅಥವಾ ಸಹಾಯವಾಣಿ ಸಂಖ್ಯೆ 139 ಗೆ ಕರೆ ಮಾಡಬಹುದು ಎಂದು ಹುಬ್ಬಳ್ಳಿಯ ನೈರುತ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಂಜುನಾಥ್ ಕನಮಡಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹಳಿಗೆ ಬಿದ್ದಿದ್ದ ಬಂಡೆ ಮತ್ತು ಮಣ್ಣನ್ನು ತೆರವುಗೊಳಿಸಲಾಗಿದೆ. ರೈಲುಗಳು ಬೆಳಗ್ಗೆ 9 ಗಂಟೆ 10 ನಿಮಿಷದ ಬಳಿಕ ಈ ಹಳಿಯಲ್ಲಿ 20 ಕಿ.ಮೀ. ವೇಗದಲ್ಲಿ ಸಂಚರಿಸಲು ಅನುವು ಮಾಡಿಕೊಡಲಾಗಿದೆ ಎಂದು ತಿಳಿಸಿದ್ದಾರೆ.

ಮಹಿಳೆಯರ ಮೇಲೆ ದೌರ್ಜನ್ಯ ಎಸಗುವ ಪುರುಷ ಪ್ರಧಾನ ಧೋರಣೆ ಹಿಮ್ಮೆಟ್ಟಿಸಬೇಕು

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಉಪಾಧ್ಯಕ್ಷೆ ಡಾ.ಸುಧಾ ಕಾಮತ್ ಕರೆ

ಮೈಸೂರು, ಜೂ.21(ಬಿಎಲ್‌ಯು)– ಗರ್ಭದಿಂದ ಹಿಡಿದು ಸಾಯುವ ತನಕ ಹೆಣ್ಣು ನಿರಂತರ ದೌರ್ಜನ್ಯ ಎದುರಿಸುತ್ತಿದ್ದು, ಮಹಿಳಾ ಸಮೂಹಕ್ಕೆ ಕಿರುಕುಳ ನೀಡುವ ಪುರುಷ ಪ್ರಧಾನ ಧೋರಣೆಯನ್ನು ಹಿಮ್ಮೆಟ್ಟಿಸಿ ಮುನ್ನಡೆಯಬೇಕು ಎಂದು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಉಪಾಧ್ಯಕ್ಷೆ ಡಾ.ಸುಧಾ ಕಾಮತ್ ಕರೆ ನೀಡಿದರು.

ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಇಂದು ನಡೆದ ಎಐಎಂಎಸ್‌ಎಸ್ ನ ಎರಡು ದಿನಗಳ ಮಹಿಳಾ ಕಾರ್ಯಕರ್ತೆಯರ ಶಿಬಿರದಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಸ್ತ್ರೀ ಭ್ರೂಣ ಹತ್ಯೆ, ಬಾಲ್ಯವಿವಾಹ ಪ್ರಕರಣಗಳು ಮಿತಿ ಮೀರುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು.

ಅಪ್ರಾಪ್ತ ಮಕ್ಕಳು ಗರ್ಭಧರಿಸುತ್ತಿದ್ದು, ಆರ್ಥಿಕವಾಗಿ ಸದೃಢವಾಗದ ಅವರಿಗೆ ಕುಟುಂಬ ನಿರ್ವಹಣೆಯ ಜವಾಬ್ದಾರಿ ಹೊರೆಸುತ್ತಾರೆ. ಇದರಿಂದ ಅವರ ಸಾಮಾಜಿಕ ಬೆಳವಣಿಗೆ ಕುಂಠಿತಗೊಳ್ಳುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.



ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಶನಿವಾರ ನಡೆದ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಶಿಬಿರದಲ್ಲಿ ಮಹಿಳೆಯರು ಒಗ್ಗಟ್ಟು ಪ್ರದರ್ಶಿಸಿದರು.

ಹೆಣ್ಣೆಂದರೆ ತಾತ್ಸಾರದಿಂದ ಕಾಣುವ ಈ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಮಗುವನ್ನು ತಾಯಿ ಗರ್ಭದಲ್ಲಿ ಇರುವಾಗಲೇ ಚಿವುಟಿ ಹಾಕಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಸಮೂಹ ಪುರುಷ ಪ್ರಧಾನ ಸಮಾಜದ ಧೋರಣೆಗಳನ್ನು ಹಿಮ್ಮೆಟ್ಟಿಸಬೇಕು. ಇದಕ್ಕಾಗಿ ವೈಚಾರಿಕ ಗುಣ ಮೈಗೂಡಿಸಿಕೊಂಡು ಸಾಮಾಜಿಕ ಹಾಗೂ ಮಾನಸಿಕವಾಗಿ ಸದೃಢವಾಗಬೇಕು ಎಂದು ಡಾ.ಸುಧಾ ಕಾಮತ್ ಕಿವಿಮಾತು ಹೇಳಿದರು.

ಇದೇ ವೇಳೆ ಮಾತನಾಡಿದ ಸಂಘಟನೆಯ ರಾಜ್ಯಾಧ್ಯಕ್ಷೆ ಎಂ.ಎನ್.ಮಂಜುಳಾ, ಕಠಿಣ ಕಾನೂನು ಜಾರಿಗೊಂಡಿದ್ದರೂ ಬಾಲ್ಯ ವಿವಾಹ ಪ್ರಕರಣಗಳು ಹೆಚ್ಚಾಗುತ್ತಿದೆ. ಶಕ್ತಿ ಸೌಧ ವಿಧಾನಸೌಧದಲ್ಲಿ ಆಳ್ವಿಕೆ ನಡೆಸುತ್ತಿರುವವರಿಗೆ ಇದರ ತೀವ್ರತೆ ಅರ್ಥವಾಗುತ್ತಿಲ್ಲ. ಸರ್ಕಾರಗಳ 'ಬೇಟಿ ಬಚಾವೊ, ಬೇಟಿ ಪಢಾವೊ' ಎಂಬುದು ಘೋಷಣೆಗೆ ಮಾತ್ರ ಸೀಮಿತವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹೆಣ್ಣು ಸಂತತಿ ವಿರೋಧಿಸುವ ಈ ಸಮಾಜದಲ್ಲಿ ನಾವು ಬದುಕುತ್ತಿದ್ದೇವೆ. ಹೆಣ್ಣು ಹುಟ್ಟಿದ ಮೇಲೆ ಅವಳು ಗೌರವಯುತ ಜೀವನ ರೂಪಿಸಿಕೊಳ್ಳುವುದು ದೊಡ್ಡ ಸವಾಲಿನ ಸಂಗತಿಯಾಗಿದೆ. ಈ ಮೂಲಕ ಹೆಣ್ಣು ಪ್ರತಿ ಹಂತದಲ್ಲೂ ಹೆಣಗಾಡುವ ಪರಿಸ್ಥಿತಿ ಎದುರಾಗಿದೆ ಇಂತಹ ಸಮಸ್ಯೆಗಳಿಗೆ ಸರ್ಕಾರ ಪರಿಹಾರ ಸೂತ್ರ ರೂಪಿಸುವ ತನಕ ಮಹಿಳೆಯರು ಒಗ್ಗಟ್ಟು ಪ್ರದರ್ಶಿಸಬೇಕು. ಇದಕ್ಕಾಗಿ ಮಹಿಳಾ ಸಮೂಹ ಸಂಘಟಿತರಾಗುವುದು ತುರ್ತು ಅಗತ್ಯ ಎಂದು ಮಂಜುಳಾ ಅಭಿಪ್ರಾಯಪಟ್ಟರು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನೂರಾರು ಮಹಿಳೆಯರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಸಂಘಟನೆಯ ರಾಜ್ಯ ಕಾರ್ಯದರ್ಶಿ ಎಸ್. ಶೋಭಾ, ಮೈಸೂರು ಜಿಲ್ಲಾಧ್ಯಕ್ಷೆ ಜಿ.ಎಸ್.ಸೀಮಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮಾಜಿ ಸಂಸದ ಪ್ರತಾಪ್‌ಸಿಂಹ ಹುಟ್ಟುಹಬ್ಬ ಅಂಗವಾಗಿ ಅಭಿಮಾನಿಗಳಿಂದ ವಿವಿಧ ಸೇವಾ ಕಾರ್ಯ

ಪ್ರತಾಪ್‌ಸಿಂಹ ಮೈಸೂರಿನ ಅಭಿವೃದ್ಧಿ ಹರಿಕಾರ

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಬಣ್ಣನೆ



ಪ್ರತಾಪ್‌ಸಿಂಹ ಅಭಿಮಾನಿ ಬಳಗದ ವತಿಯಿಂದ ಡಾ.ರಾಜ್ ಉದ್ಯಾನವನ ಮುಂಭಾಗ ಸಾರ್ವಜನಿಕರಿಗೆ ವಿವಿಧ ರೀತಿಯ ಆಯುರ್ವೇದ ಔಷಧಿ ಗಿಡಗಳನ್ನು ಉಚಿತವಾಗಿ ವಿತರಿಸಲಾಯಿತು.

ಮೈಸೂರು, ಜೂ.21– ಪ್ರತಾಪ್ ಸಿಂಹ ಅಭಿಮಾನಿ ಬಳಗದ ವತಿಯಿಂದ ಅವರ ಹುಟ್ಟುಹಬ್ಬದ ಅಂಗವಾಗಿ ಮೈಸೂರು ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ ಡಾ.ರಾಜ್ ಉದ್ಯಾನವನದ ಮುಂದೆ ಸಾರ್ವಜನಿಕರಿಗೆ ವಿವಿಧ ರೀತಿಯ ಆಯುರ್ವೇದ ಔಷಧಿ ಗಿಡಗಳನ್ನು ಉಚಿತವಾಗಿ ವಿತರಿಸಿ, ನಂತರ ಸಸಿಗಳ ನೆಡಲಾಯಿತು.

ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತ ನಿಧಿ ಕೇಂದ್ರದ ಆವರಣದಲ್ಲಿ 25 ಯುವಕರು ಸ್ವಯಂ ಪ್ರೇರಿತ ರಕ್ತದಾನ ಮಾಡಿದರು. ನಂತರ ದಿವಾನ್ಸ್ ರಸ್ತೆಯಲ್ಲಿರುವ ಅಮೃತೇಶ್ವರ ದೇವಸ್ಥಾನದಲ್ಲಿ ಮಾಜಿ ಸಂಸದ ಪ್ರತಾಪ್‌ಸಿಂಹ ಹೆಸರಿನಲ್ಲಿ ವಿಶೇಷ ಪೂಜೆ ಹಾಗೂ ಗೋಪೂಜೆ ನಂತರ ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಮಾತನಾಡಿ, ಮೈಸೂರಿಗರ ಮನಸ್ಸಲ್ಲಿ ಅಭಿವೃದ್ಧಿ ಕಾರ್ಯಗಳ ಮೂಲಕ ಅಭಿಮಾನ ಸಂಪಾದಿಸಿರುವ ಮಾದರಿ ಜನಪ್ರತಿನಿಧಿ ಪ್ರತಾಪ್‌ಸಿಂಹ. ಪಕ್ಷಾತೀತವಾಗಿ, ಜಾತ್ಯತೀತವಾಗಿ ಅಭಿವೃದ್ಧಿ ವಿಚಾರದಲ್ಲಿ ಶ್ರಮಿಸಿದ್ದಾರೆ. ಮೈಸೂರು–ಬೆಂಗಳೂರು ದಶಪಥ ರಸ್ತೆ, ವರ್ತುಲ ರಸ್ತೆ ಅಭಿವೃದ್ಧಿ, ಹೊಸ ರೈಲುಗಳನ್ನು ಮೈಸೂರಿಗೆ ತಂದದ್ದು, ವಿಮಾನ ನಿಲ್ದಾಣವನ್ನು ನವೀಕರಿಸಿ ದೇಶದೆಲ್ಲೆಡೆ ವಿಮಾನ ಹಾರಾಟಕ್ಕೆ ಯೋಜನೆ ರೂಪಿಸಿದ್ದು, ಗ್ಯಾಸ್ ಪೈಪ್‌ಲೈನ್ ಮತ್ತು ಪಾಸ್‌ಪೋರ್ಟ್ ಸೇವಾ ಕೇಂದ್ರ ಮೈಸೂರಿಗೆ ತರುವಲ್ಲಿ ಯಶಸ್ವಿಯಾದರು. ಜೊತೆಗೆ ಐಟಿ ಪಾರ್ಕ್ ನಿರ್ಮಾಣ, ಸ್ವದೇಶ್ ದರ್ಶನ್ ಪ್ರಸಾದ್ ಯೋಜನೆ ಮೂಲಕ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಶ್ರಮಿಸಿದರು. ಅವರು ಮಾಜಿ ಆದರೂ ಅದೇ ಜನಪ್ರಿಯತೆ ಮೈಸೂರಿಗರಲ್ಲಿದ್ದು, ಮುಂದಿನ ದಿನದಲ್ಲಿ ವಿಧಾನಸೌಧದಲ್ಲಿ ಪ್ರತಾಪ್ ಸಿಂಹರ ಮಾತುಗಳನ್ನು ಕೇಳುವ ಸಮಯ ಬರಲಿದೆ ಎಂದರು.

ಮಾಜಿ ಶಾಸಕರಾದ ಈ. ಮಾರುತಿರಾವ್ ಪವಾರ್, ರಾ.ಪರಮೇಶಗೌಡ, ದಿನೇಶ್‌ಗೌಡ ಮೈಸೂರು ಮತ್ತು ಚಾಮರಾಜನಗರ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಚೇತನ್, ಸಂದೇಶ್, ಟೆನ್ನಿಸ್ ಗೋಪಿ, ನಜರ್‌ಬಾದ್ ಅಭಿ, ಮಧು, ಗೋಪಾಲ್, ಎಂ.ಎನ್.ಮಂಜುನಾಥ್, ಕಿರಣ್, ಚೆಲುವ, ವಿನೋದ್, ಗುರುರಾಜ್, ರವಿ, ಜಯಸಿಂಹ, ಪ್ರಮೋದ್ ಗೌಡ, ಮಧು ಸೋಮಶೇಖರ್, ಚಂದನ್ ಗೌಡ, ಸಂದೀಪ್ ಚಂದ್ರಶೇಖರ್, ಕುಂಬಾರಕೊಪ್ಪಲು ಭೈರಪ್ಪ, ಕೊಳ್ಳೇಗಾಲದ ರಾಜಣ್ಣ, ಕೇಬಲ್ ವೆಂಕಟೇಶ್, ಶ್ರವಣ್ ಮಾಲಿ, ಸುರೇಂದ್ರ, ವೆಂಕಟೇಶ್, ದತ್ತಾತ್ರೇಯ ಸಿಂಧೆ ಇನ್ನಿತರರು ಉಪಸ್ಥಿತರಿದ್ದರು.

ಕಬಿನಿ ಜಲಾಶಯ ಸುರಕ್ಷಿತ; ಸುಭದ್ರ

ನೀರು ತೊಟ್ಟಿಕ್ಕುತ್ತಿರುವುದಕ್ಕೆ ಕಾವೇರಿ ನೀರಾವರಿ ನಿಗಮ ಸ್ಪಷ್ಟನೆ



ಬೆಂಗಳೂರು, ಜೂ.21– ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲೂಕಿನ ಕಬಿನಿ ಜಲಾಶಯ ಸುರಕ್ಷಿತವಾಗಿದೆ ಎಂದು ಕಾವೇರಿ ನೀರಾವರಿ ನಿಗಮ ಸ್ಪಷ್ಟಪಡಿಸಿದೆ.

ಕೆಲ ದೃಶ್ಯ ಮಾಧ್ಯಮಗಳಲ್ಲಿ ಕಬಿನಿ ಜಲಾಶಯದ ಬಗ್ಗೆ ಇಂದು ಪ್ರಸಾರವಾದ ಸುದ್ದಿಗೆ ಸ್ಪಷ್ಟನೆ ನೀಡಿರುವ ನಿಗಮದ ವ್ಯವಸ್ಥಾಪಕ ನಿರ್ದೇಶಕರು, ಹಳೇ ವಿಡಿಯೋವನ್ನು ಬಳಸಿಕೊಂಡು ಸಾರ್ವಜನಿಕರಲ್ಲಿ ಆತಂಕ ಉಂಟು ಮಾಡುವ ರೀತಿಯಲ್ಲಿ ಪ್ರಚುರಪಡಿಸಲಾಗಿದೆ ಎಂದು ತಿಳಿಸಿದ್ದಾರೆ.

ನಿಗಮದ ವ್ಯಾಪ್ತಿಗೆ ಒಳಪಡುವ ಕಬಿನಿ ಅಣೆಕಟ್ಟೆಯ ಸುರಕ್ಷತೆ ಬಗ್ಗೆ ಸುದ್ದಿ ವಾಹಿನಿಗಳಲ್ಲಿ ಪ್ರಚುರಪಡಿಸುತ್ತಿರುವ ಬಗ್ಗೆ ಪರಿಶೀಲಿಸಿ, ವಿಡಿಯೋ ದಾಖಲಾತಿ ಸಹಿತ ವರದಿ ನೀಡಲು ವರುಣಾ ವೃತ್ತದ ಅಧೀಕ್ಷಕ ಇಂಜಿನಿಯರ್‌ಗೆ ಸೂಚಿಸಲಾಗಿತ್ತು. ಹಾಗೆಯೇ ಪರಿಶೀಲಿಸಿ ವರದಿ ನೀಡಿದ್ದಾರೆ.

ಪ್ರಸ್ತುತ ಜಲಾಶಯ ಮಟ್ಟವು 2278 ಅಡಿಗಳಾಗಿದ್ದು, 15.80 ಟಿಎಂಸಿ ನೀರು ಸಂಗ್ರಹಣೆಯಾಗಿದೆ. ಸದ್ಯ ಬಿತ್ತರಗೊಳಿಸುತ್ತಿರುವ ವಿಡಿಯೋ ಹಲವು ವರ್ಷಗಳ ಹಿಂದಿನದಾಗಿದ್ದು, ಆ ಭಾಗದಲ್ಲಿ ಹನಿ ಹನಿಯಾಗಿ ನೀರು ತೊಟ್ಟಿಕ್ಕುತ್ತಿರುತ್ತದೆ. ಸದರಿ ಭಾಗವನ್ನು 2022ರ ಮೇ 20ರಂದು ಡ್ಯಾಂ ಸೇಫ್ಟಿ ರಿವ್ಯೂ ಟೀಂ(ಡಿಎಸ್‌ಆರ್‌ಟಿ) ಮತ್ತು 2024ರ ಆಗಸ್ಟ್ 26ರಂದು ಡ್ಯಾಂ ಸೇಫ್ಟಿ ರಿವ್ಯೂ ಪ್ಯಾನಲ್(ಡಿಎಸ್‌ಆರ್‌ಪಿ) ವತಿಯಿಂದ ಪರಿಶೀಲನೆ ನಡೆಸಲಾಗಿದೆ. ಎರಡೂ ತಂಡಗಳ ಪರಿಣತರ ಸಲಹೆಯಂತೆ ಕಾಮಗಾರಿಯನ್ನು ಯೋಜಿಸಲಾಗಿದೆ.

ಪ್ರಸ್ತುತ ಜಲಾಶಯಕ್ಕೆ ಹೊಸ ನೀರಿನ ಒಳಹರಿವು ಇರುವುದರಿಂದ ಸದರಿ ಕಾಮಗಾರಿಯನ್ನು ಅಕ್ಟೋಬರ್, ನವೆಂಬರ್‌ನಲ್ಲಿ ಪ್ರಾರಂಭಿಸಲಾಗುವುದು. ಆದರೆ ವಾಹಿನಿಗಳಲ್ಲಿ ಬಿತ್ತರವಾದಂತೆ ಎಲ್ಲಿಯೂ ನೀರು ಚಿಮ್ಮುತ್ತಿಲ್ಲ. ಹನಿಹನಿಯಾಗಿ ತೊಟ್ಟಿಕ್ಕುತ್ತಿರುವುದನ್ನು ಗಮನಿಸಲಾಗಿದೆ. ಇದರಿಂದ ಜಲಾಶಯದ ಸುರಕ್ಷತೆಗೆ ಯಾವುದೇ ರೀತಿಯ ಆತಂಕವಿರುವುದಿಲ್ಲ. ಜಲಾಶಯದ ಪುನಶ್ಚೇತನಕ್ಕೆ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರದಿಂದ ಎಲ್ಲಾ ರೀತಿಯ ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಯಾವುದೇ ರೀತಿಯಲ್ಲಿ ಆತಂಕಗೊಳ್ಳುವ ಪ್ರಮೇಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಅಪರಿಚಿತ ವೃದ್ಧ ಸಾವು

ಮೈಸೂರು, ಜೂ.21– ನಿರ್ಮಾಣ ಹಂತದ ಕಟ್ಟಡದ ವರಾಂಡದಲ್ಲಿ ಅಪರಿಚಿತ ವೃದ್ಧರೊಬ್ಬರು ಮೃತಪಟ್ಟಿರುವ ಘಟನೆ ಇಲವಾಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಇಲ್ಲಿನ ವಿನಾಯಕ ಗಾರ್ಡನ್ ಸಿಟಿ 2ನೇ ಫೇಸ್‌ನಲ್ಲಿ ನಿರ್ಮಾಣ ಹಂತದಲ್ಲಿದ್ದ ಕಟ್ಟಡಕ್ಕೆ ನೀರು ಹಾಕಲು ಸೇರಿಕೊಂಡಿದ್ದ ಪುಟ್ಟರಾಜು(60) ಅವರು, ಎರಡೂವರೆ ತಿಂಗಳು ಕೆಲಸ ಮಾಡಿಕೊಂಡಿದ್ದು, ನಂತರ ಕೆಲಸದಿಂದ ತೆಗೆದ ಬಳಿಕವೂ ಕಟ್ಟಡದ ವರಾಂಡದಲ್ಲಿ ಮಲಗುತ್ತಿದ್ದರು. ಜೂ.17ರ ರಾತ್ರಿ ಮೃತಪಟ್ಟಿದ್ದಾರೆ ಎಂದು ಕಟ್ಟಡದ ಮಾಲೀಕ ಭರತ್‌ಕುಮಾರ್ ದೂರಿನಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮೃತ ಪುಟ್ಟರಾಜು ಅವರ ವಿಳಾಸ ಮತ್ತು ವಾರಸುದಾರರು ಪತ್ತೆಯಾದಲ್ಲಿ ಜಿಲ್ಲಾ ಕಂಟ್ರೋಲ್ ರೂಂ ದೂ.ಸಂ.0821–2444800, ಇಲವಾಲ ಪೊಲೀಸ್ ಠಾಣೆ ದೂ.ಸಂ.0821–2402222, ಮೊ.ನಂ.9480805046ಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಎಂ.ಗಂಗಾಧರರವರು (ಪೇಪರ್ ಗಂಗಾ)

ಇವರು ದಿನಾಂಕ 10-06-2025ನೇ ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 22-06-2025ರ ಭಾನುವಾರ ಮಧ್ಯಾಹ್ನ 12-00ಕ್ಕೆ ಮೃತರ ಸ್ವಗೃಹ #2252/1, 8ನೇ ಕ್ರಾಸ್, ಅಶೋಕಪುರಂ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಪತ್ನಿ ಲಕ್ಷ್ಮಿ ಮತ್ತು ಕುಟುಂಬವರ್ಗದವರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಮರಮ್ಮರವರು

ಇವರು ದಿನಾಂಕ 12-06-2025ನೇ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 23-06-2025 ಸೋಮವಾರ ಮಧ್ಯಾಹ್ನ 3-00ಕ್ಕೆ ಮೃತರ ಸ್ವಗೃಹ ಟಿ.ನರಸೀಪುರ ತಾಲ್ಲೂಕು, ಹೆಳವರ ಹುಂಡಿ ಗ್ರಾಮ ಇಲ್ಲಿ ಏರ್ಪಡಿಸಿರುವು ದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಮಕ್ಕಳು. ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು ಮತ್ತು ಬಂಧು-ಮಿತ್ರರು

ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಭೂ ದಾಖಲೆಗಳ ಉಪ ನಿರ್ದೇಶಕರ ನ್ಯಾಯಾಲಯ ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಭೂಉನಿತಾಂ.ಅಪೀಲು: 133/24–25

ತಿಳುವಳಿಕೆ ಪತ್ರ

ವಿಷಯ:– ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 49(ಎ)ರ ಅಡಿಯಲ್ಲಿ ತಪ್ಪಾಗಿರುವ ಪೋಡಿ ದುರಸ್ತಿಯನ್ನು ರದ್ದು ಪಡಿಸುವ ಬಗ್ಗೆ.

ಕೆಳಕಂಡ ವಾದಿ ಮತ್ತು ಪ್ರತಿವಾದಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ ತೊರವಳ್ಳಿ ಗ್ರಾಮದ ಸ.ನಂ. 81 ರಲ್ಲಿ 1,2,3 ಮತ್ತು 4 ಎಂದು ಜಮೀನು ಪೋಡಿಯಾಗಿರುತ್ತದೆ. ಸದರಿ ಪೋಡಿಗಳು ನಮ್ಮ ಹಕ್ಕುದಾಖಲೆಯಂತೆ ಅನುಭವ ಹೊಂದಿರುವುದಿಲ್ಲ, ಆದ್ದರಿಂದ ಸದರಿ ಹಿಸ್ಸಾಗಳನ್ನು ರದ್ದುಪಡಿಸುವ ಬಗ್ಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 49(ಎ)ರ' ಅಡಿಯಲ್ಲಿ ಅರ್ಜಿದಾರರು ಸಲ್ಲಿಸಿರುವ ಮೇಲ್ಮನವಿ ಅರ್ಜಿಯನ್ನು ಪರಿಶೀಲಿಸಿದ ಸಂಬಂಧ ವಿಚಾರಣೆಯನ್ನು ದಿನಾಂಕ 03–07–2025 ರಂದು ಮಧ್ಯಾಹ್ನ 03–00 ಗಂಟೆಗೆ ಚಾಮರಾಜನಗರ, ಜಿಲ್ಲಾಧಿಕಾರಿಗಳ ಕಛೇರಿ, ಭೂಮಾಪನ ಇಲಾಖೆ, ಕೊಠಡಿ ಸಂಖ್ಯೆ 110 ರಲ್ಲಿ ನಿಗದಿಪಡಿಸಲಾಗಿರುತ್ತದೆ. ಸದರಿ ದಿನಾಂಕದಂದು ತಾವಾಗಲಿ ಅಥವಾ ತಮ್ಮ ಪರ ವಕೀಲರಾಗಲಿ ತಮ್ಮಲ್ಲಿರುವ ಅಗತ್ಯ ದಾಖಲಾತಿಗಳೊಂದಿಗೆ ಹಾಜರಾಗುವುದು. ತಪ್ಪಿದಲ್ಲಿ ಪ್ರಕರಣದಲ್ಲಿ ದೊರೆಯುವ ದಾಖಲೆಗಳ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. ತಾವುಗಳು ನ್ಯಾಯಾಲಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಸರ್ಕಾರದಿಂದ ಮಾನ್ಯತೆ ಪಡೆದಿರುವ ಯಾವುದಾದರು ಗುರುತಿನ ಚೀಟಿಯನ್ನು ತರಲು ತಿಳಿಸಿದೆ.

ವಾದಿಗಳು: ಮಂಜುನಾಥ ಬಿ., ಬಿನ್ ಬಸವೇಗೌಡ, ವಿಳಾಸ: #3833, 4M-44, ಉಮದ್ ಖಯೂಮ್ ರಸ್ತೆ, ತಿಲಕ್‌ನಗರ, ಮೈಸೂರು–570 001.

ಪ್ರತಿವಾದಿಗಳು: 1. ಭೂದಾಖಲೆಗಳ ಸಹಾಯಕ ನಿರ್ದೇಶಕರು, ಗುಂಡ್ಲುಪೇಟೆ ತಾಲ್ಲೂಕು ; 2. ತಹಶೀಲ್ದಾರ್ ಗುಂಡ್ಲುಪೇಟೆ ತಾಲ್ಲೂಕು ; 3. ಪುಟ್ಟೀಗೌಡ ಬಿನ್ ಬಸವೇಗೌಡ ; 4. ಮಿಣಕಮ್ಮ ಕೋಂ ಲೇ ಕಾಳೇಗೌಡ ; 5. ತಾಯಮ್ಮ ಬಿನ್ ನಾಗೇಶ್ ; 6. ಮಹದೇವೇಗೌಡ ಬಿನ್ ನಾಗೇಶ್ ; 7. ರಾಮೇಗೌಡ ಬಿನ್ ಕಾಳೇಗೌಡ ; 8. ಬಸವೇಗೌಡ ಬಿನ್ ಮುಗೇಗೌಡ 3 ರಿಂದ 8ರವರ ವಾಸ: ತೊರವಳ್ಳಿ ಗ್ರಾಮ, ಬೇಗೂರು ಹೋಬಳಿ, ಗುಂಡ್ಲುಪೇಟೆ ತಾಲ್ಲೂಕು.

ಸಹಿ/– ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು





ಸಾರ್ವಜನಿಕ ತಿಳುವಳಿಕೆ ನೋಟೀಸು

ನನ್ನ ಕಕ್ಷಿದಾರರಾದ ಮೈಸೂರು ಸಿಟಿ, ಗೋಕುಲ ಎಕ್ಸ್‌ಟೆನ್ಷನ್ 3ನೇ ಹಂತ, 8ನೇ ಅಡ್ಡರಸ್ತೆ, 230/ಸಿ ನೇ ನಂಬರ್ ಮನೆಯಲ್ಲಿ ವಾಸವಾಗಿರುವ ಶ್ರೀ ಗುರುವೇಗೌಡರವರ ಮಗನಾದ ಸುಮಾರು 55 ವರ್ಷ ವಯಸ್ಸುಳ್ಳ ಶ್ರೀ ಜಿ. ಪ್ರಕಾಶ್ ಆದ ನಾನು ದಿನಾಂಕ: 20–09–2002 ರಂದು ನಾಲ್ಕನೇ ಪುಸ್ತಕ, 223/2002–03ನೇ ನಂಬರಾಗಿ ನೊಂದಣಿಯಾಗಿ ಮೈಸೂರು ಉತ್ತರ ಉಪನೋಂದಣಾಧಿಕಾರಿಗಳವರ ಕಛೇರಿಯಲ್ಲಿ ನೋಂದಣಿಯಾಗಿರುವ ಜನರಲ್ ಪವರ್ ಆಫ್ ಅಟಾರ್ನಿ ಪತ್ರವನ್ನು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೋಗಾದಿ ಗ್ರಾಮ, ದೀಪಾ ನಗರದ ಮನೆ ನಂ. 58ರಲ್ಲಿ ವಾಸವಾಗಿರುವ ದಿವಂಗತ ಎಂ.ಎಸ್. ಮೋಹನ್‌ರವರ ಮಗನಾದ ಸುಮಾರು 62 ವರ್ಷ ವಯಸ್ಸುಳ್ಳ ಶ್ರೀ ಎಂ. ಶ್ರೀಕಾಂತ್ ರವರ ಹೆಸರಿಗೆ ಕೊಟ್ಟಿದ್ದುದು ಸರಿಯಷ್ಟೆ. ಸದರಿ ದಿನಾಂಕ: 20–09–2002ರ ನೊಂದಾಯಿತ ಜನರಲ್ ಪವರ್ ಆಫ್ ಅಟಾರ್ನಿ ಪತ್ರವನ್ನು ರದ್ದು ಮಾಡಿ ಈ ಬಗ್ಗೆ ವಕೀಲರ ಮುಖಾಂತರ ಶ್ರೀ ಎಂ. ಶ್ರೀಕಾಂತ್ ರವರಿಗೆ ದಿನಾಂಕ: 20–06–2025 ರಂದು ಲೀಗಲ್ ನೋಟೀಸ್ (ತಿಳುವಳಿಕೆ ನೋಟೀಸ್) ನ್ನು ನೀಡಿ ಸದರಿ ದಿನಾಂಕ: 20–09–2002ರ ನೊಂದಾಯಿತ ಜನರಲ್ ಪವರ್ ಆಫ್ ಅಟಾರ್ನಿ ಪತ್ರದ ರದ್ದತಿ ಪತ್ರದ ಮೂಲಕ ರದ್ದತಿ ಮಾಡಿರುತ್ತೇನೆ. ಆದ್ದರಿಂದ ನನ್ನ ಕಕ್ಷಿದಾರರ ಪರವಾಗಿ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿಗಳು ಯಾವುದೇ ರೀತಿಯ ವ್ಯವಹಾರವನ್ನು ಯಾವುದೇ ವ್ಯಕ್ತಿಗಳ ಜೊತೆ ಮಾಡಬಾರದು ಹಾಗೂ ಒಂದು ವೇಳೆ ಯಾವುದೇ ರೀತಿಯ ವ್ಯವಹಾರವನ್ನು ಮಾಡಿದಲ್ಲಿ ಅದು ಊರ್ಜಿತವಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್: ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಗಳ್ಳಿ ಗ್ರಾಮದ ಹಳೆ ಸರ್ವೆ ನಂ. 137, ಹೊಸ ಸರ್ವೆ ನಂ. 137/1ರಲ್ಲಿ 5 ಎಕರೆ ಜಮೀನಿಗೆ ಚಕ್ಕುಬಂಧಿ: ಪೂರ್ವಕ್ಕೆ: ಬೋಗಾದಿ ಎಲ್ಲೆ ; ಪಶ್ಚಿಮಕ್ಕೆ: ಸರ್ವೆ ನಂ. 138ರ ಜಮೀನು ; ಉತ್ತರಕ್ಕೆ: ಇದೇ ಸರ್ವೆ ನಂಬರಿನಲ್ಲಿ ಎಂ. ಶ್ರೀಕಾಂತರವರ ಜಮೀನು ಮತ್ತು ದಕ್ಷಿಣಕ್ಕೆ: ನೀರು ಹರಿಯುವ ಹಳ್ಳ.

ಸಹಿ/– ಧನಂಜಯ ಬಿ.ಸಿ., ವಕೀಲರು, ಎ.ಎಸ್.ವಿ.ಎನ್.ವಿ. ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.
Mob: 97398 86965

ಪ್ರಕಟಣೆ

ಕುಂಚಿಟಿಗರ ಸಂಘ (ರಿ.) ಮೈಸೂರು

ಕುಂಚಿಟಿಗರ ಸಂಘ (ರಿ.) ಮೈಸೂರು, ಧರ್ಮಪರಾಯಿಣಿ ಶ್ರೀಮತಿ ಆಲಮ್ಮನವರ ವಿದ್ಯಾರ್ಥಿ ನಿಲಯ, ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ ಮೈಸೂರು, ಇದರ ಕುಂಚಿಟಿಗ ಜನಾಂಗದ ಹೊರ ಊರಿನ ವಿದ್ಯಾರ್ಥಿಗಳಿಗೆ (ಪುರುಷರಿಗೆ) ವಿದ್ಯಾರ್ಥಿನಿಲಯದ ಪ್ರವೇಶಾತಿ ಪದವಿ ಮತ್ತು ಸ್ನಾತಕೋತ್ತರ ಪದವಿ 2025–26ನೇ ಸಾಲಿನ ಪ್ರವೇಶಾತಿ ಆರಂಭಗೊಳಿಸಲಾಗಿದೆ. ಅರ್ಜಿ ಪಡೆದು ಸಲ್ಲಿಸುವ ದಿನಾಂಕ: 25–06–2025 ರಿಂದ ಪ್ರವೇಶಾತಿ ಆರಂಭಗೊಳ್ಳುವುದು.

ಸಂಪರ್ಕಿಸಿ: ಕಛೇರಿ ಸಮಯ : 11.30 am ರಿಂದ 4 pm

ಕಛೇರಿ ಮೊ.ಸಂ: 9035389047 / 0821-2422973

ಇ–ಮೇಲ್: kunchitigarasangha@gmail.com

ಸಹಿ/– ಗೌ॥ ಕಾರ್ಯದರ್ಶಿ, ಕುಂಚಿಟಿಗರ ಸಂಘ (ರಿ), ಮೈಸೂರು



ಕೈಲಾಸ ಶಿವಗಣಾರಾಧನ ಆಹ್ವಾನ ಪತ್ರಿಕೆ



ಶ್ರೀ ಹೆಚ್.ಬಿ. ಶಿವಸ್ವಾಮಿರವರು

ನಿವೃತ್ತ ಸೂಪರಿಂಟೆಂಡೆಂಟ್ ಆಫ್ ಪೊಲೀಸ್

ಇವರು ದಿನಾಂಕ 13-06-2025ನೇ ಶುಕ್ರವಾರ ಲಿಂಗೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 23-06-2025ನೇ ಸೋಮವಾರ ಬೆಳಗ್ಗೆ 7-00 ಗಂಟೆಗೆ ದಿವ್ಯ ಪಾದಪೂಜೆಯೊಂದಿಗೆ ಮೃತರ ಕೈಲಾಸ ಶಿವಗಣಾರಾಧನೆ ಕಾರ್ಯವನ್ನು ಮೃತರ ಸ್ವಗೃಹ ಹಲವಾರ ಗ್ರಾಮ, ಸೋಸಲೆ ಹೋ॥ ಟಿ.ನರಸೀಪುರ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಶ್ರೀಮತಿ ದಾಕ್ಷಾಯಿಣಿ ಮತ್ತು ಬಸಪ್ಪದೇವರ ಕುಟುಂಬವಗದವರು

PUBLIC NOTICE

This is to inform the general public that Geetha Bharathi Higher Primary School, Siddharthanagar managed by GSSS(R), Mysuru will now be known by the name **GITA BHARATI SCHOOL of EXCELLENCE** with effect from 17th June 2025, as per the order issued by DDPI, Mysuru vide order no: G3/2082/SHA.HE.BA/14/2025-26 dated 17-06-25.

Sd/-
Secretary
Geetha Shishu Shikshana Sangha (R)
Siddartha Nagar, Mysuru

ಹಾಸನ ಮಹಾನಗರ ಪಾಲಿಕೆ, ಹಾಸನ. ಬಿ.ಎಂ.ರಸ್ತೆ, ಸಂತೇಪೇಟೆ ವೃತ್ತ, ಹಾಸನ–573201.

Email:commn_hassan@yahoo.com ದೂರವಾಣಿ: 08172–268276, 263033 web: http://www.hassancity.mrc.gov.in ಸಹಾಯವಾಣಿ: 233702 ಫ್ಯಾಕ್ಸ್: 234792

ಸಂ:ಹಾಮನಪಾ/ಇ.ವಿ/ಎಇ/ಟೆಂಡರ್ ಶಾಖೆ/2025–26 ದಿನಾಂಕ:20–06–2025

ಟೆಂಡರ್ ಪ್ರಕಟಣೆ : ಕೆ.ಪಿ.ಪಿ. ಪೋರ್ಟಲ್ ಮೂಲಕ :

ಹಾಸನ ನಗರಸಭೆಯ 2025–26ನೇ ಸಾಲಿನ ಹಾಸನ ಮಹಾನಗರ ಪಾಲಿಕೆ ಅನುದಾನದಡಿಯಲ್ಲಿ ಈ ಕೆಳಕಂಡ ವಿವರದ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಷರತ್ತುಗಳಿಗೊಳಪಟ್ಟು ಕೆ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಸ್ವಚ್ಚ ಭಾರತ್ ಮಿಷನ್ 2.0 ಅನುದಾನ ಕ್ರ.ಸಂ. ಕಾಮಗಾರಿ ವಿವರ: 1)DMA/2025-26/OW/WORK_INDENT42888 ದಸ್ತಾವೇಜು KW-1 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)11.80 ಇ.ಎಂ.ಡಿ. ಮೊತ್ತ 24,980.00 2024–25ನೇ ಸಾಲಿನ ಎಸ್.ಎಫ್.ಸಿ. ನಿಧಿಯ ನಗರಸಭಾ ನಿಧಿ ಶೇ.29.00 ಅನುದಾನ 2)DMA/2025-26/RD/WORK_INDENT42914 ದಸ್ತಾವೇಜು KW-2 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)24.70 ಇ.ಎಂ.ಡಿ. ಮೊತ್ತ 41,860.00 2023–24ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ 7.25 ಅನುದಾನ (7.435 ಲಕ್ಷಗಳು) ಮತ್ತು ಮಹಾನಗರ ಪಾಲಿಕೆ ಅನುದಾನ 41.065 ಲಕ್ಷಗಳು. 3)DMA/2025-26/WS/WORK_INDENT40625 ದಸ್ತಾವೇಜು KW-2 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)48.50 ಇ.ಎಂ.ಡಿ. ಮೊತ್ತ 82,200.0 2025–26ನೇ ಸಾಲಿನ ಹಾಸನ ಮಹಾನಗರ ಪಾಲಿಕೆ ಅನುದಾನ 4)DMA/2025-26/IND4852 ದಸ್ತಾವೇಜು KG-1 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)3.24 ಇ.ಎಂ.ಡಿ. ಮೊತ್ತ 8,100.00 5)DMA/2025-26/IND4853 ದಸ್ತಾವೇಜು KG-1 ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)6.00 ಇ.ಎಂ.ಡಿ. ಮೊತ್ತ 15,000.00 ಟೆಂಡರ್ ಫಾರಂ ಬೆಲೆ–ರೂ.500 ಕೆ.ಪಿ.ಪಿ. ಪೋರ್ಟಲ್‌ನಂತೆ ಕಾಲಾವಧಿ– 03 ತಿಂಗಳು (ಮಳೆಗಾಲ ಹೊರತು ಪಡಿಸಿ) 1.ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 05–07–2025 ರ ಸಂಜೆ 5.00 ಗಂಟೆಯವರೆಗೆ. 2.ಟೆಂಡರ್ ತೆರೆಯುವ ದಿನಾಂಕ: 07–07–2025ರ ಸಂಜೆ 5.20 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಕಾರಣಾಂತರಗಳಿಂದ ಯಾವುದೇ ಬದಲಾವಣೆಗಳಾದಲ್ಲಿ ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ

ಸಹಿ/–ಮಹಾ ಪೌರರು, ಹಾಸನ ಮಹಾನಗರ ಪಾಲಿಕೆ, ಹಾಸನ.

ಸಹಿ/–ಆಯುಕ್ತರು, ಹಾಸನ ಮಹಾನಗರ ಪಾಲಿಕೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/243/ಕೆಎಸ್‌ಎಂಸಿಎ/2025–26